ಸಂಪುಟ: 06 ಸಂಚಿಕೆ: 12 ಪುಟಗಳು: 08 ಶುಕ್ರವಾರ 27 ಮಾರ್ಚ್ 2026 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail. com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಇತರರ ಯೋಜನೆಯ ಮೇಲೆ ತಣ್ಣೀರೆರೆಯಬೇಡಿ, ನಿಂದನೆಯನ್ನು ಸಂಪೂರ್ಣವಾಗಿ ಪರಿತ್ಯಜಿಸಿ, ಇತರರಿಗೆ ತಿಳಿಯದಂತೆ ಅವರನ್ನು ನಿಂದಿಸುವುದು ಮಹಾ ಅಪರಾಧ ಎಂಬುದನ್ನು ತಿಳಿಯಿರಿ.

## ಎಸ್‌ಎಸ್‌ಎಲ್‌ಸಿ ಮಕ್ಕಳಿಗೆ ಹಿಂದಿ ಎಕ್ಸಾಮ್ ಮಾಡಿದ್ರೆ ಹುಷಾರ್!

• ಉದಯವಾಹಿನಿ, ಬೆಂಗಳೂರು

ಈ ವರ್ಷದ ಎಸ್‌ಎಸ್‌ಎಲ್‌ಸಿ ಹಿಂದಿ ಪರೀಕ್ಷೆ ಕುರಿತು ರಾಜ್ಯದಲ್ಲಿ ವಿವಾದ ತೀವ್ರಗೊಂಡಿದೆ. ವಿವಿಧ ಕನ್ನಡಪರ ಸಂಘಟನೆಗಳು ಪರೀಕ್ಷೆಯನ್ನು ರದ್ದು ಮಾಡುವಂತೆ ಆಗ್ರಹಿಸಿದ್ದು, ಸರ್ಕಾರದ ಮೇಲೆ ಒತ್ತಡ ಹೆಚ್ಚಿಸಿದೆ. ಮಾರ್ಚ್ 30ರಂದು ನಡೆಯಲಿರುವ ಹಿಂದಿ ಪರೀಕ್ಷೆಯ ದಿನವೇ ಪರೀಕ್ಷಾ ಕೇಂದ್ರಗಳಿಗೆ ಮುತ್ತಿಗೆ ಹಾಕುವುದಾಗಿ ಕೆಲವು ಸಂಘಟನೆಗಳು ಎಚ್ಚರಿಕೆ ನೀಡಿವೆ. ಇದರ ಹಿನ್ನೆಲೆ, ಯಾವುದೇ ಅಹಿತಕರ ಘಟನೆಗಳು ಸಂಭವಿಸದಂತೆ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲು ಶಿಕ್ಷಣ ಇಲಾಖೆ ಮುಂದಾಗಿದೆ. ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಈ ಕುರಿತು ಎಲ್ಲಾ ಜಿಲ್ಲಾ ಶಿಕ್ಷಣಾಧಿಕಾರಿಗಳಿಗೆ ಸೂಚನೆ ನೀಡಿದ್ದು, ಪರೀಕ್ಷಾ ಕೇಂದ್ರಗಳಲ್ಲಿ ಕಟ್ಟುನಿಟ್ಟಿನ ಭದ್ರತೆ ಒದಗಿಸಲು ಪೊಲೀಸ್ ಇಲಾಖೆಯ ಸಹಕಾರ ಕೋರಲಾಗಿದೆ. ಪ್ರತಿ ಕೇಂದ್ರದಲ್ಲೂ ಹೆಚ್ಚುವರಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸುವಂತೆ ಜಿಲ್ಲಾಧಿಕಾರಿ ಮತ್ತು ಪೊಲೀಸ್ ಅಧಿಕಾರಿಗಳಿಗೆ ಮನವಿ ಮಾಡಲಾಗಿದೆ. ಹಿಂದಿ ಪರೀಕ್ಷೆ ತೃತೀಯ ಭಾಷಾ ವಿಷಯವಾಗಿದ್ದು, ಅದರ ವಿರುದ್ಧ ಕೆಲ ಸಂಘಟನೆಗಳು ಆಕ್ಷೇಪ ವ್ಯಕ್ತಪಡಿಸುತ್ತಿವೆ.

## ಕಲಬುರಗಿಯ ರಸ್ತೆ ರಸ್ತೆಗಳಲ್ಲೂ ಮೊಳಗಿತು 'ಜೈ ಶ್ರೀರಾಮ್'

• ಉದಯವಾಹಿನಿ, ಬೆಂಗಳೂರು

ರಾಮನವಮಿ ಹಬ್ಬದ ಅಂಗವಾಗಿ ಕಲಬುರಗಿಯಲ್ಲಿ ಮರ್ಯಾದಾ ಪುರುಷೋತ್ತಮ ಪ್ರಭು ಶ್ರೀರಾಮನ 15 ಅಡಿ ಎತ್ತರದ ಭವ್ಯ ಮೂರ್ತಿಯೊಂದಿಗೆ ಅದ್ದೂರಿ ಹಾಗೂ ವೈಭವಮಯ ಶೋಭಾಯಾತ್ರೆ ಜರುಗಿತು. ನಗರದಾದ್ಯಂತ ಭಕ್ತಿ, ಸಂಭ್ರಮ ಮತ್ತು ಕೇಸರಿ ವಾತಾವರಣ ಕಣ್ಣಿಗೆ ಹಬ್ಬವಾಗಿತ್ತು. ನಗರದ ಚೆಕ್‌ಪೋಸ್ಟ್ ಬಳಿ ಶರಣಬಸವೇಶ್ವರ ಸಂಸ್ಥಾನದ 9ನೇ ಪೀಠಾಧಿಪತಿ ಚಿ. ದೊಡ್ಡಪ್ಪ ಅಪ್ಪ ಸೇರಿದಂತೆ ಜಿಲ್ಲೆಯ ವಿವಿಧ ಮಠಾಧೀಶರು ಶೋಭಾಯಾತ್ರೆಗೆ ಘನ ಚಾಲನೆ ನೀಡಿದರು.

ಈ ವೇಳೆ ಸಾವಿರಾರು ಭಕ್ತರು ಜಯ ಶ್ರೀರಾಮ ಘೋಷಣೆಗಳನ್ನು ಕೂಗುತ್ತಾ ಉತ್ಸಾಹದಿಂದ ಭಾಗವಹಿಸಿದರು.

ಶೋಭಾಯಾತ್ರೆಯ ಮಾರ್ಗದುದ್ದಕ್ಕೂ ರಾಮಭಕ್ತರಿಗೆ ಅನ್ನ ಸಂತರ್ಪಣೆ ಹಾಗೂ ತಂಪು ಪಾನೀಯಗಳ ವ್ಯವಸ್ಥೆ ಮಾಡಲಾಗಿತ್ತು. ಹಲವೆಡೆ ಸೇವಾ ಮನೋಭಾವದ ಸಂಘಟನೆಗಳು ಭಕ್ತರಿಗೆ ನೆರವಾಗುವ ಕಾರ್ಯದಲ್ಲಿ ತೊಡಗಿಕೊಂಡಿದ್ದವು.

## ಉಪಚುನಾವಣೆಗೆ ಟಾಸ್ಕ್ ಫೋರ್ಸ್ ರೆಡಿ ಮಾಡಿದ ಕಾಂಗ್ರೆಸ್

• ಉದಯವಾಹಿನಿ, ಬೆಂಗಳೂರು

ಉಪಚುನಾವಣೆ ಹಿನ್ನೆಲೆ ರಾಜ್ಯ ರಾಜಕೀಯ ಚಟುವಟಿಕೆ ಗರಿಗೆದರಿದ್ದು, ಕಾಂಗ್ರೆಸ್ ಹೈಕಮಾಂಡ್ ಗಡಿಜಿಲ್ಲೆಯ ಪ್ರಮುಖ ನಾಯಕರಿಗೆ ಗೆಲುವಿನ ಹೊಣೆಗಾರಿಕೆ ನೀಡಿದೆ. ಸೂಚನೆ ಹೊರಬಿದ್ದ ತಕ್ಷಣವೇ ಸ್ಥಳೀಯ ನಾಯಕರು ಕಾರ್ಯತಂತ್ರ ರೂಪಿಸಿ ಮೈದಾನಕ್ಕಿಳಿದಿದ್ದಾರೆ. ಬಾಗಲಕೋಟೆ ಉಪಚುನಾವಣೆಯಲ್ಲಿ ಪಕ್ಷವನ್ನು ಗೆಲ್ಲಿಸುವ ಜವಾಬ್ದಾರಿಯನ್ನು ಸಚಿವ ಸತೀಶ್ ಜಾರಕಿಹೊಳಿ ಅವರಿಗೆ ನೀಡಲಾಗಿದೆ. ಇದೇ ವೇಳೆ ದಾವಣಗೆರೆ ಕ್ಷೇತ್ರದಲ್ಲಿ ಗೆಲುವಿನ ಹೊಣೆಗಾರಿಕೆಯನ್ನು ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಅವರಿಗೆ ಹಂಚಲಾಗಿದೆ. ಈ ಎರಡು ಕ್ಷೇತ್ರಗಳಲ್ಲೂ ಪ್ರಚಾರಕ್ಕೆ ತೂಕ ಹೆಚ್ಚಿಸಲು ಮಾಜಿ ಉಪಮುಖ್ಯಮಂತ್ರಿ ಲಕ್ಷ್ಮಣ್ ಸವದಿ ಅವರನ್ನು ಸ್ಟಾರ್ ಪ್ರಚಾರಕರಾಗಿ ನೇಮಕ ಮಾಡಲಾಗಿದೆ.


ಸಂಘಟನಾ ಸಾಮರ್ಥ್ಯ ಮತ್ತು ಚುನಾವಣಾ ಅನುಭವವನ್ನು ಗಮನದಲ್ಲಿಟ್ಟುಕೊಂಡು ಈ ಮೂವರಿಗೆ ಜವಾಬ್ದಾರಿ ನೀಡಲಾಗಿದೆ ಎಂದು ಪಕ್ಷದ ವಲಯದಲ್ಲಿ ಹೇಳಲಾಗುತ್ತಿದೆ.

## ಜೇಬಿಗೆ ಮತ್ತಷ್ಟು 'ಬಿಸಿ'ಯಾದ ಬೇಸಗೆ: ನೀರಿನ ದರ 3% ಏರಿಕೆ


• ಉದಯವಾಹಿನಿ, ಬೆಂಗಳೂರು

ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಈಗಾಗಲೇ ಸಂಕಷ್ಟ ಅನುಭವಿಸುತ್ತಿರುವ ಜನತೆಗೆ ಮತ್ತೊಂದು ಹೊರೆ ಎದುರಾಗಿದೆ. ಬೆಂಗಳೂರು ಜಲಮಂಡಳಿ ಏಪ್ರಿಲ್ 1ರಿಂದ ನೀರಿನ ದರವನ್ನು ಶೇ.3ರಷ್ಟು ಹೆಚ್ಚಿಸಲು ನಿರ್ಧರಿಸಿದೆ. ಸಂಸ್ಥೆಯ ಸಮಿತಿಯ ತೀರ್ಮಾನದಂತೆ, ದರ ಏರಿಕೆಯನ್ನು ಕನಿಷ್ಠ ಮಟ್ಟದಲ್ಲೇ ಇಡಲು ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಲಾಗಿದೆ.

ಇದರ ಪರಿಣಾಮವಾಗಿ ಗೃಹ ಬಳಕೆದಾರರಿಗೆ ಪ್ರತಿ ಲೀಟರ್ ನೀರಿಗೆ ಸುಮಾರು 1 ಪೈಸೆ ಹೆಚ್ಚಳವಾಗಲಿದೆ. ವಾಣಿಜ್ಯ ಬಳಕೆದಾರರಿಗೆ ಇದು 1.9 ಪೈಸೆವರೆಗೆ ಏರಿಕೆಯಾಗಲಿದೆ. ಇದರ ಜೊತೆಗೆ ಸ್ಯಾನಿಟರಿ ಚಾರ್ಜ್‌ಗಳಲ್ಲೂ ಬದಲಾವಣೆ ಮಾಡಲಾಗಿದೆ. ಬೋರ್‌ವೆಲ್ ಇರುವ ಮನೆಗಳಿಗೆ ಹೆಚ್ಚುವರಿ 30 ಮತ್ತು ಕೈಗಾರಿಕೆಗಳಿಗೆ 120 ಶುಲ್ಕ ವಿಧಿಸಲಾಗುತ್ತದೆ. ನಗರದಲ್ಲಿ ದಿನವೂ ಲಕ್ಷಾಂತರ ಮನೆಗಳಿಗೆ ನೀರು ಪೂರೈಸುತ್ತಿರುವ ಜಲಮಂಡಳಿ, ಈ ಹೊಸ ದರಗಳನ್ನು ಮೇ ತಿಂಗಳ ಬಿಲ್‌ನಿಂದ ಜಾರಿಗೆ ತರಲು ಸಿದ್ಧವಾಗಿದೆ. ಈ ದರ ಏರಿಕೆ ಜನಸಾಮಾನ್ಯರ ಮೇಲಿನ ಖರ್ಚು ಹೆಚ್ಚಿಸುವ ಸಾಧ್ಯತೆ ಇದ್ದು, ಬೆಲೆ ಏರಿಕೆಯ ನಡುವೆ ಮತ್ತೊಂದು ಹೊರೆ ಎಂಬ ಅಭಿಪ್ರಾಯಗಳು ಕೇಳಿಬರುತ್ತಿವೆ.




# ಭಾರಿ ಗದ್ದಲ ಸದನ ಕೋಲಾಹಲ





ಡಿಕೆಶಿ ಹಾಗೂ ಮುನಿರತ್ನ ನಡುವೆ ಅಕ್ಷೇಪಾರ್ಹ ಪದ ಬಳಕೆ

## ಮುನಿರತ್ನಗೆ ರೇಪಿಸ್ಟ್ ಎಂದ ಡಿಕೆಶಿ

### ವಿಧಾನಸಭೆಯಲ್ಲಿ ಕೋಲಾಹಲ

1. ಸದನದಲ್ಲಿ ಎಲ್ಲೆ ಮೀರಿದ ಮಾತಿನ ಚಕಮಕಿ
2. ಡಿಕೆಶಿ ಮತ್ತು ಮುನಿರತ್ನ ನಡುವೆ ಆಕ್ಷೇಪಾರ್ಹ ಪದ ಬಳಕೆ
3. ಸದನದ ಬಾವಿಗಿಳಿದು ಆಡಳಿತ ಪಕ್ಷದ ಶಾಸಕರ ಧರಣಿ

• ಉದಯವಾಹಿನಿ, ಬೆಂಗಳೂರು

ವಿಧಾನಸಭೆಯಲ್ಲಿ ಡಿಸಿಎಂ ಡಿಕೆ ಶಿವಕುಮಾರ್ ಹಾಗೂ ಆರ್‌ಆರ್ ನಗರದ ಬಿಜೆಪಿ ಶಾಸಕ ಮುನಿರತ್ನ ನಡುವೆ ತೀವ್ರ ಮಾತಿನ ಚಕಮಕಿ ನಡೆಯಿತು.ಬೆಂಗಳೂರಿನ ಅಭಿವೃದ್ಧಿಗೆ ಸಂಬಂಧಿಸಿದ ಚರ್ಚೆಗೆ ಉತ್ತರ ನೀಡುತ್ತಿರುವ ಸಂದರ್ಭದಲ್ಲಿ ಡಿಕೆಶಿ ಹಾಗೂ ಮುನಿರತ್ನ ನಡುವೆ ಆಕ್ಷೇಪಾರ್ಹ ಪದ ಬಳಕೆ ನಡೆಯಿತು.

ಇದೇ ಸಂದರ್ಭದಲ್ಲಿ ಡಿಕೆಶಿ ಕುರಿತಾಗಿ ಆಡಿದ ಮಾತಿಗೆ ಕೆರಳಿದ ಕಾಂಗ್ರೆಸ್ ಶಾಸಕರು ಸದನದ ಬಾವಿಗಿಳಿದು ಧರಣಿ ನಡೆಸಿ ಮುನಿರತ್ನ ವಿರುದ್ಧ ಕ್ರಮಕ್ಕೆ ಆಗ್ರಹಿಸಿದರು. ಕೊನೆಗೂ ಸ್ಪೀಕರ್ ಯು.ಟಿ ಖಾದರ್ ಅವರು ಆಕ್ಷೇಪಾರ್ಹ ಪದಗಳನ್ನು ಸದನದ ಕಡತದಿಂದ ತೆಗೆದುಹಾಕುವಂತೆ ಸೂಚಿಸಿದರು. ಮುನಿರತ್ನ ಕೇಸ್‌ಗಳ ಬಗ್ಗೆ ಮಾತನಾಡುವುದು ಬೇಕಾದಷ್ಟಿದೆ. ಆರ್. ಅಶೋಕ್‌ಗೆ ಹೇಗೆ ಏಡ್ಸ್ ಇಂಜೆಕ್ಷನ್ ಚುಚ್ಚೋಕ್ಕೆ ಹೋದರು ಎಂದು ಎಫ್‌ಐಆರ್ ಇದೆ. ಅದರ ಬಗ್ಗೆ ಚರ್ಚೆ ಮಾಡಬೇಕು ಅಂದರೆ ಮಾಡುತ್ತೇನೆ ಎಂದು ಡಿಕೆ ಹೇಳಿದರು.

ಇದರಿಂದ ರೊಚ್ಚಿಗೆದ್ದ ಮುನಿರತ್ನ, 'ಈ ವೇಳೆ ಎಲ್ಲವನ್ನೂ ಹೇಳಿ' ಎಂದು ಸವಾಲು ಹಾಕಿದರು. ಡಿಕೆ ಮಾತಿಗೆ ಅಶೋಕ್, ಅಶ್ವಥ್ ನಾರಾಯಣ್ ಆಕ್ಷೇಪ ವ್ಯಕ್ತಪಡಿಸಿದರು. ಆದರೆ ಮುನಿರತ್ನ ಚರ್ಚೆಗೆ ಪಟ್ಟು ಹಿಡಿದರು. ಹೀಗಾಗಿ ಸದನದಲ್ಲಿ ಭಾರಿ ಗದ್ದಲ ಉಂಟಾಯಿತು. ಡಿಕೆಶಿ ಮಾತಿಗೆ ಕೆಂಡಾಮಂಡಲರಾದ ಮುನಿರತ್ನ, ಇವರಿಗೆ ಮೂರು ಮಕ್ಕಳಿವೆ ಅದನ್ನು ಮರೆಯಬೇಡಿ ಎಂದು ಆಕ್ರೋಶ ವ್ಯಕ್ತಪಡಿಸಿದರು. ಇದಕ್ಕೆ, ಹೇ ರೇಪಿಸ್ಟ್ ಕುಳಿತುಕೋ ಎಂದು ಡಿಕೆಶಿ ಕಿಡಿಕಾರಿದರು. ವೈಯಕ್ತಿಕ ನಿಂದನೆ ಸರಿಯಲ್ಲ ಎಂದ ಕಾಂಗ್ರೆಸ್ ಶಾಸಕರು ಕೂಡಲೇ ಮುನಿರತ್ನರನ್ನು ಸದನದಿಂದ ಹೊರಗೆ ಹಾಕುವಂತೆ ಆಗ್ರಹಿಸಿದರು. ಸದನದ ಬಾವಿಗಿಳಿದು ಮುನಿರತ್ನ ವಿರುದ್ಧ ಕ್ರಮ ಆಗಬೇಕೆಂದು ಧರಣಿ ನಡೆಸಿದರು.

**ಶಾಸಕರಿಗೆ ಸ್ಪೀಕರ್ ಪಾಠ**

ಸದನದಲ್ಲಿ ಈ ರೀತಿಯ ವರ್ತನೆ ಸರಿಯಲ್ಲ. ಕರ್ನಾಟಕ ರಾಜ್ಯಕ್ಕೆ ಪ್ರತಿಕಾರದ ರಾಜಕೀಯದ ಇತಿಹಾಸ ಇಲ್ಲ. ನಮ್ಮ ಹಿರಿಯರು ಹಾಕಿಕೊಟ್ಟ ಉತ್ತಮ ಪರಂಪರೆಯನ್ನು ನಾವು ಕಾಪಾಡಬೇಕು. ಹಾಗಾಗಿ ಇಂತಹ ವರ್ತನೆ ಪುನರಾವರ್ತನೆ ಆಗಬಾರದು ಎಂದು ಸಲಹೆ ನೀಡಿದರು.ಕೊನೆಯಲ್ಲಿ ಚರ್ಚೆಯಲ್ಲಿ ಆಕ್ಷೇಪಾರ್ಹ ಪದಗಳನ್ನು ಕಡತದಿಂದ ತೆಗೆದು ಹಾಕುವಂತೆ ಸ್ಪೀಕರ್ ಯು.ಟಿ ಖಾದರ್ ಅವರು ಸೂಚಿಸಿದರು.

**ಬೆಂಗಳೂರಿನ ಮೇಲೆ ಒತ್ತಡ ಇಳಿಸಲು ಬಿಡದಿ ಟೌನ್ ಶಿಪ್**

ಈ ಮಧ್ಯೆ ಬಿಜೆಪಿ ಶಾಸಕ ಸುರೇಶ್ ಕುಮಾರ್ ಅವರು ಬೆಂಗಳೂರು ಬೆಳವಣಿಗೆ ಉತ್ತುಂಗು ತಲುಪಿದ್ದು, ಈಗ ಬೆಂಗಳೂರಿನ ಹೊರವಲಯದಲ್ಲಿ ಪರ್ಯಾಯ ನಗರ ನಿರ್ಮಿಸಿ ಎಂದು ಸಲಹೆ ನೀಡಿದರು. ಇದಕ್ಕೆ ಪ್ರತಿಕ್ರಿಯೆ ನೀಡಿದ ಶಿವಕುಮಾರ್ ಅವರು, ''ಈ ಹಿಂದೆ ಕುಮಾರಸ್ವಾಮಿ ಅವರು ನಂದಗುಡಿ, ಸೋಲೂರು, ಬಿಡದಿಯಲ್ಲಿ ಟೌನ್ ಶಿಪ್ ಮಾಡಲು ಹೇಗಿ, ನಂತರ ಬಿಟ್ಟುಬಿಟ್ಟರು. ಈಗ ನಾವು ಅದನ್ನು ಮಾಡಲು ಮುಂದಾಗಿದ್ದೇವೆ. ಇದರ ವಿರುದ್ಧ ನಿಮ್ಮನ್ನು ಕರೆದುಕೊಂಡು ಹೋಗಿ ಪ್ರತಿಭಟನೆ ಮಾಡಿಸುತ್ತಿದ್ದಾರೆ. ಈ ಸ್ವಾಧೀನಪಡಿಸಿಕೊಂಡಿರುವ ಜಮೀನನ್ನು ಡಿನೋಟಿಫಿಕೇಶನ್ ಮಾಡಲು ಹೇಗೆ ಸಾಧ್ಯ. ಡಿನೋಟಿಫಿಕೇಶನ್ ಮಾಡಿದರೆ ನಮ್ಮ ಪರಿಸ್ಥಿತಿ ಏನಾಗುತ್ತದೆ ನಿಮಗೆ ಗೊತ್ತಿದೆ. ಬಿಡದಿಯಲ್ಲಿ ನೀರಿನ ಸೌಲಭ್ಯ ಇರುವುದರಿಂದ ಅಲ್ಲೇ ಟೌನ್ ಶಿಪ್ ಮಾಡಬೇಕಾಗಿದೆ. ಅಲ್ಲಿ ನೋಟಿಫಿಕೇಶನ್ ಆಗಿರುವ 8 ಸಾವಿರ ಎಕರೆಯಲ್ಲಿ ಎಐ ಸಿಟಿ ನಿರ್ಮಿಸುವ ವಿಚಾರವಾಗಿ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ಮಾಡಲಾಗುವುದು. ಇನ್ನು ಎರಡನೇ ವಿಮಾನ ನಿಲ್ದಾಣವನ್ನು ದಕ್ಷಿಣ ಭಾಗದಲ್ಲೇ ಮಾಡಬೇಕು. ಬೇರೆ ವಿಧಿ ಇಲ್ಲ ಎಂದರು.

**ಸ್ಥಳಾಂತರ ಪ್ರಸ್ತಾವನೆ ಸರ್ಕಾರದ ಮುಂದಿಲ್ಲ**

ಜಕ್ಕೂರು ವಿಮಾನ ಹಾರಾಟ ತರಬೇತಿ ಕೇಂದ್ರದಲ್ಲಿ ಕ್ಲಬ್ ನಿರ್ಮಾಣ ಮಾಡುವ ಪ್ರಸ್ತಾವನೆ ನಮ್ಮ ಸರ್ಕಾರದ ಮುಂದೆ ಬಂದಿದ್ದು ನಿಜ. ಆದರೆ ಮುಖ್ಯಮಂತ್ರಿಗಳು ಈಗ ಈ ಬಗ್ಗೆ ತೀರ್ಮಾನ ಮಾಡುವುದು ಬೇಡ ಎಂದರು. ಇಲ್ಲಿ ಭಾರತ ಮಂಟಪ, ಯಶೋಭೂಮಿ ಮಾದರಿಯಲ್ಲಿ ನಿರ್ಮಾಣ ಮಾಡಲು ಕೇಂದ್ರ ಸಚಿವ ಪಿಯೂಶ್ ಗೋಯಲ್ ಅವರು ಸೇರಿದಂತೆ ಅನೇಕರು ಸಲಹೆ ನೀಡಿದರು. ಇದಕ್ಕೆ ಅನುದಾನ ನೀಡುವುದಾಗಿಯೂ ಹೇಳಿದರು. ಈಗ ಸದ್ಯಕ್ಕೆ ಜಕ್ಕೂರು ವಿಮಾನ ಹಾರಾಟ ತರಬೇತಿ ಕೇಂದ್ರವನ್ನು ಸ್ಥಳಾಂತರ ಮಾಡಲು ಮುಂದಾಗಿಲ್ಲ ಎಂದು ಸ್ಪಷ್ಟಪಡಿಸಿದರು.

**3 ಮಕ್ಕಳಿವೆ ಮರೆಯಬೇಡಿ!:** ಡಿಕೆಶಿ ಮಾತಿಗೆ ಕೆಂಡಾಮಂಡಲರಾದ ಮುನಿರತ್ನ, 'ಇವರಿಗೆ ಮೂರು ಮಕ್ಕಳಿವೆ ಅದನ್ನು ಮರೆಯಬೇಡಿ' ಎಂದು ಆಕ್ರೋಶ ವ್ಯಕ್ತಪಡಿಸಿದರು. ಇದಕ್ಕೆ ಹೇ ರೇಪಿಸ್ಟ್ ಕೂತ್ಕೋ ಎಂದು ಡಿಕೆಶಿ ತಿರುಗೇಟು ನೀಡಿದರು. ವಯಕ್ತಿಕ ನಿಂದನೆ ಸರಿಯಲ್ಲ ಅಂತ ಡಿಕೆಶಿ ಪರವಾಗಿ ಕಾಂಗ್ರೆಸ್ ಸದಸ್ಯ ಕುಣಿಗಲ್ ರಂಗನಾಥ್ ನಿಂತರು. ಎಲ್ಲರಿಗೂ ಮಕ್ಕಳಿವೆ ಎಂದು ರಂಗನಾಥ್ ತಿರುಗೇಟು ನೀಡಿದರು. ಮಧ್ಯಪ್ರವೇಶ ಮಾಡಿದ ಶಾಸಕ ಸುರೇಶ್ ಕುಮಾರ್, ಸದನದಲ್ಲಿ ಮುನಿರತ್ನ ಅವರು ಕೇಳಿದ ಪ್ರಶ್ನೆಗೆ ಡಿಕೆಶಿ ಉತ್ತರ ಕೊಡಬೇಕು. ಅದು ಬಿಟ್ಟು ರೇಪಿಸ್ಟ್, ಏಡ್ಸ್ ಇಂಜೆಕ್ಷನ್ ಅಂತ ವೈಯಕ್ತಿಕ ಹೇಳಿಕೆ ಸರಿಯಲ್ಲಎಂದರು.ನನಗೆ ಮಾತನಾಡಲು ಅವಕಾಶ ಕೊಡಬೇಕು ಎಂದು ಮುನಿರತ್ನ ಪಟ್ಟು ಹಿಡಿದರು.



ಸ್ಪೀಕರ್ ಖಾದರ್ ಪ್ರಶ್ನೋತ್ತರ ಕಲಾಪಕ್ಕೆ ಅವಕಾಶ ಕೊಟ್ಟರೂ ಮುನಿರತ್ನ ಪಟ್ಟು ಸಡಿಲಿಸಿಲ್ಲ. ಈ ವೇಳೆ ಕಾಂಗ್ರೆಸ್ ಶಾಸಕರು ಎದ್ದು ನಿಂತು ಮುನಿರತ್ನ ವಿರುದ್ಧ ವಾಗ್ದಾಳಿ ನಡೆಸಿದರು.

**ಸದನದ ಬಾವಿಗಿಳಿದ ಕಾಂಗ್ರೆಸ್ ಸದಸ್ಯರು:** ಮುನಿರತ್ನ ಬಳಕೆ ಮಾಡಿದ ಆಕ್ಷೇಪಾರ್ಹ ಪದದ ಬಗ್ಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದ ಕಾಂಗ್ರೆಸ್ ಸದಸ್ಯರು ಅದರಲ್ಲೂ ಡಿಕೆ ಶಿವಕುಮಾರ್ ಬೆಂಬಲಿಗ ಶಾಸಕರು ಸದನದ ಬಾವಿಗಿಳಿದು ಧರಣಿ ನಡೆಸಿದರು. ಮುನಿರತ್ನ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಬೆಂಗಳೂರು ವಿಚಾರವಾಗಿ ಉತ್ತಮ ಚರ್ಚೆ ಆಗಿದೆ. ಡಿಕೆ ಶಿವಕುಮಾರ್ ಅವರು ಉತ್ತಮ ಪೀಠಿಕೆ ಹಾಕಿ ಉತ್ತರ ಕೊಟ್ಟಿದ್ದಾರೆ. ಮುನಿರತ್ನರ ಒಂದು ಪ್ರಶ್ನೆಗೆ ಉತ್ತರ ನೀಡಿದ್ದಾರೆ. ತಾವು ಡಿಸಿಎಂ ಆಗಿದ್ದೀರಾ? ಯಾವುದೇ ಒಂದು ವಿಚಾರ ಬೇರೆ ರೀತಿಯಲ್ಲಿ ಚರ್ಚೆ ಆಗುವುದು ಬೇಡ. ಇದನ್ನು ಇಲ್ಲಿಗೆ ಮುಗಿಸಿ ಎಂದು ಮನವಿ ಮಾಡಿದರು.

**ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಎಂ ಸಿದ್ದರಾಮಯ್ಯ ಅವರಿಗೆ ಕರ್ನಾಟಕ ಹೈಕೋರ್ಟ್ ತುರ್ತು ನೋಟಿಸ್ ಜಾರಿ ಮಾಡಿದೆ. ಮುಡಾ ಕೇಸ್‌ನಲ್ಲಿ ಬಿ ರಿಪೋರ್ಟ್ ಪ್ರಶ್ನೆ ಮಾಡಿ ಸ್ನೇಹಮಯಿ ಕೃಷ್ಣ ಹೈಕೋರ್ಟ್‌ಗೆ ಅರ್ಜಿಸಲ್ಲಿಕೆ ಮಾಡಿದ್ದರು. ಗುರುವಾರ ವಿಚಾರಣೆ ನಡೆಸಿದ ಹೈಕೋರ್ಟ್ ಸಿದ್ದರಾಮಯ್ಯ, ಪತ್ನಿ ಪಾರ್ವತಿ, ಭಾವಮೈದುನ ಮಲ್ಲಿಕಾರ್ಜುನ ಸ್ವಾಮಿ ಹಾಗೂ ಜಮೀನು ಮಾಲೀಕರಿಗೆ ನೋಟಿಸ್ ನೀಡಿದೆ.**

## ಸಿಎಂ ಸಿದ್ದರಾಮಯ್ಯ ಜತೆಗೆ ಕುಟುಂಬಸ್ಥರಿಗೆ ತುರ್ತು ನೋಟಿಸ್ ಜಾರಿ

### ಸಿಎಂಗೆ ಕ್ಲೀನ್‌ಚೀಟ್ ನೀಡಿದ ವಿಶೇಷ ನ್ಯಾಯಾಲಯದ ಆದೇಶ ಪ್ರಶ್ನಿಸಿ ಹೈಕೋರ್ಟ್ ಮೊರೆ

• ಉದಯವಾಹಿನಿ, ಬೆಂಗಳೂರು

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನಗಳ ಅಕ್ರಮ ಹಂಚಿಕೆ ಆರೋಪಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಅವರ ಕುಟುಂಬ ಸದಸ್ಯರಿಗೆ ಹೈಕೋರ್ಟ್‌ನಿಂದ ತುರ್ತು ನೋಟಿಸ್ ಜಾರಿಯಾಗಿದೆ.

ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ಪೊಲೀಸರು ನಡೆಸಿದ ತನಿಖೆಯ ನಂತರ ಸಿಎಂ ಸಿದ್ದರಾಮಯ್ಯ ಮತ್ತು ಅವರ ಕುಟುಂಬ ಸದಸ್ಯರಿಗೆ ಕ್ಲೀನ್ ಚಿಟ್ ನೀಡಿ 'ಬಿ' ರಿಪೋರ್ಟ್ ಸಲ್ಲಿಸಿದ್ದರು. ಈ ವರದಿಯನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಅಂಗೀಕರಿಸಿತ್ತು.

**ಮುಡಾ ನಿವೇಶನಗಳ ಅಕ್ರಮ ಹಂಚಿಕೆ ಆರೋಪ**

ಆದರೆ, ವಿಶೇಷ ನ್ಯಾಯಾಲಯದ ಈ ಆದೇಶವನ್ನು ಪ್ರಶ್ನಿಸಿ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಅವರು ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದರು.

ಶುಕ್ರವಾರ ನ್ಯಾಯಮೂರ್ತಿ ಎಸ್. ಸುನೀಲ್ ದತ್ ಯಾದವ್ ಅವರ ಏಕಸದಸ್ಯ ಪೀಠವು ಅರ್ಜಿಯ ವಿಚಾರಣೆಯನ್ನು ಕೈಗೆತ್ತಿಕೊಂಡಿತು. ವಿಚಾರಣೆ ಆರಂಭದಲ್ಲಿ ಪೀಠವು ಅರ್ಜಿಯ ಮೇಲಿರುವ ಕಚೇರಿ ಆಕ್ಷೇಪಣೆಗಳ ಬಗ್ಗೆ ಪ್ರಶ್ನಿಸಿತು. ಇದಕ್ಕೆ ಉತ್ತರಿಸಿದ ಅರ್ಜಿದಾರರ ಪರ ಹಿರಿಯ ವಕೀಲೆ ಲಕ್ಷ್ಮಿ ಅಯ್ಯಂಗಾರ್ ಅವರು, ಲೋಕಾಯುಕ್ತ ಸಲ್ಲಿಸಿರುವ ಬಿ ರಿಪೋರ್ಟ್ ಅನ್ನು ನಾವು ಪ್ರಶ್ನಿಸಿದ್ದೇವೆ. ಇದೊಂದು ಸಮಿತಿ ವರದಿಯ ರೀತಿಯಲ್ಲಿದೆ ಎಂದು ನ್ಯಾಯಾಲಯಕ್ಕೆ ತಿಳಿಸಿದರು.



**ಸಿಎಂ ಸಿದ್ದರಾಮಯ್ಯ ಹಾಗೂ ಪತ್ನಿಗೆ ನೋಟಿಸ್**

ವಾದ-ಪ್ರತಿವಾದಗಳನ್ನು ಆಲಿಸಿದ ಹೈಕೋರ್ಟ್ ಈ ಪ್ರಕರಣದಲ್ಲಿ ಪ್ರತಿವಾದಿಗಳಾಗಿರುವ ಲೋಕಾಯುಕ್ತ ಮತ್ತು ಜಾರಿ ನಿರ್ದೇಶನಾಲಯಕ್ಕೆ (ಇಡಿ) ನೋಟಿಸ್ ಜಾರಿ ಮಾಡಿದೆ. ಜೊತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಅವರ ಪತ್ನಿ ಪಾರ್ವತಿ, ಸಿಎಂ ಭಾವಮೈದುನ ಮಲ್ಲಿಕಾರ್ಜುನ ಸ್ವಾಮಿ ಹಾಗೂ ಜಮೀನಿನ ಮಾಲೀಕ ಜೆ. ದೇವರಾಜು ಅವರಿಗೆ ತುರ್ತು ನೋಟಿಸ್ ಜಾರಿಗೊಳಿಸಿ ಆದೇಶ ನೀಡಿದೆ.

ಈ ಮೂಲಕ ಮುಡಾ ಪ್ರಕರಣವು ಹೈಕೋರ್ಟ್ ಮೆಟ್ಟಿಲೇರಿದ್ದು, ಮುಂದಿನ ವಿಚಾರಣೆಯಲ್ಲಿ ಯಾವ ಬೆಳವಣಿಗೆಗಳು ನಡೆಯಲಿವೆ ಎಂಬುದು ಕುತೂಹಲ ಮೂಡಿಸಿದೆ. ನ್ಯಾಯಾಲಯವು ಸದ್ಯಕ್ಕೆ ವಿಚಾರಣೆಯನ್ನು ಮುಂದೂಡಿದೆ.

## ವಾಯುಪಡೆಗೆ ನೀಡಲಾಗಿದ್ದ 452 ಎಕರೆ ಅರಣ್ಯಭೂಮಿ ಮರುವಶ

### ■ ರಾಷ್ಟ್ರೀಯ ಹಿತಾಸಕ್ತಿಯ ಸಂಸ್ಥೆ ಇರುವ ಕಾರಣ ಅರಣ್ಯ ತೀರುವಳಿ ಮಾಡುವಂತೆ ತಿಳಿಸಿದ್ದರೂ ಅರ್ಜಿ ಹಾಕಿಲ್ಲ

• ಉದಯವಾಹಿನಿ, ಬೆಂಗಳೂರು

ಬೆಂಗಳೂರು ಉತ್ತರ ತಾಲ್ಲೂಕು ಜಾರಕಬಂಡೆ ಕಾವಲ್ ನಲ್ಲಿ ಭಾರತೀಯ ವಾಯುಪಡೆಗೆ 1987ರಲ್ಲಿ ಮಂಜೂರು ಮಾಡಿದ್ದ ಭೂಮಿಯ ಪೈಕಿ 452 ಎಕರೆ-4 ಗುಂಟೆ ಅರಣ್ಯ ಪ್ರದೇಶವಾಗಿದ್ದು, ಈ ಮಂಜೂರಾತಿಯನ್ನು 2017ರಲ್ಲಿ ರದ್ದುಪಡಿಸಲಾಗಿದೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ವಿಧಾನಸಭೆಗೆ ತಿಳಿಸಿದ್ದಾರೆ.



ಪ್ರತಿಪಕ್ಷ ನಾಯಕ ಆರ್. ಅಶೋಕ್ ನಿಯಮ 69ರಡಿ ಪ್ರಸ್ತಾಪಿಸಿದ ಸಾರ್ವಜನಿಕ ಮಹತ್ವದ ವಿಷಯ ಚರ್ಚೆಯ ವೇಳೆ ಉತ್ತರ ನೀಡಿದ ಅವರು, ಪ್ರಸ್ತುತ ಈ 452 ಎಕರೆ ಜೊತೆಗೆ ಜಾರಕಬಂಡೆ ಮತ್ತು ಪೀಣ್ಯ ಪ್ಲಾಂಟೇಷನ್ ನಲ್ಲಿ 83 ಎಕರೆ ಅರಣ್ಯ ಭೂಮಿ ವಾಯುಪಡೆ ವಶದಲ್ಲಿದೆ. ಇದನ್ನು ತೆರವು ಮಾಡಿಸಲು ಕ್ರಮ ವಹಿಸಲಾಗುವುದು ಎಂದರು.

ಈ ಹೆಚ್ಚುವರಿ ಜಮೀನಿನ ಪೈಕಿ 58.08ಎಕರೆ ಭೂಮಿಯನ್ನು ಬೆಂಗಳೂರು ಮೆಟ್ರೋ ರೈಲು ಯೋಜನೆಗೆ ನೀಡಿ ಹಣ ಪಡೆದು ಕಾನೂನು ಉಲ್ಲಂಘನೆ ಮಾಡಿರುತ್ತಾರೆ. ಈ ಹಣವೂ ಅರಣ್ಯ ಇಲಾಖೆಗೆ ಬರಬೇಕು ಇದನ್ನು ಪಡೆದುಕೊಳ್ಳಲು ಕ್ರಮ ವಹಿಸಿ ಎಂದು ಅಧಿಕಾರಿಗಳಿಗೆ ಸೂಚಿಸಿದ್ದೇನೆ ಎಂದೂ ಅವರು ತಿಳಿಸಿದರು.

> ವನ್ಯಜೀವಿಗಳ ದಾಳಿಯಿಂದ ಮೃತಪಟ್ಟವರ ಕುಟುಂಬದ ವಾರಸುದಾರರಿಗೆ ಸರ್ಕಾರಿ ನೌಕರಿ ನೀಡಲು ಸರ್ಕಾರಿ ಆದೇಶದನ್ವಯ ಅವಕಾಶ ಇರುವುದಿಲ್ಲ
>
> -ಈಶ್ವರ ಬಿ ಖಂಡ್ರೆ, ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವ

ಈ ಸಂಬಂಧ ರಾಜ್ಯದ ಮುಖ್ಯ ಕಾರ್ಯದರ್ಶಿಯವರು, 2018ರ ಸೆಪ್ಟೆಂಬರ್ 15 ರಂದು ರಕ್ಷಣಾ ಇಲಾಖೆಯ ಕಾರ್ಯದರ್ಶಿಗೆ ಪತ್ರ ಬರೆದು ಭಾರತೀಯ ವಾಯುಪಡೆಯ ಜಾಲಹಳ್ಳಿಯು ಸದರಿ ಭೂಮಿಯನ್ನು ತನಗಾಗಿ ಬಳಸುವುದನ್ನು ಮುಂದುವರಿಸಲು ಬಯಸಿದರೆ, ಅರಣ್ಯ (ಸಂರಕ್ಷಣಾ) ಕಾಯ್ದೆ-1980 ರಡಿಯಲ್ಲಿ ಸದರಿ ಅರಣ್ಯ ಭೂಮಿಗಳ ಬಳಕೆಯನ್ನು ಕ್ರಮಬದ್ಧಗೊಳಿಸುವುದು ಕಡ್ಡಾಯವಾಗಿದ್ದು, ಅರ್ಜಿಯನ್ನು ಸಲ್ಲಿಸಬೇಕಾಗುತ್ತದೆ. ಎಂದು ತಿಳಿಸಿದರು.

**ಶ್ರೀಗಂಧ ನಿಯಮ ಸರಳೀಕರಣ**

ಶ್ರೀಗಂಧದ ನೀತಿಯಲ್ಲಿ ಸರಳೀಕರಣ ಮಾಡುತ್ತಿದ್ದು, ವೃಕ್ಷರಾಜ ಎಂದೇ ಖ್ಯಾತವಾದ ಶ್ರೀಗಂಧವನ್ನು ತೋಟದ ಬೆಳೆ ಎಂದು ಪರಿಗಣಿಸಲು ಬರುವುದಿಲ್ಲ ಎಂದು ಸದನಕ್ಕೆ ಸ್ಪಷ್ಟಪಡಿಸಿದರು. ಆದರೆ ಶ್ರೀಗಂಧ ಬೆಳೆಗಾರರಿಗೆ ಅನಾನುಕೂಲ ಆಗದಂತೆ ಶ್ರೀಗಂಧ ಬೆಳೆಯಲು, ಕಟಾವು ಮಾಡಲು, ದಾಸ್ತಾನು ಮತ್ತು ಸಾಗಾಟ ಮಾಡಲು ನಿಯಮಗಳನ್ನು ಸರಳೀಕರಣ ಮಾಡಲಾಗುವುದು ಎಂದು ಈಶ್ವರ ಖಂಡ್ರೆ, ತಿಳಿಸಿದರು.


ಪ್ರತಿವರ್ಷ ವೈಮಾನಿಕ ಪ್ರದರ್ಶನ ನಡೆಯುವ ಬೆಂಗಳೂರು ಉತ್ತರ ತಾಲ್ಲೂಕು ಯಲಹಂಕ ಹೋಬಳಿ, ಗಂಟಿಗಾನಹಳ್ಳಿ ಗ್ರಾಮದ ಸರ್ವೆ ನಂ.47ರಲ್ಲಿ 132ಎ-3ಗು ಮತ್ತು 48ರಲ್ಲಿ 27ಎ-26ಗು ಒಟ್ಟು 159 ಎಕರೆ 29 ಗುಂಟೆ ಪ್ರದೇಶ ಸಹ ಕಾಯ್ದಿಟ್ಟ ಅರಣ್ಯ ಪ್ರದೇಶವಾಗಿರುತ್ತದೆ ಎಂದು ಈಶ್ವರ ಖಂಡ್ರೆ ತಿಳಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿಂದು ಶೃಂಗೇರಿ ಶಾಸಕ ರಾಜೇಗೌಡರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಮಾನವ-ವನ್ಯಜೀವಿ ಸಂಘರ್ಷದಲ್ಲಿ ಮೃತಪಟ್ಟವರ ಕುಟುಂಬಕ್ಕೆ ಪರಿಹಾರ ಮತ್ತು ಮಾಸಾಶನ ನೀಡಲಾಗುತ್ತಿದೆ. ಈ ಹಿಂದೆ ಇದ್ದ 15 ಲಕ್ಷ ರೂ. ಪರಿಹಾರದ ಮೊತ್ತವನ್ನು 2025ರ ಏಪ್ರಿಲ್ ನಿಂದ 20 ಲಕ್ಷ ರೂ.ಗಳಿಗೆ ಹೆಚ್ಚಿಸಲಾಗಿದೆ. ಪರಿಹಾರದ ಜೊತೆಗೆ 5 ವರ್ಷಗಳ ಕಾಲ ಮಾಸಿಕ 4 ಸಾವಿರ ರೂ. ಮಾಸಾಶನವನ್ನು ಮೃತರ ಕುಟುಂಬದ ಸದಸ್ಯರಿಗೆ ನೀಡಲಾಗುತ್ತಿದೆ ಎಂದೂ ವಿವರಿಸಿದರು.

ಅರಣ್ಯ ಇಲಾಖೆಯಲ್ಲಿ ಕಾಯಂ ನೌಕರರಾಗಿ ಸೇವೆ ಸಲ್ಲಿಸುತ್ತಿರುವವರು ಮತ್ತು ಹೊರಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮುಂಚೂಣಿ ಸಿಬ್ಬಂದಿ ಹಗಲಿರುಳೆನ್ನದೆ ಕ್ಲಿಷ್ಟಕರ ಸನ್ನಿವೇಶದಲ್ಲಿ ಸೇವೆ ಸಲ್ಲಿಸುತ್ತಿದ್ದು, ಕರ್ತವ್ಯನಿರತ ಸಿಬ್ಬಂದಿ ಮೃತಪಟ್ಟಾಗ ಈ ಹಿಂದೆ 30 ಲಕ್ಷ ಅನುಗ್ರಹ ಧನ ನೀಡಲಾಗುತ್ತಿತ್ತು., ಈಗ ಆ ಮೊತ್ತವನ್ನು 50 ಲಕ್ಷ ರೂ.ಗಳಿಗೆ ಹೆಚ್ಚಳ ಮಾಡಲಾಗಿದೆ ಎಂದು ತಿಳಿಸಿದರು. ಆನೆ ಸೇರಿದಂತೆ ವನ್ಯಜೀವಿ- ಮಾನವ ಸಂಘರ್ಷ ನಿಯಂತ್ರಿಸಲು ಸರ್ಕಾರ ಶಕ್ತಿಮೀರಿ ಶ್ರಮಿಸುತ್ತಿದೆ ಎಂದೂ ಈಶ್ವರ ಖಂಡ್ರೆ, ಸದನದಲ್ಲಿ ತಿಳಿಸಿದರು.

**ಈ ದಿನದ ದರ** ಪೆಟ್ರೋಲ್: 102.96 ₹/L | ಡೀಸೆಲ್ : 90.99 ₹/L | ಬಂಗಾರ: ₹14,689/Gram24ct ₹13,465/Gram22ct | ಬೆಳ್ಳಿ: ₹250.10/Gram

# ಹರಿದಾಸ ವಾಣಿ



• ಉದಯವಾಹಿನಿ, ಬೆಂಗಳೂರು

ವಯ್ಯಾಲಿಕಾವಲ್ ಎಕ್ಸ್‌ಟೆನ್ಶನ್ ಅಸೋಸಿಯೇಷನ್ ವತಿಯಿಂದ ಶ್ರೀರಾಮನವಮಿ ಪ್ರಯುಕ್ತ ಮಾರ್ಚ್ 27, ಶುಕ್ರವಾರ ಸಂಜೆ 6-30ಕ್ಕೆ ಹರಿದಾಸ ವಾಣಿ. ಗಾಯನ: ವಿದುಷಿ ಶ್ರೀಮತಿ ದಿವ್ಯಾ ಗಿರಿಧರ್, ಕೀ-ಬೋರ್ಡ್: ಶ್ರೀ ಅಮಿತ್ ಶರ್ಮಾ, ತಬಲಾ: ಶ್ರೀ ಮಧುಸೂದನ್ ಕೊಪ್ಪ, ಕೊಳಲು: ಶ್ರೀಬಾಲಸುಬ್ರಹ್ಮಣ್ಯಂ. **ಸ್ಥಳ:** ಶ್ರೀ ರಾಮ ದೇವಸ್ಥಾನ, 9ನೇ ಮುಖ್ಯರಸ್ತೆ, ವಯ್ಯಾಲಿಕಾವಲ್, ಬೆಂಗಳೂರು.

## ಡಬಲ್ ಮರ್ಡರ್: ಅಕ್ಕ- ತಮ್ಮನಕೊಲೆ

• ಉದಯವಾಹಿನಿ, ಬೆಂಗಳೂರು

ಪತಿಯೊಂದಿಗಿನ ಅಕ್ರಮ ಸಂಬಂಧ ಪ್ರಶ್ನಿಸಲು ಮಹಿಳೆ ಮನೆಗೆ ಹೋದ ಅಕ್ಕ-ತಮ್ಮನನ್ನು ಚಾಕುವಿನಿಂದ ಇರಿದು ಅಪ್ರಾಪ್ತ ಬಾಲಕ ಕೊಲೆ ಮಾಡಿರುವ ಘಟನೆ ಪೀಣ್ಯ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಗುರುವಾರ ಹಾಡಹಗಲೇ ನಡೆದಿದೆ. ತಿಗಳರಪಾಳ್ಯದ ಯಮುನಾ (36) ಮತ್ತು ಈಕೆಯ ಸಹೋದರ ಸುದೀಪ್ (34) ಕೊಲೆಯಾದವರು.

ತನ್ನ ಗಂಡ ಮಲ್ಲೇಶ್‌ಗೌಡ ಎಚ್‌ಎಂಟಿ ಲೇಔಟ್‌ನ ರುಕ್ಮಿಣಿನಗರದಲ್ಲಿ ವಾಸವಿರುವ ಛಾಯಾ ಎಂಬಾಕೆಯ ಜೊತೆ ಅಕ್ರಮ ಸಂಬಂಧ ಹೊಂದಿರುವ ಬಗ್ಗೆ ಯಮುನಾ ಅವರಿಗೆ ಅನುಮಾನ ಬಂದಿದೆ. ಈ ಬಗ್ಗೆ ಮಾತನಾಡಲು ಸಹೋದರ ಸುದೀಪ್‌ನೊಂದಿಗೆ ಯಮುನಾ ಅವರು ಗುರುವಾರ ಬೆಳಿಗ್ಗೆ 11.30ರ ಸುಮಾರಿಗೆ ರುಕ್ಮಿಣಿ ನಗರದಲ್ಲಿರುವ ಛಾಯಾ ಮನೆಯ ಬಳಿ ಹೋಗಿದ್ದಾರೆ. ಆ ಸಂದರ್ಭದಲ್ಲಿ ಛಾಯಾ ಹಾಗೂ ಯಮುನಾ, ಸುದೀಪ್ ನಡುವೆ ವಾಗ್ವಾದವಾಗಿ ಮಾತಿಗೆ ಮಾತು ಬೆಳೆದು ಗಲಾಟೆ ವಿಕೋಪಕ್ಕೆ ತಿರುಗಿದೆ. ಆ ವೇಳೆ ಮನೆಯಲ್ಲಿದ್ದ ಛಾಯಾ ಅವರ 16 ವರ್ಷದ ಅಪ್ರಾಪ್ತ ಮಗ ಚಾಕು ತೆಗೆದುಕೊಂಡು ಬಂದು ಏಕಾಏಕಿ ಯಮುನಾ ಹಾಗೂ ಸುದೀಪ್ ಮೇಲೆ ಮನಬಂದಂತೆ ಇರಿದಿದ್ದಾನೆ. ಹಲ್ಲೆಯಿಂದ ಇಬ್ಬರೂ ಗಂಭೀರ ಗಾಯಗೊಂಡು ತೀವ್ರ ರಕ್ತಸ್ರಾವವಾಗಿ ಕೊನೆಯುಸಿರೆಳೆದಿದ್ದಾರೆ. ಸುದ್ದಿ ತಿಳಿಯುತ್ತಿದ್ದಂತೆ ಪೀಣ್ಯ ಠಾಣೆ ಪೊಲೀಸರು ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿ ಇಬ್ಬರ ಮೃತದೇಹಗಳನ್ನು ಆಸ್ಪತ್ರೆಗೆ ರವಾನಿಸಿದ್ದಾರೆ. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

## ಪೆಟ್ರೋಲ್-ಡೀಸೆಲ್ ಕೊರತೆ ವದಂತಿ ರಾಜ್ಯ ಸರ್ಕಾರದಿಂದ ಸ್ಪಷ್ಟನೆ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಪೆಟ್ರೋಲ್, ಡೀಸೆಲ್ ಕೊರತೆಯಾಗಿದೆ ಎಂಬ ವದಂತಿಗಳು ಹರಿದಾಡುತ್ತಿದೆ. ಈ ಕುರಿತು ರಾಜ್ಯ ಸರ್ಕಾರ ಸ್ಪಷ್ಟನೆ ನೀಡಿದ್ದು, ರಾಜ್ಯದ ಕೆಲವು ಭಾಗಗಳಲ್ಲಿ ಜನರು ಪೆಟ್ರೋಲ್ ಬಂಕ್‌ಗಳ ಮುಂದೆ ಕ್ಯೂನಲ್ಲಿ ನಿಂತಿದ್ದಾರೆ ಎಂಬ ವರದಿಗಳಿಂದ ಭಯಭೀತರಾಗಿ ಖರೀದಿಗೆ ಮುಂದಾಗಬೇಡಿ. ಗೊಂದಲಗಳಿಗೆ ಕಿವಿಗೊಡಬೇಡಿ ಎಂದು ಮನವಿ ಮಾಡಿದೆ. ದೇಶಾದ್ಯಂತ ಚಿಲ್ಲರೆ ಮಾರಾಟ ಮಳಿಗೆಗಳಲ್ಲಿ ಸಾಕಷ್ಟು ಇಂಧನ ಸಂಗ್ರಹವಿದೆ ಎಂದು ಕೇಂದ್ರ ಸ್ಪಷ್ಟಪಡಿಸಿದೆ ಎಂದು ರಾಜ್ಯ ಸರ್ಕಾರ ಹೇಳಿಕೆಯಲ್ಲಿ ತಿಳಿಸಿದೆ. ರಾಜ್ಯದ ಕೆಲವು ಭಾಗಗಳಲ್ಲಿ ಜನರು ಬಾಟಲಿಗಳು ಮತ್ತು ಕ್ಯಾನ್‌ಗಳಂತಹ ಕಂಟೈನರ್ಗಳೊಂದಿಗೆ ಪೆಟ್ರೋಲ್ ಪಂಪ್‌ಗಳಲ್ಲಿ ಸರತಿ ಸಾಲಿನಲ್ಲಿ ನಿಂತಿದ್ದಾರೆ ಎಂದು ವಿವಿಧ ಮಾಧ್ಯಮಗಳ ವರದಿಗಳು ಸರ್ಕಾರದ ಗಮನಕ್ಕೆ ಬಂದಿದೆ. ಇದು ಪೆಟ್ರೋಲ್ ಮತ್ತು ಡೀಸೆಲ್ ಕೊರತೆಯನ್ನು ಸೂಚಿಸುವ ಸುಳ್ಳು ವದಂತಿಗಳಾಗಿವೆ ಎಂದು ಹೇಳಿದೆ. ಗಂಭೀರ ಸುರಕ್ಷತಾ ಅಪಾಯಗಳು ಮತ್ತು ಬೆಂಕಿಯ ಅಪಾಯಗಳನ್ನು ಉಲ್ಲೇಖಿಸಿ, ಸಡಿಲವಾದ ಅಥವಾ ಸೂಕ್ತವಲ್ಲದ ಪಾತ್ರೆಗಳಲ್ಲಿ ಪೆಟ್ರೋಲ್ ಸಾಗಿಸುವುದು ಅಥವಾ ಸಂಗ್ರಹಿಸುವುದರ ವಿರುದ್ಧ ಜನರಿಗೆ ಸಲಹೆ ನೀಡಿದೆ. ವಾಹನದ ಟ್ಯಾಂಕ್‌ಗಳಿಗೆ ಮಾತ್ರ ಇಂಧನವನ್ನು ನೇರವಾಗಿ ಪೂರೈಸಲು ಚಿಲ್ಲರೆ ಮಾರಾಟ ಮಳಿಗೆಗಳಿಗೆ ಸೂಚನೆ ನೀಡಿದೆ.

ಬಾಟಲಿಗಳು, ಕ್ಯಾನ್‌ಗಳು ಅಥವಾ ಯಾವುದೇ ಬಾಹ್ಯ ಪಾತ್ರೆಗಳಲ್ಲಿ ಇಂಧನ ವಿತರಿಸುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. ಜಾರಿಯಲ್ಲಿರುವ ಕಾನೂನುಗಳ ಪ್ರಕಾರ, ದೊಡ್ಡ ಪ್ರಮಾಣದಲ್ಲಿ ಅಥವಾ ಅನಧಿಕೃತ ಕಂಟೈನರ್‌ಗಳಲ್ಲಿ ಇಂಧನ ಸಂಗ್ರಹಿಸುವುದು ಕಾನೂನುಬಾಹಿರವಾಗಿದೆ ಎಂದು ಎಚ್ಚರಿಕೆ ನೀಡಿದೆ. ಇಂಧನ ಪೂರೈಕೆ ಸಮರ್ಪಕವಾಗಿದ್ದು, ಆತಂಕಕ್ಕೆ ಯಾವುದೇ ಕಾರಣವಿಲ್ಲ ಎಂದು ಸರ್ಕಾರ ಭರವಸೆ ನೀಡಿದೆ. ಈ ಮಧ್ಯೆ, ಹುಬ್ಬಳ್ಳಿ ಧಾರವಾಡ ಪೊಲೀಸ್ ಕಮಿಷನರ್ ಎನ್.ಶಶಿಕುಮಾರ್ ನಗರ ವ್ಯಾಪ್ತಿಯಲ್ಲಿ ಇಂಧನ ಕೊರತೆ ಬಗ್ಗೆ ವದಂತಿ ಹಬ್ಬಿಸುವವರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸುವುದಾಗಿ ಎಚ್ಚರಿಕೆ ನೀಡಿದ್ದು, ಸಾಕಷ್ಟು ಪೂರೈಕೆ ಇದೆ ಎಂದು ಭರವಸೆ ನೀಡಿದ್ದಾರೆ.

## ಲೈಂಗಿಕ ಕಿರುಕುಳ: ಇನ್‌ಸ್ಪೆಕ್ಟರ್ ವಿರುದ್ಧ ತನಿಖೆಗೆ ಆದೇಶ

• ಉದಯವಾಹಿನಿ, ಬೆಂಗಳೂರು

ಕೋಣನಕುಂಟೆ ಠಾಣೆಯ ಇನ್‌ಸ್ಪೆಕ್ಟರ್ ಪಾಪಣ್ಣ ಅವರು ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ಆರೋಪಿಸಿ ರೌಡಿಶೀಟರ್ ಯಶಸ್ವಿನಿಗೌಡ ಅವರು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಅವರಿಗೆ ದೂರು ನೀಡಿದ್ದಾರೆ. ಆಡಿಯೋ ಸಂಭಾಷಣೆ ಹಾಗೂ ವಾಟ್ಸ್ ಆ್ಯಪ್ ಸಂದೇಶಗಳ ಸಮೇತ ದೂರು ನೀಡಿದ್ದಾರೆ. ಇನ್‌ಪೆಕ್ಟರ್ ವಿರುದ್ಧ ಇಲಾಖಾ ತನಿಖೆ ನಡೆಸಿ ವರದಿ ನೀಡುವಂತೆ ದಕ್ಷಿಣ ವಿಭಾಗದ ಡಿಸಿಪಿ ಅನಿತಾ ಹದ್ದಣ್ಣನವರಿಗೆ ನಗರ ಪೊಲೀಸ್ ಕಮಿಷನರ್ ಸೂಚಿಸಿದ್ದಾರೆ. 2017ರಲ್ಲಿ ನನ್ನ ವಿರುದ್ಧ ಬಸವನಗುಡಿ ಠಾಣೆಯಲ್ಲಿ ರೌಡಿಶೀಟರ್ ತೆರೆಯಲಾಗಿತ್ತು. ಆಗ ಪಾಪಣ್ಣ ಠಾಣಾಧಿಕಾರಿ ಆಗಿದ್ದರು. ಆಗ ನನ್ನ ಮೊಬೈಲ್ ಸಂಖ್ಯೆ ಪಡೆದುಕೊಂಡಿದ್ದರು. ಅಂದಿನಿಂದ ನಿತ್ಯ ಸಂದೇಶ ಕಳುಹಿಸುತ್ತಿದ್ದರು. ಬಳಿಕ ಡಿಸಿಪಿಗೂ ದೂರು ನೀಡಿದ್ದೆ. ಆಗ ಪಾಪಣ್ಣ ಅವರು ಬೆದರಿಕೆ ಹಾಕಿದ್ದರು ಎಂದು ಯಶಸ್ವಿನಿಗೌಡ ಮಾಧ್ಯಮದವರಿಗೆ ತಿಳಿಸಿದರು.

## ನಾಡಕಚೇರಿಗೆ ರೈತರ ಮುತ್ತಿಗೆ

• ಉದಯವಾಹಿನಿ, ದೊಡ್ಡಬಳ್ಳಾಪುರ

ದೊಡ್ಡಬೆಳವಂಗಲ ಹೋಬಳಿಯಲ್ಲಿ ಫಲವತ್ತಾದ 2,100 ಎಕರೆ ಕೃಷಿ ಭೂಮಿಯನ್ನು ಕೆಐಎಡಿಬಿ ಸ್ವಾಧೀನಪಡಿಸಿಕೊಳ್ಳುವುದನ್ನು ವಿರೋಧಿಸಿ ರೈತರು ಇಲ್ಲಿನ ನಾಡಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಿದರು. ದಾಬಸ್‌ಪೇಟೆ-ಹೊಸಕೋಟೆ ರಾಷ್ಟ್ರೀಯ ಹೆದ್ದಾರಿಯ 648ರಲ್ಲಿನ ಖಾನಿಮಠದಿಂದ ನೂರಾರು ಸಂಖ್ಯೆಯಲ್ಲಿ ಜಾಥಾ ಮೂಲಕ ಆಗಮಿಸಿದ ರೈತರು ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ದೊಡ್ಡಬೆಳವಂಗಲದ ನಾಡಕಚೇರಿ ಮುಂದೆ ಪ್ರತಿಭಟನೆ ನಡೆಸಿದರು. ಜಿಲ್ಲೆಯಲ್ಲಿ ಕೃಷಿಯನ್ನು ಸಂಪೂರ್ಣವಾಗಿ ನಾಶಮಾಡುವ ಮೂಲಕ ರೈತರು ಗುಳೆ ಹೋಗುವಂತೆ ಮಾಡುವ ಹುನ್ನಾರ ನಡೆಸುತ್ತಿದೆ. ಈಗಾಗಲೇ ದೊಡ್ಡಬೆಳವಂಗಲ ಹೋಬಳಿಯಲ್ಲಿ ಕ್ವಿನ್ ಸಿಟಿ, ಹೈಟೆಕ್ ಲಾಜಿಸ್ಟಿಕ್ ಪಾರ್ಕ್, ಕಸ ವಿಲೇವಾರಿ ಘಟಕ ಸೇರಿದಂತೆ ಹತ್ತಾರು ಯೋಜನೆಗಳ ನೆಪದಲ್ಲಿ ಸುಮಾರು 4,500 ಎಕರೆ ಕೃಷಿ ಭೂಮಿಯನ್ನು ರೈತರಿಂದ ಬಲವಂತವಾಗಿ ಸ್ವಾಧೀನ ಮಾಡಿಕೊಳ್ಳಲಾಗಿದೆ ಎಂದು ಸ್ಥಳೀಯ ಮುಖಂಡರಾದ ಪ್ರಭಾಬೆಳವಂಗಲ ದೂರಿದರು. ಈಗಾಗಲೇ ಸ್ವಾಧೀನ ಮಾಡಿಕೊಂಡಿರುವ ಭೂಮಿಯಲ್ಲಿ ಇನ್ನೂ ಯಾವುದೇ ಅಭಿವೃದ್ಧಿ ಕೆಲಸ ನಡೆದಿಲ್ಲ. ಈಗ ಮತ್ತೆ ಹೊಸದಾಗಿ 2,100 ಎಕರೆ ಕೃಷಿ ಭೂಮಿಸ್ವಾಧೀನಕ್ಕೆ ಕೆಐಎಡಿಬಿ ಸಭೆ ನಡೆಸಿ ದೊಡ್ಡಬೆಳವಂಗಲ, ಚಿಕ್ಕಬೆಳವಂಗಲ, ಸೊನಹಳ್ಳಿ, ರಾಂಪುರ, ನಾರನಹಳ್ಳಿ ಗ್ರಾಮಗಳ ಜಮೀನು ಗುರುತಿಸಿದೆ ಎಂದರು. ಭೂಸ್ವಾಧೀನಕ್ಕೆ ಗುರುತಿಸಿರುವ ಶೇ 80ರಷ್ಟು ಜಮೀನಿನಲ್ಲಿ ರೈತರು ಬ್ಯಾಂಕ್‌ಗಳಿಂದ ಸಾಲ ಪಡೆದು ಕೊಳವೆಬಾವಿಗಳನ್ನು ಕೊರೆಸಿ ನೀರು ಮೇಲೆತ್ತಿ ಅಡಿಕೆ, ತೆಂಗು, ಬಾಳೆ,ಹೂವು,ರಾಗಿ,ಜೋಳ ಸೇರಿದಂತೆ ಹತ್ತಾರು ರೀತಿಯ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಆದರೆ ಕಂದಾಯ ಹಾಗೂ ಸರ್ವೇ ಇಲಾಖೆ ಅಧಿಕಾರಿಗಳು ಈ ಪ್ರದೇಶವು ಖಾಲಿ ಭೂಮಿ ಎಂದು ಸರ್ಕಾರಕ್ಕೆ ತಪ್ಪು ಮಾಹಿತಿ ನೀಡಿದ್ದಾರೆ. ಇವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

### ಮಕ್ಕಳ 1ನೇ ತರಗತಿ ಪ್ರವೇಶಕ್ಕೆ 6 ವರ್ಷ ಕಡ್ಡಾಯ ವಯೋಮಿತಿ ನಿಯಮ ಸಡಿಲಿಕೆ

# 60 ದಿನಗಳ ವಿನಾಯಿತಿ ನೀಡಿದ ಶಿಕ್ಷಣ ಸಚಿವ

• ಉದಯವಾಹಿನಿ, ಬೆಂಗಳೂರು

ಮಕ್ಕಳು 1ನೇ ತರಗತಿ ಪ್ರವೇಶಕ್ಕೆ ನಿಗದಿಪಡಿಸಲಾಗಿದ್ದ 6 ವರ್ಷ ವಯೋಮಿತಿಯನ್ನು ಸರ್ಕಾರ ಸಡಿಲಿಕೆ ಮಾಡಿದೆ. ಈ ಬಗ್ಗೆ ಶಿಕ್ಷಣ ಸಚಿವ ಮಧು ಬಂಗಾರಪ್ಪ ಮಾಹಿತಿ ಹಂಚಿಕೊಂಡಿದ್ದಾರೆ. ಗುರುವಾರ ವಿಧಾನಸಭೆ ಅಧಿವೇಶನದಲ್ಲಿ ಮಾತನಾಡಿದ ಶಿಕ್ಷಣ ಸಚಿವರು, ಪ್ರಸಕ್ತ ವರ್ಷಕ್ಕೆ ಅನ್ವಯವಾಗುವಂತೆ ಮಕ್ಕಳ ಶಾಲಾ ಪ್ರವೇಶಕ್ಕೆ ನಿಗದಿಪಡಿಸಿದ್ದ 6 ವರ್ಷಗಳ ವಯೋಮಿತಿಗೆ 60 ದಿನಗಳ ಕಾಲ ವಿನಾಯಿತಿ ನೀಡಲಾಗಿದೆ ಎಂದು ತಿಳಿಸಿದ್ದಾರೆ. ಪ್ರತಿ ವರ್ಷ ಪೋಷಕರಿಗೆ ಈ ಬಗ್ಗೆ ಗೊಂದಲವಾಗುತ್ತಿದೆ. ಎಲ್‌ಕೆಜಿ ಮತ್ತು ಯುಕೆಜಿ ಸೇರ್ಪಡೆಗೆ ಸೂಕ್ತ ವಯೋಮಿತಿ ಕಾನೂನು ಇಲ್ಲದಿರುವುದು ಇದಕ್ಕೆ ಕಾರಣವಾಗಿದೆ. ಮುಂದಿನ ದಿನಗಳಲ್ಲಿ ಎಲ್‌ಕೆಜಿ, ಯುಕೆಜಿ ಸೇರ್ಪಡೆಗೆ ಸಂಬಂಧಿಸಿದಂತೆ ಕಾನೂನು ಜಾರಿ ಮಾಡುತ್ತೇವೆ. ಈ ಬಗ್ಗೆ ಅಗತ್ಯ ಸಭೆ ನಡೆಸಲಾಗುತ್ತದೆ ಎಂದು ಶಿಕ್ಷಣ ಸಚಿವರು ಹೇಳಿದರು.

ಈ ಮೂಲಕ 5 ವರ್ಷ 10 ತಿಂಗಳು ಪೂರ್ಣಗೊಂಡಿರುವ ಮಕ್ಕಳು ಕೂಡ 1 ನೇ ತರಗತಿಗೆ ಪ್ರವೇಶ ಪಡೆಯಬಹುದು. ಈ ಹಿಂದಿನ ನಿಯಮದಂತೆ 2020 ಮೇ 31ರೊಳಗೆ ಜನಿಸಿರುವ ಮಕ್ಕಳಿಗೆ ಮಾತ್ರವೇ (6 ವರ್ಷ ಪೂರ್ಣಗೊಂಡ) 1 ನೇ ತರಗತಿ ಪ್ರವೇಶ ನೀಡಬೇಕಿತ್ತು. 60 ದಿನಗಳ ಸಡಿಲಿಕೆಯಿಂದ 2020 ಜುಲೈ 31ರೊಳಗೆ ಜನಿಸಿರುವ ಮಗುವಿಗೆ ಪ್ರವೇಶ ಸಿಗಲಿದೆ. ಇದರಿಂದ ಬೆಂಗಳೂರಿನ ಮೂರು ಲಕ್ಷಕ್ಕೂ ಅಧಿಕ ಮಕ್ಕಳಿಗೆ ಅನುಕೂಲವಾಗಲಿದೆ.

**ಪೋಷಕರ ನಿರ್ಲಕ್ಷ್ಯ, ಈಗಿನ ಪರದಾಟ:** 2022ರಲ್ಲಿಯೇ ಈ ಆದೇಶ ಬಂದಿದ್ದರೂ, ಅನೇಕ ಪೋಷಕರು ಇದನ್ನು ಗಂಭೀರವಾಗಿ ಪರಿಗಣಿಸಿರಲಿಲ್ಲ. ಮಗುವಿಗೆ 3 ವರ್ಷ ತುಂಬುವ ಮುನ್ನವೇ ನರ್ಸರಿ, 4 ವರ್ಷಕ್ಕೆ ಎಲ್‌ಕೆಜಿ ಮತ್ತು 5 ವರ್ಷಕ್ಕೆ ಯುಕೆಜಿ ಸೇರಿಸಿದ್ದರು. ಈಗ ಮಗು ಯುಕೆಜಿ ಮುಗಿಸಿ ಒಂದನೇ ತರಗತಿಗೆ ಹೋಗುವ ಹೊತ್ತಿಗೆ ಶಾಲೆಗಳು ಸರ್ಕಾರದ ವಯೋಮಿತಿ ನಿಯಮವನ್ನು ತೋರಿಸಿ ದಾಖಲಾತಿ ನಿರಾಕರಿಸುತ್ತಿದ್ದವು. ಅಂದು ಎಚ್ಚೆತ್ತುಕೊಳ್ಳದ ಪೋಷಕರು ಇಂದು ಮಗುವಿನ ಭವಿಷ್ಯದ ಬಗ್ಗೆ ಚಿಂತಿತರಾಗಿದ್ದರು.

**ಮತ್ತೊಂದು ವರ್ಷ ಯುಕೆಜಿಯಲ್ಲೇ ಮುಂದುವರಿಕೆ ತಪ್ಪಿದೆ:** ಯುಕೆಜಿ ಮುಗಿಸಿದರೂ 6 ವರ್ಷ ಪೂರ್ಣಗೊಳ್ಳದ ಮಕ್ಕಳು ಅನಿವಾರ್ಯವಾಗಿ ಮತ್ತೊಂದು ವರ್ಷ ಅದೇ ತರಗತಿಯಲ್ಲಿ ಓದಬೇಕಾದ ಪರಿಸ್ಥಿತಿ ನಿರ್ಮಾಣವಾಗಿತ್ತು. ಇದು ಮಗುವಿನ ಮಾನಸಿಕ ಸ್ಥಿತಿಯ ಮೇಲೆ ಹಾಗೂ ಪೋಷಕರ ನೆಮ್ಮದಿಯ ಮೇಲೆ ಪರಿಣಾಮ ಬೀರುತ್ತಿತ್ತು. ಸರ್ಕಾರ ಸಡಿಲಿಕೆಯಿಂದ ಲಕ್ಷಾಂತರ ಮಕ್ಕಳಿಗೆ ಅನುಕೂಲವಾಗಿದೆ. ನನ್ನ ಮಗನಿಗೆ 6 ವರ್ಷ ತುಂಬಲು ಕೇವಲ 15 ದಿನಗಳು ಮಾತ್ರ ಬಾಕಿ ಇವೆ. ಅವನು ಈಗಾಗಲೇ ಒಂದನೇ ತರಗತಿಗೆ ಹೋಗಲು ಸಿದ್ಧನಿದ್ದಾನೆ.

ಆದರೆ, ಶಾಲೆಗಳು ಸರ್ಕಾರ ನಿಯಮ ತೋರಿಸಿ ಕಡ್ಡಾಯವಾಗಿ ಯುಕೆಜಿ ಪುನರಾವರ್ತಿಸಲು ಹೇಳುತ್ತಿದ್ದವು. ಇದರಿಂದ ಮಗುವಿನ ಒಂದು ವರ್ಷ ವ್ಯರ್ಥವಾಗುತ್ತಿತ್ತು. ಸದ್ಯ ಸರ್ಕಾರದ ವಿನಾಯಿತಿಯು ಸಂಸತ ತಂದಿದೆ ಎಂದು ಪೋಷಕ ಮಹೇಶ್ ಸಂತಸ ವ್ಯಕ್ತಪಡಿಸಿದರು.



**ಪೋಷಕರ ಒತ್ತಡಕ್ಕೆ ಮಣಿದು ಸಡಿಲಿಕೆ**

**4 ವರ್ಷದ ಹಿಂದೆಯೇ ಸರ್ಕಾರ ನಿಯಮ ಕರ್ನಾಟಕ ಸರ್ಕಾರವು ಒಂದನೇ ತರಗತಿಗೆ ಸೇರ್ಪಡೆಯಾಗುವ ಮಕ್ಕಳ ಕನಿಷ್ಠ ವಯಸ್ಸನ್ನು 6 ವರ್ಷ ಎಂದು ನಿಗದಿಪಡಿಸಿ ಜುಲೈ 2022 ರಲ್ಲಿಯೇ ಆದೇಶ ಹೊರಡಿಸಿತ್ತು. ಪ್ರತಿ ವರ್ಷ ಪೋಷಕರ ಒತ್ತಡಕ್ಕೆ ಮಣಿದು 2-4 ತಿಂಗಳ ವಿನಾಯಿತಿ ನೀಡುತ್ತಾ ಬಂದಿತ್ತು. 2026-27ನೇ ಶೈಕ್ಷಣಿಕ ಸಾಲಿನಿಂದ ಈ ನಿಯಮವನ್ನು ಯಾವುದೇ ವಿನಾಯಿತಿ ಇಲ್ಲದೆ ಕಡ್ಡಾಯವಾಗಿ ಜಾರಿಗೊಳಿಸುವುದಾಗಿ ಸರ್ಕಾರ ಹೇಳಿತ್ತು. ಆದರೆ, ಈ ಬಾರಿಯೂ ಪೋಷಕರ ಒತ್ತಡಕ್ಕೆ ಮಣಿದು ಸಡಿಲಿಕೆ ನೀಡಿದೆ.**



**6 ವರ್ಷ ಪೂರ್ಣಗೊಂಡಿಲ್ಲ**

**ಶಾಲೆ ದಾಖಲಿಗೆ ಮಕ್ಕಳಿಗೆ ನಿಗದಿಪಡಿಸಿದ್ದ ವಯೋಮಿತಿಯನ್ನು ಸರ್ಕಾರ ಸಡಿಲಿಕೆ ಮಾಡಿದೆ. 1 ನೇ ತರಗತಿಗೆ 6 ವರ್ಷ ತುಂಬಿರಬೇಕು ಎಂಬ ನಿಯಮದಲ್ಲಿ 60 ದಿನ ವಿನಾಯಿತಿ ನೀಡಲಾಗಿದೆ. ಈ ಬಗ್ಗೆ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ವಿಧಾನಸಭೆಯಲ್ಲಿ ಘೋಷಣೆ ಮಾಡಿದ್ದಾರೆ. ಈ ಮೂಲಕ ಯುಕೆಜಿ ಮುಗಿಸಿದರೂ 6 ವರ್ಷ ಪೂರ್ಣಗೊಂಡಿಲ್ಲವೆಂದು ಬೇಸರದಲ್ಲಿದ್ದ ಲಕ್ಷಾಂತರ ಮಕ್ಕಳು ಹಾಗೂ ಪೋಷಕರಿಗೆ ಅನುಕೂಲವಾಗಲಿದೆ.**

## ಸಿಲಿಂಡರ್‌ಗಾಗಿ ಸಾಲುಗಟ್ಟಿ ನಿಂತ ಜನ

ಉದಯವಾಹಿನಿ ಚಿತ್ರ



• ಉದಯವಾಹಿನಿ, ಬೆಂಗಳೂರು

ನಗರದಲ್ಲಿ ಗೃಹಬಳಕೆ ಎಲ್‌ಪಿಜಿ ಸಿಲಿಂಡರ್‌ಗಳಿಗಾಗಿ ಜನರು ಅನುಭವಿಸುತ್ತಿರುವ ಸಂಕಷ್ಟ ಆತಂಕ ಹುಟ್ಟಿಸುವ ಮಟ್ಟಕ್ಕೆ ತಲುಪಿದೆ. ಮಧ್ಯಾಹ್ನದ ತೀವ್ರ ಬಿಸಿಲನ್ನೂ ಲೆಕ್ಕಿಸದೇ ಖಾಲಿ ಸಿಲಿಂಡರ್ ಹಿಡಿದು ಜನರು ಸಾಲಿನಲ್ಲಿ ನಿಂತಿರುವ ದೃಶ್ಯ ಎಲ್ಲೆಡೆ ಕಂಡು ಬರುತ್ತಿದೆ. ಕೆಲವೆಡೆ ಅರ್ಧ ಕಿಲೋಮೀಟರ್ ವರೆಗೆ ಕ್ಯೂ ವಿಸ್ತರಿಸಿದೆ. ಲಿಂಗರಾಜಪುರದ .ಮಹಾದೇವಪುರ. ಕೆ.ಆರ್ ಪುರಂ ಭಾಗದ ಹೆಚ್ .ಪಿ ಗ್ಯಾಸ್ .ಇಂಡಿಯನ್ ಗ್ಯಾಸ್ ಏಜೆನ್ಸಿ ಮುಂದೆ ಕಳೆದ 3-4 ದಿನಗಳಿಂದ ಜನರು ಸಿಲಿಂಡರ್ಗಾಗಿ ಸಾಲುಗಟ್ಟಿ ನಿಂತು ಕಾಯುತ್ತಿದ್ದಾರೆ. ಅನೇಕರು ಈಗಾಗಲೇ 20 ದಿನಗಳ ಹಿಂದೆ ಬುಕ್ಕಿಂಗ್ ಮಾಡಿದ್ದು, ಒಟಿಪಿ ಬಂದಿದ್ದರೂ ಡೆಲಿವರಿ ಆಗಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕಮರ್ಷಿಯಲ್ ಬಳಿಕ ಈಗ ಡೊಮೆಸ್ಟಿಕ್ ಸಮಸ್ಯೆಯೂ ಕಾಡಲಾರಂಭಿಸಿದೆ. ಈ ಹಿಂದೆ ಕಮರ್ಷಿಯಲ್ ಎಲ್‌ಪಿಜಿ ಸಿಲಿಂಡರ್ ಕೊರತೆ ಹೋಟೆಲ್ ಉದ್ಯಮಕ್ಕೆ ಹೊಡೆತ ನೀಡಿತ್ತು. ಇದೀಗ ಅದೇ ಪರಿಸ್ಥಿತಿ ಗೃಹಬಳಕೆ ಸಿಲಿಂಡರ್ ಮೇಲೂ ಬೀಳುತ್ತಿದೆಯೇ ಎಂಬ ಆತಂಕ ಜನರಲ್ಲಿ ಹೆಚ್ಚಾಗಿದೆ. ಕೊಲ್ಲಿ ಯುದ್ಧ, ಗಲ್ಫ್ ರಾಷ್ಟ್ರಗಳ ನಡುವಿನ ಉದ್ವಿಗ್ನ ಪರಿಸ್ಥಿತಿಯಿಂದ ಎಲ್‌ಪಿಜಿ ಸರಬರಾಜು ಮೇಲೆ ಪರಿಣಾಮ ಬೀರಿದೆ ಎಂಬ ಮಾತು ಕೇಳಿಬರುತ್ತಿದೆ. ಇದರಿಂದ ರಾಜ್ಯದಲ್ಲಿ ಸರಬರಾಜು ಸರಪಳಿ ಅಸ್ತವ್ಯಸ್ತವಾಗಿದೆಯೆಂಬ ಅನುಮಾನ ಮೂಡಿದೆ. ಏಜೆನ್ಸಿಗಳ ಸ್ಪಷ್ಟನೆ ಏನು..?ಆದರೆ ಗ್ಯಾಸ್ ಏಜೆನ್ಸಿ ಮಾಲೀಕರು ಇದನ್ನು ಸಿಲಿಂಡರ್ ಕೊರತೆ ಎಂದು ಅಲ್ಲ, ಪ್ಯಾನಿಕ್ ಬುಕ್ಕಿಂಗ್ ಸಮಸ್ಯೆ ಎಂದು ಹೇಳುತ್ತಿದ್ದಾರೆ. ಹಿಂದೆ ದಿನಕ್ಕೆ 500ರಿಂದ 600 ಬುಕ್ಕಿಂಗ್‌ಆಗುತ್ತಿದ್ದವು, ಆದರೆ, ಈಗ ದಿನಕ್ಕೆ 2000ಕ್ಕೂ ಹೆಚ್ಚು ಬುಕ್ಕಿಂಗ್ ಆಗುತ್ತಿದೆ. ಜನರು ಭಯದಿಂದ ಮುಂಚಿತವಾಗಿ ಬುಕ್ ಮಾಡುತ್ತಿರುವುದರಿಂದ ಡಿಮ್ಯಾಂಡ್ ಏಕಾಏಕಿ ಹೆಚ್ಚಾಗಿದೆ ಇದರಿಂದ ಡಿಸ್ಟ್ರಿಬ್ಯೂಷನ್‌ನಲ್ಲಿ ವಿಳಂಬ ಉಂಟಾಗಿದೆ ಎಂದು ಗ್ಯಾಸ್ ಅಂಗಡಿ ಮಾಲೀಕರು ಹೇಳುತ್ತಿದ್ದಾರೆ.


**ಸತ್ಯ ಏನು:** ತಜ್ಞರ ಪ್ರಕಾರ, ನಿಜವಾದ ಕೊರತೆಗಿಂತ ಹೆಚ್ಚಾಗಿ ಗಾಬರಿ ಮನೋಭಾವವೇ ಸಮಸ್ಯೆ ಹೆಚ್ಚಿಸುತ್ತಿದೆ. ಸರಬರಾಜು ವ್ಯವಸ್ಥೆ ಮೇಲೆ ಒತ್ತಡ ಬಿದ್ದಿರುವುದರಿಂದ ತಾತ್ಕಾಲಿಕ ವಿಳಂಬ ಆಗುತ್ತಿದೆ ಎಂದು ತಜ್ಞರು ಹೇಳುತ್ತಾರೆ.

**ಜನರಿಗೆ ಸಲಹೆ:** ಅಗತ್ಯವಿದ್ದಾಗ ಮಾತ್ರ ಬುಕ್ಕಿಂಗ್ ಮಾಡಿ ಅನಗತ್ಯವಾಗಿ ಸ್ಟಾಕ್ ಮಾಡಬೇಡಿ. ಅಧಿಕೃತ ಮಾಹಿತಿ ಮೇಲೆ ನಂಬಿಕೆ ಇಡಿ. ಕಮರ್ಷಿಯಲ್ ಎಲ್‌ಪಿಜಿ ಸಮಸ್ಯೆಯ ನಂತರ ಈಗ ಗೃಹಬಳಕೆ ಸಿಲಿಂಡರ್ ಮೇಲೂ ಒತ್ತಡ ಹೆಚ್ಚಾಗಿದ್ದು, ಸರ್ಕಾರ, ಸರಬರಾಜು ಸಂಸ್ಥೆಗಳು ಪರಿಸ್ಥಿತಿಯನ್ನು ಸಮತೋಲನಗೊಳಿಸುವ ಸವಾಲು ಎದುರಿಸುತ್ತಿವೆ.

# ದಾವಣಗೆರೆ ದಕ್ಷಿಣ ಉಪಚುನಾವಣೆ ಗೆಲ್ಲಲು ಕಾಂಗ್ರೆಸ್ ರಣತಂತ್ರ

• ಉದಯವಾಹಿನಿ, ಬೆಂಗಳೂರು

ಉಪಚುನಾವಣೆಯ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷ ರಣತಂತ್ರಗಾರಿಕೆ ರೂಪಿಸಿದ್ದು, ವಿರೋಧ ಪಕ್ಷಗಳ ವಿರುದ್ಧ ಆಕ್ರಮಣಕಾರಿ ಪ್ರಚಾರದ ಜೊತೆಗೆ ತಮ್ಮ ಗ್ಯಾರಂಟಿ ಯೋಜನೆಗಳ ವೈಭವೀಕರಣಕ್ಕೆ ಆದ್ಯತೆ ನೀಡಲು ಮುಂದಾಗಿದೆ. ಈ ಮೊದಲು ಕಾಂಗ್ರೆಸ್ ಪಕ್ಷವೇ ಗೆದ್ದಿದ್ದ ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ಕ್ಷೇತ್ರಗಳನ್ನು ಮರಳಿ ಧಕ್ಕಿಸಿಕೊಳ್ಳುವುದು ಕಾಂಗ್ರೆಸ್‌ಗೆ ಪ್ರತಿಷ್ಠೆಯ ಪ್ರಶ್ನೆಯಾಗಿದೆ. ಒಂದು ವೇಳೆ ಸೋಲು ಕಂಡರೆ ಆಡಳಿತಾರೂಢ ಸರ್ಕಾರಕ್ಕೆ ಭಾರೀ ಮುಜುಗರವಾಗಲಿದೆ. ಸಿದ್ದರಾಮಯ್ಯ ಅವರ ಜನಪ್ರಿಯತೆ ಡಿ.ಕೆ.ಶಿವಕುಮಾರ್ ಅವರ ಸಂಘಟನಾ ಚತುರತೆ ವೈಫಲ್ಯ ಎಂಬ ಸಂದೇಶ ರವಾನೆಯಾಗುತ್ತದೆ. 2028ಕ್ಕೆ ಮರಳಿ ಕಾಂಗ್ರೆಸ್ ಅಧಿಕಾರಕ್ಕೆ ಬರಬೇಕು ಎಂಬ ಕನಸು ಕಟ್ಟಿಕೊಂಡಿರುವ ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಗಳಿಗೆ ಭ್ರಮನಿರಸನವಾಗಲಿದೆ. ಹೀಗಾಗಿ ಶತಾಯಗತಾಯ ಗೆಲ್ಲಲೇ ಬೇಕೆಂದು ಕಾಂಗ್ರೆಸ್ ಪಕ್ಷ ತನ್ನ ಶಕ್ತಿಯನ್ನು ಉಪಚುನಾವಣೆಯ ಕಣದ ಮೇಲೆ ಕ್ರೋಢೀಕರಿಸಿದೆ. ಈ ನಡುವೆ 5 ರಾಜ್ಯಗಳ ವಿಧಾನಸಭಾ ಚುನಾವಣೆಗೆ ರಾಜ್ಯದ ಸಚಿವರು, ಶಾಸಕರು ಹಾಗೂ ಪ್ರಭಾವಿ ಮುಖಂಡರು ತೊಡಗಿಸಿಕೊಳ್ಳಬೇಕಿದೆ. ಹೀಗಾಗಿ ಉಪಚುನಾವಣೆ ಉಸ್ತುವಾರಿಗೆ ಸಮಸ್ಯೆಯಾಗುತ್ತಿದೆ.



ಉದಯವಾಹಿನಿ ಚಿತ್ರ

ಡಿ.ಕೆ.ಶಿವಕುಮಾರ್ ಅವರು ಖುದ್ದು ಅಸ್ಸಾಂ ವಿಧಾನಸಭಾ ಚುನಾವಣಾ ಉಸ್ತುವಾರಿಯಾಗಿರುವುದರಿಂದ ಎರಡು ಕ್ಷೇತ್ರಗಳ ಚುನಾವಣೆಯ ಹೊಣೆಗಾರಿಗೆ ಸಿದ್ದರಾಮಯ್ಯ ಅವರ ಹೆಗಲಿಗೆ ಬಿದ್ದಂತಾಗಿದೆ. ಜೊತೆಗೆ ನೆರೆಯ ಕೇರಳ ಹಾಗೂ ತಮಿಳುನಾಡು ರಾಜ್ಯಗಳ ಗಡಿ ಭಾಗದಲ್ಲೂ ಮುಖ್ಯಮಂತ್ರಿಯವರು ಪ್ರಚಾರ ಮಾಡಬೇಕಾಗಿದೆ. ಈ ಹಿನ್ನೆಲೆಯಲ್ಲಿ ಎರಡು ಕ್ಷೇತ್ರಗಳು ಉಪಚುನಾವಣೆ ನಿರ್ಲಕ್ಷ್ಯಕ್ಕೆ ಒಳಗಾಗದಂತೆ ಕಾಂಗ್ರೆಸ್ ಪಕ್ಷ ಎಚ್ಚರಿಕೆ ವಹಿಸುತ್ತಿದೆ. ಕೆಪಿಸಿಸಿಯ ಪದಾಧಿಕಾರಿಗಳನ್ನು ಮತ್ತು ಶಾಸಕರನ್ನು ಬೂತ್ ಮಟ್ಟಕ್ಕೆ ನಿಯೋಜನೆ ಮಾಡಿ, ಚುನಾವಣೆಯಲ್ಲಿ ಮತದಾರರನ್ನು ಸೆಳೆಯಲು ಪ್ರಯತ್ನಿಸಲಾಗುತ್ತಿದೆ. ಗೃಹಲಕ್ಷ್ಮಿ ಕಂತುಗಳನ್ನು ಸಾಲಮಿತಿಯಲ್ಲಿ ಪಾವತಿ ಮಾಡುವ ಮೂಲಕ ಮಹಿಳಾ ಮತದಾರರನ್ನು ಸೆಳೆಯಲು ಯೋಜನೆ ರೂಪಿಸಲಾಗಿದೆ. ಬಿಜೆಪಿ ಗೆದ್ದರೆ, ಅಲ್ಪಸಂಖ್ಯಾತರಿಗೆ, ದಲಿತರಿಗೆ ರಕ್ಷಣೆ ಇರುವುದಿಲ್ಲ ಎಂಬ ಸಂದೇಶವನ್ನು ಬಿತ್ತುವ ಮೂಲಕ ಆಕ್ರಮಣಾಕಾರಿ ಪ್ರಚಾರ ನಡೆಸಿರುವುದಾಗಿ ಕಾಂಗ್ರೆಸ್ ಮೂಲಗಳು ತಿಳಿಸಿವೆ. ಬಿಜೆಪಿ ಕಾಂಗ್ರೆಸ್ ವಿರುದ್ಧ ವಂಶಪಾರಂಪರೆಯ ರಾಜಕಾರಣದ ಆರೋಪ ಮಾಡುತ್ತಿದೆ. ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಅಲ್ಪಸಂಖ್ಯಾತರಿಗೆ ಟಿಕೆಟ್ ನೀಡದೆ ವಂಚಿಸಲಾಗಿದೆ ಎಂಬುದು ಬಿಜೆಪಿಗೆ ಟ್ರಂಪ್ ಕಾರ್ಡ್ ಆಗಿದೆ. ಅದಕ್ಕೆ ತಕ್ಕ ಪ್ರತ್ಯುತ್ತರ ನೀಡಲು ಕಾಂಗ್ರೆಸ್ ಪಕ್ಷ ಹೆಣಗಾಡುತ್ತಿದೆ. ಆಡಳಿತರೂಢ ಪಕ್ಷದಿಂದ ಅಧಿಕಾರ, ಹಣಕಾಸು ದುರ್ಬಳಕೆಯಾಗುತ್ತಿದೆ ಎಂದು ವಿರೋಧ ಪಕ್ಷಗಳ ಸಾಮಾನ್ಯ ಆರೋಪವಾಗಿರುವುದರಿಂದ ಅದಕ್ಕೆ ತಲೆ ಕೆಡಿಸಿಕೊಳ್ಳದೇ ಈ ಭಾರಿಯ ಚುನಾವಣೆಯನ್ನು ವಿಭಿನ್ನವಾಗಿ ನಡೆಸುವಂತೆ ಹಿರಿಯ ನಾಯಕರು ಕ್ಷೇತ್ರದ ಉಸ್ತುವಾರಿ ವಹಿಸಿಕೊಂಡ ಮುಖಂಡರಿಗೆ ಈಗಾಗಲೇ ಸೂಚನೆ ನೀಡಿದ್ದಾರೆ.

**ಗ್ಯಾರಂಟಿ ಯೋಜನೆಗಳ ವೈಭವೀಕರಣಕ್ಕೆ ಆದ್ಯತೆ**

ಚುನಾವಣೆಯ ಪ್ರಚಾರದ ವೇಳೆ ನಾಯಕತ್ವದ ವಿವಾದವನ್ನು ಯಾರೂ ಪ್ರಸ್ತಾಪಿಸಬಾರದು, ಜೊತೆಗೆ ಹೇಳಿಕೆಗಳು ವಿವಾದವಾಗದಂತೆ ಎಚ್ಚರಿಕೆ ವಹಿಸಬೇಕು. ಗೊಂದಲಕಾರಿ ಹೇಳಿಕೆಗಳ ಮೂಲಕ ಪಕ್ಷಕ್ಕೆ ಮುಜುಗರ ಉಂಟುಮಾಡಿದರೆ, ಮುಲಾಜಿಲ್ಲದೆ ಶಿಸ್ತು ಕ್ರಮ ಜರುಗಿಸುವುದಾಗಿ ಕಾಂಗ್ರೆಸ್ ಎಚ್ಚರಿಕೆ ನೀಡಿದೆ.

## ಬನಶಂಕರಿ ಮೇಲ್ಸೇವೆ ಅತ್ಯಗತ್ಯ : ಡಿಸಿಎಂಗೆ ರಾಮಲಿಂಗಾರೆಡ್ಡಿ ಪತ್ರ

• ಉದಯವಾಹಿನಿ, ಬೆಂಗಳೂರು

ಬನಶಂಕರಿ ದೇವಸ್ಥಾನದಿಂದ ಕನಕಪುರ ರಸ್ತೆ, ಹೊರ ವರ್ತುಲ ರಸ್ತೆಯ ವಾಹನ ದಟ್ಟಣೆಯನ್ನು ನಿವಾರಿಸಲು ರೂಪಿಸಿರುವ ಮೇಲ್ಸೇತುವೆ ಯೋಜನೆಯನ್ನು ಅನುಷ್ಠಾನಗೊಳಿಸಬೇಕು ಎಂದು ಸ್ಥಳೀಯ ಮುಖಂಡರು, ನಾಗರಿಕರು ಒತ್ತಾಯಿಸಿದ್ದಾರೆ.



ಈ ಮಧ್ಯೆ, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರಿಗೆ ಪತ್ರ ಬರೆದಿದ್ದು ಎರಡು ವರ್ಷದ ಹಿಂದೆ ರೂಪಿಸಿರುವ ಈ ಯೋಜನೆಯನ್ನು ಕೂಡಲೇ ಅನುಷ್ಠಾನಗೊಳಿಸಬೇಕು ಎಂದು ಮನವಿ ಮಾಡಿದ್ದಾರೆ. ಕನಕಪುರ ರಸ್ತೆ-ಬನಶಂಕರಿ ಜಂಕ್ಷನ್‌ನಲ್ಲಿ ಸಂಚಾರ ದಟ್ಟಣೆ ನಿವಾರಿಸಲು 2.5 ಕಿ.ಮೀ ಮೇಲ್ಸೇತುವೆ ನಿರ್ಮಾಣ ಮಾಡಲು 2023ರ ಆಗಸ್ಟ್ 19ರಂದು ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರು ಅಂದಿನ ಬಿಬಿಎಂಪಿ ಅಧಿಕಾರಿಗಳಿಗೆ ಸೂಚಿಸಿದ್ದರು.

ಬನಶಂಕರಿ ಜಂಕ್ಷನ್‌ನಲ್ಲಿ ಸಂಚಾರ ದಟ್ಟಣೆ ಉಂಟಾಗುತ್ತಿರುವ ಬಗ್ಗೆ ಸ್ಥಳ ಪರಿಶೀಲನೆ ನಡೆಸಿದ ಸಂದರ್ಭದಲ್ಲಿ, ಮೆಟ್ರೊ, ಬಿಬಿಎಂಪಿ ಅಧಿಕಾರಿಗಳು, ಸ್ಥಳೀಯ ಜನಪ್ರತಿನಿಧಿಗಳೊಂದಿಗೆ ಸಮಾಲೋಚನೆ ನಡೆಸಿದ್ದರು. ಬಿಎಂಆರ್‌ಸಿಎಲ್‌ನಿಂದ ಬನಶಂಕರಿ ಜಂಕ್ಷನ್‌ನಲ್ಲಿ 45 ಕೋಟಿ ವೆಚ್ಚದಲ್ಲಿ ಸ್ಕೈವಾಕ್ ನಿರ್ಮಿಸಲಾಗುತ್ತದೆ ಎಂದು ನಮ್ಮ ಮೆಟ್ರೊ ಅಧಿಕಾರಿಗಳು ಮಾಹಿತಿ ನೀಡಿದ್ದರು. ಆದರೆ, ಅಷ್ಟೊಂದು ವೆಚ್ಚ ಮಾಡಿದರೂ ಅದರಿಂದ ಸಂಚಾರ ದಟ್ಟಣೆ ಕಡಿಮೆಯಾಗುವುದಿಲ್ಲ ಎಂಬ ಅಭಿಪ್ರಾಯ ಅಂದು ವ್ಯಕ್ತವಾಗಿತ್ತು.

ಬನಶಂಕರಿ ಜಂಕ್ಷನ್‌ನಲ್ಲಿ ಹೆಚ್ಚಿನ ಸಂಚಾರ ದಟ್ಟಣೆ ಇದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ಹೆಚ್ಚಾಗಲಿದೆ. ಆದ್ದರಿಂದ ದೂರದೃಷ್ಟಿಯಿಂದ ಸಂಚಾರ ದಟ್ಟಣೆ ನಿವಾರಣೆಗೆ ಕ್ರಮ ಕೈಗೊಳ್ಳಬೇಕು. ಈ ಜಂಕ್ಷನ್ ಸೇರಿದಂತೆ ಐದಾರು ಜಂಕ್ಷನ್‌ಗಳಲ್ಲಿ ಸಿಗ್ನಲ್ ರಹಿತ ಸಂಚಾರಕ್ಕೆ ಅನುವಾಗುವಂತೆ ಮೇಲೇತುವೆ ನಿರ್ಮಿಸಬೇಕು ಎಂದು ಕಾಂಗ್ರೆಸ್‌ನ ಮುಖಂಡ ರಘುನಾಥ ನಾಯ್ಡು ಹಾಗೂ ಸ್ಥಳೀಯ ಮುಖಂಡರು ಮನವಿ ಮಾಡಿಕೊಂಡಿದ್ದರು.

**ಮೇಲ್ಸೇತುವೆ ಉಪಯೋಗಗಳು**

**ಯಡಿಯೂರು ಟರ್ಮಿನಲ್‌ನಿಂದ ಆರಂಭವಾಗುವ 2.5 ಕಿ.ಮೀ ಉದ್ದ ಇಂಟಿಗ್ರೇಟೆಡ್ ಮೇಲೇತುವೆ ಬನಶಂಕರಿ ಜಂಕ್ಷನ್ ಮೂಲಕ ಕನಕಪುರ ರಸ್ತೆಗೆ ಸಂಪರ್ಕಿಸಲಿದೆ. ಟಾಟಾ ಸಿಲ್ಕ್ ಫಾರ್ಮ್ ಜಂಕ್ಷನ್ ಯಡಿಯೂರು ಜಂಕ್ಷನ್ ಯಡಿಯೂರು ಹೆರಿಗೆ ಆಸ್ಪತ್ರೆ ಜಂಕ್ಷನ್ ಜೆಎಸ್‌ಎಸ್ ಕಾಲೇಜು ಜಂಕ್ಷನ್ ಹುಣಸೆಮರ ಜಂಕ್ಷನ್ ಬನಶಂಕರಿ ಜಂಕ್ಷನ್‌ನಲ್ಲಿ ಸಂಚಾರ ಸಿಗ್ನಲ್ ಮುಕ್ತವಾಗಲಿವೆ ಎಂದು ಪ್ರಸ್ತಾವದಲ್ಲಿ ತಿಳಿಸಲಾಗಿದೆ.**

## ಮೆಟ್ರೊ 3ನೇ ಹಂತ: 6,775 ಕೋಟಿ ಸಾಲಕ್ಕೆ ಒಪ್ಪಂದ



• ಉದಯವಾಹಿನಿ, ಬೆಂಗಳೂರು

ನಮ್ಮ ಮೆಟ್ರೊ ರೈಲು ಯೋಜನೆ ಹಂತ-3ಕ್ಕೆ ಸಂಬಂಧಿಸಿದಂತೆ 6,775 ಕೋಟಿ ಸಾಲ ಪಡೆಯುವ ಸಂಬಂಧ ಜಪಾನ್ ಅಂತರರಾಷ್ಟ್ರೀಯ ಸಹಕಾರ ಸಂಸ್ಥೆಯೊಂದಿಗೆ ಬೆಂಗಳೂರು ಮೆಟ್ರೊ ರೈಲು ನಿಗಮ ನಿಯಮಿತ ಒಪ್ಪಂದ ಮಾಡಿಕೊಂಡಿದೆ. ಭಾರತದಲ್ಲಿ ಇರುವ ಜೈಕಾ ಕಚೇರಿಯ ಮುಖ್ಯ ಪ್ರತಿನಿಧಿ ಮತ್ತು ಕೇಂದ್ರ ಸರ್ಕಾರದ ಆರ್ಥಿಕ ವ್ಯವಹಾರಗಳ ಇಲಾಖೆಯ ಜಂಟಿ ಕಾರ್ಯದರ್ಶಿ ಅಲೋಕ್ ತಿವಾರಿ ಒಪ್ಪಂದಕ್ಕೆ ಸಹಿ ಹಾಕಿದರು.

ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಜೆ. ರವಿಶಂಕರ್, ನಿರ್ದೇಶಕ ಎಸ್. ಶಿವಮಾಥನ್ ಉಪಸ್ಥಿತರಿದ್ದರು. 6,775 ಕೋಟಿ ಸಾಲವನ್ನು ಎರಡು ಹಂತಗಳಲ್ಲಿ ನೀಡಲು ಜೈಕಾ ಒಪ್ಪಿಕೊಂಡಿದೆ. ಮೊದಲ ಹಂತವಾಗಿ 6,100 ಕೋಟಿ ನೀಡಲಿದೆ. ಮೆಟ್ರೊ ಹಂತ-3 ಎರಡು ಕಾರಿಡಾರ್‌ಗಳನ್ನು ಹೊಂದಿದ್ದು, ಒಟ್ಟು 44.65 ಕಿಮೀ ಉದ್ದವಿದೆ. ಜೆ.ಪಿ ನಗರ 4ನೇ ಹಂತದಿಂದ ಕೆಂಪಾಪುರವರೆಗೆ 32.15 ಕಿ.ಮೀ., ಹೊಸಹಳ್ಳಿಯಿಂದ ಕಡಬಗೆರೆವರೆಗೆ 12.5 ಕಿ.ಮೀ. ಉದ್ದದ ಕಾರಿಡಾರ್‌ಗಳಾಗಿವೆ. ಈ ಯೋಜನೆಯ ಅಂದಾಜು ವೆಚ್ಚ 15,611 ಕೋಟಿಯಾಗಿದೆ. ಜೈಕಾ ಸಂಸ್ಥೆಯು 5 ಸಿವಿಲ್ ಪ್ಯಾಕೇಜುಗಳು, ಶಾಶ್ವತ ಪಥ, ರೋಲಿಂಗ್ ಸ್ಟಾಕ್, ಸಿಗ್ನಲಿಂಗ್ ಮತ್ತು ಟೆಲಿಕಮ್ಯುನಿಕೇಶನ್, ಆಟೋಮ್ಯಾಟಿಕ್ ಫೇರ್ ಕಲೆಕ್ಷನ್, ಟ್ರ್ಯಾಕ್ಷನ್, ಸಲಹಾ ಸೇವೆಗಳಿಗೆ ಹಣಕಾಸು ನೆರವು ನೀಡಲಿದೆ. ಸಾಲದ ಅವಧಿ 30 ವರ್ಷ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

## RCB vs SRH ಪಂದ್ಯಕ್ಕೆ ಮೆಟ್ರೊ ಸಂಚಾರ ಅವಧಿ ವಿಸ್ತರಣೆ

• ಉದಯವಾಹಿನಿ, ಬೆಂಗಳೂರು

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮಾರ್ಚ್ 28ರಂದು ನಡೆಯಲಿರುವ ಐಪಿಎಲ್ ಟಿ-20 ಕ್ರಿಕೆಟ್ ಪಂದ್ಯದ ಟಿಕೆಟ್ ಇರುವವರು 'ನಮ್ಮ ಮೆಟ್ರೊ'ದಲ್ಲಿ ಉಚಿತವಾಗಿ ಸಂಚರಿಸಲು ಅವಕಾಶ ಕಲ್ಪಿಸಿಕೊಡಲಾಗಿದೆ.

ಎರಡೂ ಕಡೆಯ ಪ್ರಯಾಣಕ್ಕೆ ಐಪಿಎಲ್ ಪಂದ್ಯದ ಟಿಕೆಟ್‌ಗಳಲ್ಲಿ 'ನಮ್ಮ ಮೆಟ್ರೊ' ಕ್ಯೂಆರ್ ಕೋಡ್ ಮುದ್ರಿತವಾಗಿರುತ್ತದೆ. ಡಿಜಿಟಲ್ ಐಪಿಎಲ್ ಟಿಕೆಟ್‌ಗಳಲ್ಲಿಯೂ ಲಭ್ಯವಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.



**ಅವಧಿ ವಿಸ್ತರಣೆ:** ಏ.28ರಂದು ವಿವಿಧ ಟರ್ಮಿನಲ್ ನಿಲ್ದಾಣಗಳಿಂದ ಕೊನೆಯ ಮೆಟ್ರೊ ಸಂಚಾರವನ್ನು ವಿಸ್ತರಣೆ ಮಾಡಲಾಗಿದೆ. ವೈಟ್‌ಫೀಲ್ಡ್‌ನಿಂದ ರಾತ್ರಿ 12.30ಕ್ಕೆ, ಚಲ್ಲಘಟ್ಟ, ರೇಷ್ಮೆ ಸಂಸ್ಥೆ,ಮಾದಾವರ ಟರ್ಮಿನಲ್‌ಗಳಿಂದ ರಾತ್ರಿ 12.45ಕ್ಕೆ, ಬೊಮ್ಮಸಂದ್ರಯಿಂದ ರಾತ್ರಿ 1ಕ್ಕೆ, ಆರ್.ವಿ. ರಸ್ತೆ ಯಿಂದ ರಾತ್ರಿ 2ಕ್ಕೆ ಕೊನೆ ರೈಲು ಸಂಚರಿಸಲಿದೆ. ಮೆಜೆಸ್ಟಿಕ್‌ನ ನಾಡಪ್ರಭು ಕೆಂಪೇಗೌಡ ನಿಲ್ದಾಣ-ಮೆಜೆಸ್ಟಿಕ್ ನಿಂದ ನಾಲ್ಕು ದಿಕ್ಕುಗಳಿಗೆ ಮಧ್ಯರಾತ್ರಿ 1:30ಕ್ಕೆ ಕೊನೆಯ ರೈಲು ಹೊರಡಲಿದೆ.

ಕಬ್ಬನ್ ರಸ್ತೆ ಭಾಗದಿಂದ ಸ್ಟೇಡಿಯಂಗೆ ಪ್ರವೇಶ /ನಿರ್ಗಮನ ಗೇಟ್‌ಗಳನ್ನು ಬಳಸುವ ಪ್ರೇಕ್ಷಕರು ಕಬ್ಬನ್ ಪಾರ್ಕ್ ಮೆಟ್ರೊ ನಿಲ್ದಾಣವನ್ನು ಬಳಸುವಂತೆ ಹಾಗೂ ಲಿಂಕ್ ರಸ್ತೆ ಭಾಗದಿಂದ ಪ್ರವೇಶ, ನಿರ್ಗಮನ ಗೇಟ್‌ಗಳನ್ನು ಬಳಸುವ ಪ್ರೇಕ್ಷಕರು ಸಮೀಪದಲ್ಲಿರುವ ಮಹಾತ್ಮ ಗಾಂಧಿ ರಸ್ತೆ ಮೆಟ್ರೊ ನಿಲ್ದಾಣವನ್ನು ಬಳಸುವಂತೆ ಸೂಚಿಸಲಾಗಿದೆ.

ಯಾವುದೇ ಅನಾಹುತಗಳು ಅಥವಾ ಅಹಿತಕರ ಘಟನೆಗಳನ್ನು ತಡೆಗಟ್ಟುವ ಹಿತದೃಷ್ಟಿಯಿಂದ, ಅಗತ್ಯವಿದ್ದಲ್ಲಿ ಮೆಟ್ರೊ ನಿಲ್ದಾಣಗಳ ಪ್ರವೇಶ ದ್ವಾರಗಳನ್ನು ನಿಯಂತ್ರಿಸುವ ಅಥವಾ ತಾತ್ಕಾಲಿಕವಾಗಿ ಮುಚ್ಚುವ ಹಕ್ಕನ್ನು ಬಿಎಂಆರ್‌ಸಿಎಲ್ ಹೊಂದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

# ಎಲ್ಲರಂತೆ ನಿಮ್ಮನ್ನು ಟೀಕಿಸಲು ಆಗಲ್ಲ

### ಕಾರಣ ನಟ್ಟು, ಬೋಲ್ಟ್ ಟೈಟ್ ಚಿಂತೆ, ಡಿಕೆಶಿ ಕಾಲೆಳೆದ ಸುರೇಶ್ ಕುಮಾರ್

• ಉದಯವಾಹಿನಿ, ಬೆಂಗಳೂರು


ಎಲ್ಲರನ್ನು ಟೀಕೆ ಮಾಡಿದಂತೆ ನಿಮ್ಮನ್ನು ಟೀಕಿಸಲು ಆಗಲ್ಲ.ಕಾರಣ, ಅವರಿಗೆ ನಟ್ಟು, ಬೋಲ್ಟ್ ಟೈಟ್ ಚಿಂತೆ ಇದೆ ಎಂದು ಡಿಸಿಎಂ ಡಿಕೆ ಶಿವಕುಮಾರ್ ಅವರ ಕಾಲೆಳೆದಿದ್ದು ಬಿಜೆಪಿ ಸದಸ್ಯ ಸುರೇಶ್ ಕುಮಾರ್. ಬೆಂಗಳೂರು ಅಭಿವೃದ್ಧಿ ವಿಚಾರವಾಗಿ ನಡೆದ ಚರ್ಚೆಗೆ ಉತ್ತರ ನೀಡುತ್ತಿದ್ದ ಸಂದರ್ಭದಲ್ಲಿ ಮಧ್ಯಪ್ರವೇಶ ಮಾಡಿದ ಸುರೇಶ್ ಕುಮಾರ್ ಡಿಕೆಶಿ ಈ ಹಿಂದೆ ನೀಡಿದ್ದ ನಟ್ಟು ಬೋಲ್ಟ್ ಹೇಳಿಕೆಯನ್ನು ಪರೋಕ್ಷವಾಗಿ ಉಲ್ಲೇಖಿಸಿ ಟಾಂಗ್ ನೀಡಿದರು.

ಎಲ್ಲರನ್ನು ಟೀಕೆ ಮಾಡಿದಂತೆ ನಿಮ್ಮನ್ನು ಟೀಕೆ ಮಾಡೋಕೆ ಆಗಲ್ಲ. ಯಾಕೆಂದರೆ ಅವರಿಗೆ ನಟ್ಟು ಬೋಲ್ಟ್ ಟೈಟ್ ಚಿಂತೆ ಇದೆ ಎಂದ ಸುರೇಶ್ ಕುಮಾರ್ ಹೇಳಿಕೆಗೆ, 'ಇರಲಿ ಸುರೇಶ್ ಕುಮಾರ್ ನನ್ನ ಸ್ನೇಹಿತರು' ಎಂದು ತಮ್ಮ ಉತ್ತರ ಮುಂದುವರಿಸಿದರು. ಇದಕ್ಕೂ ಮೊದಲು ಮಾತನಾಡಿದ್ದ ಡಿಸಿಎಂ ಡಿಕೆಶಿ, ಇವತ್ತು ಡಿಕೆ ಶಿವಕುಮಾರ್‌ರನ್ನು ಟೀಕೆ ಮಾಡಬಹುದು. ಆದರೆ ಬರುವ ಐದು ವರ್ಷಗಳಲ್ಲಿ ಡಿಕೆಶಿಯ ಕಾರ್ಯವನ್ನು ಹೊಗಳುತ್ತಾರೆ. ಅಷ್ಟೇ ಸಾಕು ನನಗೆ, ನನಗೇನೋ ಸಮಾಧಾನ ಇದೆ. ಬೇರೆಯವರನ್ನು ಒಪ್ಪಿಸದೇ ಇರಬಹುದು. ರಾಜಕಾರಣ ಅಂದಾಗ ಕೆಲವರು ಮೊಟ್ಟೆನೂ ಹೊಡೆಯುತ್ತಾರೆ ಇರಲಿ ಎಂದರು.

**ನನಗೇನೋ ಸಮಾಧಾನ ಇದೆ**



ಕೆಲವೊಂದು ಪ್ರಮುಖ ತೀರ್ಮಾನ ತಗೊಂಡಿದ್ದೇವೆ. ಪಾಲಿಕೆಗಳಿಗೆ ಹೆಚ್ಚಿನ ಅಧಿಕಾರ ಕೊಡಲಾಗಿದೆ. ಎಸ್‌ಎಂಕೆ ಕಾಲದಲ್ಲಿ ಐದು ರೂಗೆ ಒಂದು ಪಹಣಿ ಕೊಡ್ತಿದ್ರು. ಪಹಣಿಗೆ ಪ್ರತಿಯೊಬ್ಬ ಆಸ್ತಿ ಮಾಲೀಕನಿಗೂ ಪ್ರತ್ಯೇಕ ನಂಬರ್ ಕೊಟ್ಟಿದ್ದೇವೆ. ನಗರದಲ್ಲಿ 25 ಲಕ್ಷ ಆಸ್ತಿಗಳಿವೆ, ಇಲ್ಲೀವರೆಗೆ 9.5 ಲಕ್ಷ ಆಸ್ತಿಗಳಿಗೆ ಪಹಣಿ ಕೊಟ್ಟಿದ್ದೇವೆ. ನಗರದಲ್ಲಿ ಎಲ್ಲಾ ರಸ್ತೆಗಳೂ ಸರ್ಕಾರಿ ಆಸ್ತಿಗಳು, ಖಾಸಗಿ ರಸ್ತೆಗಳೂ ಸರ್ಕಾರಿ ಆಸ್ತಿ ಅಂತ ಮಾಡಿದ್ದೇವೆ ಎಂದು ವಿವರಿಸಿದರು. ಹೈದರಾಬಾದ್ ಜಗತ್ತಿನ ಟೆಕ್ ಹಬ್‌ನಲ್ಲಿ 24 ನೇ ಸ್ಥಾನದಲ್ಲಿದೆ, ಬೆಂಗಳೂರು ಆರನೇ ಸ್ಥಾನದಲ್ಲಿದೆ. ನಾನು ಕನಕಪುರದವನು, ಬೆಂಗಳೂರಿನಲ್ಲಿ ಹುಟ್ಟಿಲ್ದೇ ಇರಬಹುದು.ಸಿಕ್ಕಿರುವ ಅವಕಾಶದಲ್ಲಿ ನಾನೂ ಬೆಂಗಳೂರಿಗೆ ಏನಾದರೂ ಕೊಡುಗೆ ಕೊಡಬೇಕು ಅಂತ ಬಯಸಿದ್ದೇನೆ ಎಂದರು. ಬೆಂಗಳೂರಿನಲ್ಲಿ 250 ಇಂಜಿನಿಯರಿಂಗ್, 70 ಮೆಡಿಕಲ್ ಕಾಲೇಜುಗಳಿವೆ, ಇದು ದೇಶದ ಯಾವ ನಗರದಲ್ಲೂ ಇಲ್ಲ. 13940 ವೈದ್ಯರ ಉತ್ಪಾದನೆ ಪ್ರತೀವರ್ಷ ರಾಜ್ಯದಲ್ಲಿ ಆಗ್ತಿದೆ, ಇವರಲ್ಲಿ ಬಹುತೇಕರು ಹೊರಗೆ ಹೋಗ್ತಿದ್ದಾರೆ, ಇಲ್ಲೂ ಕೆಲವರು ಉಳ್ಕೋತಾರೆ. ಬೆಂಗಳೂರು ಕಾಪಾಡಿಕೊಂಡು ಹೋಗುವುದು ಅನಿವಾರ್ಯ ಎಂದರು. ಟ್ರಾಫಿಕ್ ವಿಚಾರದಲ್ಲಿ ಬಹಳ ಕೆಲಸ ನಡೀತಿದೆ. ರಸ್ತೆ ಅಗಲೀಕರಣ ಮಾಡ್ತಿದ್ದೇವೆ. ಪೆರಿಫೆರಲ್ ರಿಂಗ್ ರಸ್ತೆ ಮಾಡ್ತಿದ್ದೇವೆ, ರೈತರಿಗೆ ಉತ್ತಮ ಪರಿಹಾರ ಕೊಡ್ತಿದ್ದೇವೆ ಎಂದರು.



**■ ಡಿಕೆಶಿ ಅವರ ನಟ್ಟು ಬೋಲ್ಟ್ ಹೇಳಿಕೆ ಉಲ್ಲೇಖಿಸಿ ಅವರನ್ನು ಯಾರೂ ಟೀಕಿಸಲು ಸಾಧ್ಯವಿಲ್ಲ ಏಕೆಂದರೆ ಅವರಿಗೆ ನಟ್ಟು ಬೋಲ್ಟ್ ಟೈಟ್ ಚಿಂತೆ ಎಂದು ಟೀಕಿಸಿದ್ದಾರೆ.**

**■ ಇದೀಗ ನನ್ನನ್ನು ಟೀಕಿಸಬಹುದು ಆದರೆ ಮುಂದಿನ 5 ವರ್ಷಗಳಲ್ಲಿ ನನ್ನ ಕಾರ್ಯವನ್ನು ಹೊಗಳುತ್ತಾರೆ ಎಂದಿದ್ದ ಡಿಕೆಶಿ.**

**■ ಬೆಂಗಳೂರಿನಲ್ಲಿ ಸುರಂಗ ಮಾರ್ಗದ ಅಗತ್ಯವ ಬಗ್ಗೆ ಡಿಕೆಶಿ ಹೇಳಿದ್ದೇನು?**

**ಸುರಂಗ ಮಾರ್ಗವೇ ಪರಿಹಾರ**

**ನಗರದೊಳಗೆ ರಸ್ತೆ ಅಗಲೀಕರಣ ಕಷ್ಟ ಇದೆ, ಕಟ್ಟಡಗಳನ್ನು ಒಡೆದು ಹಾಕಲು ಆಗುವುದಿಲ್ಲ. ಬೆಂಗಳೂರು ಟನೆಲ್ ರೋಡ್ ಮಾಡ್ತಿದ್ದೇವೆ. ಹೊಸ ರಸ್ತೆ ಮಾಡಬೇಕು, ರಸ್ತೆ ಅಗಲೀಕರಣ ಮಾಡಬೇಕು ಇಲ್ಲವೇ ಟನೆಲ್ ರೋಡ್ ಮಾಡಬೇಕು ಇಷ್ಟೇ ಪರಿಹಾರ ಎಂದು ಡಿಕೆ ಶಿವಕುಮಾರ್ ಸರ್ಕಾರದ ನಡೆಯನ್ನು ಸಮರ್ಥಿಸಿಕೊಂಡರು.**

# ಅದ್ದೂರಿಯಾಗಿ ಅಂಬೇಡ್ಕರ್ ಮತ್ತು ಬಾಬು ಜಗಜೀವನರಾಂ ಜಯಂತಿ ಆಚರಣೆಗೆ ನಿರ್ಧಾರ

• **ಉದಯವಾಹಿನಿ, ಗುಂಡ್ಲುಪೇಟೆ**


ಉದಯವಾಹಿನಿ ಚಿತ್ರ

ತಾಲ್ಲೂಕು ಆಡಳಿತದ ವತಿಯಿಂದ ಅದ್ದೂರಿಯಾಗಿ ಡಾ.ಬಿ.ಆರ್. ಅಂಬೇಡ್ಕರ್ ಮತ್ತು ಬಾಬೂ ಜಗಜೀವನ್ ರಾಮ್ ಜಯಂತಿ ಆಚರಣೆ ಮಾಡುವಂತೆ ನಿರ್ಧರಿಸಲಾಯಿತು. ಪಟ್ಟಣದ ತಾಲ್ಲೂಕು ಕಚೇರಿ ಸಭಾ ಭವನದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಮಾಜಿ ಉಪ ಪ್ರಧಾನಿ ಡಾ.ಬಾಬು ಜಗಜೀವನ್ ರಾಮ್ ಜಯಂತಿ ಆಚರಣೆ ಸಂಬಂಧ ನಡೆದ ಪೂರ್ವಭಾವಿ ಸಭೆಯಲ್ಲಿ ವಿವಿಧ ಸಂಘಟನೆ ಮತ್ತು ದಲಿತ ಮುಖಂಡರು ಮಾತನಾಡಿ, ಬಾಬೂ ಜಗಜೀವನ್ ರಾಮ್ ಜಯಂತಿಯನ್ನು ಏ.4ರಂದು ವಿವಿಧ ಕಲಾ ತಂಡಗಳ ಸಮೇತ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಬಾಬೂಜೀ ಭಾವಚಿತ್ರ ಸಮೇತ ಮೆರವಣಿಗೆ ನಡೆಸಬೇಕು. ನಂತರ ಹಳೇ ಬಸ್ ನಿಲ್ದಾಣದ ಪುರಸಭೆ ಬಯಲು ರಂಗ ಮಂದಿರದಲ್ಲಿ ವೇದಿಕೆ ಕಾರ್ಯಕ್ರಮ ಆಯೋಜನೆ ಮಾಡಬೇಕು ಎಂದು ಒತ್ತಾಯಿಸಿದರು.

**ಆನೆ ಮೇಲೆ ಅಂಬೇಡ್ಕರ್ ಭಾವಚಿತ್ರ, ಮೆರವಣಿಗೆ ನಡೆಸಿ:** ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿಯನ್ನು ಏ.14ರಂದು ಅದ್ದೂರಿಯಿಂದ ಆಚರಣೆ ಮಾಡಬೇಕು ವಿವಿಧ ಕಲಾ ತಂಡಗಳ ಸಮೇತ ಆನೆ ಮೇಲೆ ಅಂಬೇಡ್ಕರ್ ಭಾವಚಿತ್ರ ಮೆರವಣಿಗೆ ನಡೆಸುವ ಮೂಲಕ ಡಿ.ದೇವರಾಜ ಅರಸು ಕ್ರೀಡಾಂಗಣದಲ್ಲಿ ವೇದಿಕೆ ಕಾರ್ಯಕ್ರಮ ಆಯೋಜಿಸಬೇಕು ಎಂದು ಹಲವು ಮಂದಿ ಮುಖಂಡರು ಮನವಿ ಮಾಡಿದರು.

ವಿವಿಧ ಸಂಘಟನೆ ಹಾಗೂ ಸಮುದಾಯದ ಮುಖಂಡರ ಸಲಹೆ ಆಲಿಸಿ ನಂತರ ಮಾತನಾಡಿದ ತಹಶೀಲ್ದಾರ್ ತನ್ಮಯ್, ಈ ಬಾರಿಯ ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಬಾಬೂ ಜಗಜೀವನ್ ರಾಮ್ ಜಯಂತಿಯನ್ನು ಅದ್ದೂರಿಯಿಂದ ಆಚರಣೆ ಮಾಡಲು ನಿರ್ಧರಿಸಲಾಗಿದೆ. ಎಲ್ಲರ ಸಲಹೆ, ಸೂಚನೆ ಕಾರ್ಯಕ್ರಮ ನಡೆಸಲಾಗುವುದು ಎಂದು ತಿಳಿಸಿ, ತಾಲ್ಲೂಕಿನ ಎಲ್ಲಾ ಇಲಾಖೆಯ ಅಧಿಕಾರಿಗಳು ಗೈರಾಗದೆ ಕಡ್ಡಾಯವಾಗಿ ಹಾಜರಾಗಬೇಕು ಎಂದು ಖಡಕ್ ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಸ್ವಾಮಿ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಮೋಹನ್ ಕುಮಾರ್, ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಶಶಿಧರ್, ಮುಖಂಡರಾದ ಹೂಣಸನಪುರ ನಂಜುಂಡಸ್ವಾಮಿ, ಆರ್.ಡಿ.ಉಲ್ಲಾಸ್, ಗೋವಿಂದನಾಯಕ, ಮುತ್ತಣ್ಣ, ಈಶ್ವರ್, ಸುಭಾಷ್ ಮಾಡ್ರಹಳ್ಳಿ, ಬಲಚಲವಾಡಿ ಚಿಕ್ಕಣ್ಣ, ರಮೇಶ್, ಮಲ್ಲಿಕಾರ್ಜುನ್, ಬ್ರಹ್ಮಾನಂದ ಸೇರಿದಂತೆ ಹಲವು ಮಂದಿ ಮುಖಂಡರು ಹಾಜರಿದ್ದರು.

# ನ್ಯಾಯಯುತವಾಗಿ ಜಂಟಿ ಸರ್ವೆ ನಡೆಸಿ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಕೆ.ಆರ್.ನಗರ**

ಸುಪ್ರೀಂ ಕೋರ್ಟ್ ಸೂಚನೆಯಂತೆ ಮಾರ್ಚ್ 26ರಂದು ಕಂದಾಯ ಮತ್ತು ಅರಣ್ಯ ಇಲಾಖೆಗಳ ಜಂಟಿ ಸರ್ವೆ ಕಾರ್ಯ ನ್ಯಾಯಯುತವಾಗಿ ನಡೆಸಿ ತಾಲ್ಲೂಕಿನ ಮಳಲಿ ಗ್ರಾಮದ ದಲಿತ ಕುಟುಂಬಗಳಿಗೆ ಮಂಜೂರಾದ ಭೂಮಿಯನ್ನು ಸ್ವಾಧೀನಕ್ಕೆ ನೀಡಬೇಕು ಎಂದು ದಲಿತ ಸಂಘರ್ಷ ಸಮಿತಿ ರಾಜ್ಯ ಸಂಘಟನಾ ಸಂಚಾಲಕ ನಿಂಗರಾಜ್ ಮಲ್ಲಾಡಿ ಅವರು ಜಿ.ಸುರೇಂದ್ರಮೂರ್ತಿ ಅವರನ್ನು ಒತ್ತಾಯಿಸಿದರು. ತಹಶೀಲ್ದಾರ್ ಅವರಿಗೆ ಈಚೆಗೆ ಮನವಿ ಸಲ್ಲಿಸಿ ಮಾತನಾಡಿದ ಅವರು, 1954ರಲ್ಲಿ ಮಳಲಿ ಗ್ರಾಮದ ಸರ್ವೆ ನಂಬರ್ 90ರಲ್ಲಿ 20 ಕುಟುಂಬಗಳಿಗೆ ತಲಾ 2 ಎಕರೆಯಂತೆ ಸರ್ಕಾರ ಸಾಗುವಳಿ ಮಂಜೂರು ಮಾಡಿದೆ. ಅದರಂತೆ ಎಲ್ಲಾ ಕುಟುಂಬಗಳು ಉಳುಮೆ ಮಾಡಿಕೊಂಡು ಜೀವನ ಸಾಗಿಸುತ್ತಿದ್ದವು. ಈ ಭೂಮಿ ಅರಣ್ಯ ಇಲಾಖೆಗೆ ಸೇರಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಅಲ್ಲಿನ 12 ದಲಿತ ಕುಟುಂಬಗಳನ್ನು ಒಕ್ಕಲೆಬ್ಬಿಸಿದ್ದರಿಂದ ಬೀದಿಗೆ ಬಿದ್ದಿವೆ. ಅಧಿಕಾರಿಗಳ ಸುಳ್ಳು ವರದಿಯಿಂದ ಜಮೀನು ಬಿಡಿಸಿಕೊಳ್ಳಲು ಕಷ್ಟವಾಗುತ್ತಿದೆ' ಎಂದು ದೂರಿದರು.

ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಸಿದ್ದಪ್ಪ ಮಾತನಾಡಿ, 12 ದಲಿತ ಕುಟುಂಬಗಳನ್ನು ಒಕ್ಕಲೆಬ್ಬಿಸಿ ದೌರ್ಜನ್ಯವೆಸಗಿರುವುದು ಖಂಡನೀಯ. ಧ್ವನಿಯಿಲ್ಲದ, ದಿಕ್ಕಿಲ್ಲದ ಅಸಹಾಯಕ ದಲಿತರಿಗೆ ಮಂಜೂರಾದ ಭೂಮಿಯನ್ನು ಕೂಡಲೇ ಹಿಂದಿರುಗಿಸಬೇಕು ಎಂದು ಒತ್ತಾಯಿಸಿದರು. ತಹಶೀಲ್ದಾರ್ ಜಿ.ಸುರೇಂದ್ರಮೂರ್ತಿ ಮಾತನಾಡಿ, ಮಾರ್ಚ್ 26ರಂದು ಜಂಟಿ ಸರ್ವೆ ಕಾರ್ಯ ನಡೆಯಲಿದೆ. ಅರಣ್ಯ ಇಲಾಖೆಯ ಮತ್ತು ದಲಿತರಿಗೆ ಮಂಜೂರಾಗಿರುವ ಭೂಮಿಯನ್ನು ಪ್ರತ್ಯೇಕವಾಗಿ ಅಳತೆ ಮಾಡಿ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಭರವಸೆ ನೀಡಿದರು.

# ಒಡೆಯರ್ ಎಕ್ಸ್‌ಪ್ರೆಸ್ ರೈಲು ನಿಲುಗಡೆಗೆ ಕೇಂದ್ರ ಅಸ್ತು

## ಬೆಂಗಳೂರು – ಮೈಸೂರು ಒಡೆಯರ್ ಎಕ್ಸ್‌ಪ್ರೆಸ್: ಹೆಚ್ಚುವರಿ ನಿಲುಗಡೆಗೆ ಕೇಂದ್ರ ರೈಲ್ವೇ ಅನುಮೋದನೆ

• **ಉದಯವಾಹಿನಿ, ರಾಮನಗರ**


ಉದಯವಾಹಿನಿ ಚಿತ್ರ

ರಾಜ್ಯದ ಪ್ರಾದೇಶಿಕ ರೈಲು ಸಂಪರ್ಕಕ್ಕೆ ಮಹತ್ವದ ನಿರ್ಧಾರವನ್ನು ಕೇಂದ್ರ ಸರಕಾರ ಕೈಗೊಂಡಿದ್ದು, ಮೈಸೂರು–ಕೆಎಸ್‌ಆರ್ ಬೆಂಗಳೂರು ನಡುವೆ ನಿತ್ಯವು ಸಂಚರಿಸಲಿರುವ ಒಡೆಯರ್ ಎಕ್ಸ್‌ಪ್ರೆಸ್ ರೈಲು ರಾಮನಗರದಲ್ಲಿ ನಿಲುಗಡೆಗೆ ಅನುಮೋದನೆ ನೀಡಲಾಗಿದೆ. ಈ ಬಗ್ಗೆ ಕೇಂದ್ರದ ರೈಲ್ವೇ ಸಚಿವರಾದ ಅಶ್ವಿನ್ ವೈಷ್ಣವ್ ಅವರಿಗೆ ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಮಂತ್ರಿಗಳಾದ ಹೆಚ್.ಡಿ. ಕುಮಾರಸ್ವಾಮಿ ಅವರು ಮಾಡಿದ್ದ ಮನವಿ ಫಲಪ್ರದವಾಗಿದೆ.

ಮಂಗಳವಾರ ರೈಲ್ವೆ ಸಚಿವಾಲಯ ಈ ಬಗ್ಗೆ ಆದೇಶ ಹೊರಡಿಸಿದೆ. ಈ ಮೂಲಕ ರಾಮನಗರದಿಂದ ನಿತ್ಯವೂ ಬೆಂಗಳೂರಿಗೆ ಸಂಚರಿಸುವ ಪ್ರಯಾಣಿಕರಿಗೆ ಹೆಚ್ಚು ಅನುಕೂಲ ಆಗಲಿದೆ. ಈ ಬಗ್ಗೆ ಸಚಿವ ಕುಮಾರಸ್ವಾಮಿ ಅವರು ಸಂತಸ ವ್ಯಕ್ತಪಡಿಸಿದ್ದಾರೆ. ಫೆಬ್ರವರಿ 4, 2026ರಂದು ಹೆಚ್.ಡಿ. ಕುಮಾರಸ್ವಾಮಿ ಅವರು ಸಚಿವ ಅಶ್ವಿನಿ ವೈಷ್ಣವ್ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿದ್ದರು.

- **ಕೇಂದ್ರ ಸಚಿವ ಕುಮಾರಸ್ವಾಮಿ ಅವರ ಮನವಿಗೆ ಸ್ಪಂದಿಸಿದ ಕೇಂದ್ರ ರೇಲ್ವೆ ಸಚಿವ ಅಶ್ವಿನ್ ವೈಷ್ಣವ್**
- **ಮೈಸೂರು ಮತ್ತು ಬೆಂಗಳೂರು ನಡುವಿನ ರೇಲು ಸಂಪರ್ಕಕ್ಕೆ ಮತಷ್ಟು ಉತ್ತೇಜನ**

**ರಾಮನಗರದಿಂದ ಸಾವಿರಾರು ಪ್ರಯಾಣಿಕರು ಬೆಂಗಳೂರಿಗೆ:** ಪ್ರತಿನಿತ್ಯವೂ ರಾಮನಗರದಿಂದ ಸಾವಿರಾರು ಪ್ರಯಾಣಿಕರು ಬೆಂಗಳೂರಿಗೆ ಉದ್ಯೋಗ, ಶಿಕ್ಷಣ, ವ್ಯಾಪಾರ ಇತ್ಯಾದಿ ಉದ್ದೇಶಗಳಿಗೆ ಹೋಗಿ ಬರುತ್ತಾರೆ. ಅದರಲ್ಲಿಯೂ ಮುಖ್ಯವಾಗಿ ಗಾರ್ಮೆಂಟ್ಸ್ ಉದ್ಯಮದಲ್ಲಿ ಸಾವಿರಾರು ಮಹಿಳೆಯರು ಕೆಲಸಕ್ಕಾಗಿ ರಾಜಧಾನಿಗೆ ದಿನನಿತ್ಯವೂ ಹೋಗಿ ಬರುತ್ತಾರೆ. ಅಲ್ಲದೆ, ಶಿಕ್ಷಣಕ್ಕೆ ವಿದ್ಯಾರ್ಥಿಗಳು ಹೋಗಿ ಬರುತ್ತಾರೆ. ಕೂಲಿ ಕಾರ್ಮಿಕರಿಗೆ ಕೂಡ ಈ ರೈಲು ನಿಲುಗಡೆಯಿಂದ ಹೆಚ್ಚು ಪ್ರಯೋಜನ ಆಗಲಿದೆ ಎಂದು ಕುಮಾರಸ್ವಾಮಿ ಮಾಧ್ಯಮ ಹೇಳಿಕೆಯಲ್ಲಿ ತಿಳಿಸಿದ್ದಾರೆ.

**ರಾಜ್ಯದಲ್ಲಿಯೇ ಅತಿಹೆಚ್ಚು ಜನರು ಸಂಚರಿಸುವ ಕಾರಿಡಾರ್:** ರಾಮನಗರದಲ್ಲಿ ಒಡೆಯರ್ ಎಕ್ಸ್ ಪ್ರೆಸ್ ರೈಲು ನಿಲುಗಡೆ ನೀಡಬೇಕು ಎಂಬುದು ಈ ಭಾಗದ ದೀರ್ಘಕಾಲದ ಸಾರ್ವಜನಿಕ ಬೇಡಿಕೆ ಆಗಿತ್ತು. ಜನರ ಬೇಡಿಕೆಗೆ ಕೇಂದ್ರ ಸರಕಾರ ಸ್ಪಂದಿಸಿದೆ. ರಾಜ್ಯದಲ್ಲಿ ಬೆಂಗಳೂರು ಮತ್ತು ಮೈಸೂರು ನಡುವೆ ದೊಡ್ಡ ಪ್ರಮಾಣದಷ್ಟು ಜನರು ಪ್ರಯಾಣ ಮಾಡುತ್ತಾರೆ. ರಾಜ್ಯದಲ್ಲಿಯೇ ಅತಿಹೆಚ್ಚು ಜನರು ಸಂಚರಿಸುವ ಕಾರಿಡಾರ್‌ಗಳಲ್ಲಿ ಇದೂ ಒಂದಾಗಿದ್ದು, ಈ ಉಪಕ್ರಮದಿಂದ ರಾಮನಗರ ಜಿಲ್ಲೆಯ ಜನರಿಗೆ ಹೆಚ್ಚು ಅನುಕೂಲ ಆಗಲಿದೆ ಎಂದು ಸಚಿವರು ತಿಳಿಸಿದ್ದಾರೆ.

### ಕೇಂದ್ರ ಸಚಿವ ಕುಮಾರಸ್ವಾಮಿ ಹೇಳಿಕೆ

**ಮೈಸೂರು ಮತ್ತು ಕೆಎಸ್‌ಆರ್ ಬೆಂಗಳೂರು ನಡುವೆ ಒಡೆಯರ್ ಎಕ್ಸ್‌ಪ್ರೆಸ್ ರಾಮನಗರದಲ್ಲಿ ನಿಲ್ಲುತ್ತದೆ. ಈ ನಿಲುಗಡೆಗೆ ಅನುಮೋದನೆ ನೀಡಿದ ಕೇಂದ್ರದ ರೇಲ್ವೆ ಸಚಿವ ಅಶ್ವಿನ್ ವೈಷ್ಣವ್ ಅವರಿಗೆ ಹೃದಯಪೂರ್ವಕ ಧನ್ಯವಾದಗಳು. ಇತ್ತೀಚೆಗೆ ರೇಲ್ವೆ ಸಚಿವರ ಜತೆ ನಡೆದ ಭೇಟಿ ಸಂದರ್ಭದಲ್ಲಿ ಈ ಬಗ್ಗೆ ಮನವಿ ಮಾಡಲಾಗಿತ್ತು. ಈ ವಿನಂತಿ ಮೇರೆಗೆ ರೇಷ್ಮೆನಾಡು ರಾಮನಗರ ಜಿಲ್ಲೆಯ ರೈಲು ಪ್ರಯಾಣಿಕರಿಗೆ ಬಹಳಷ್ಟು ಅನುಕೂಲವಾಗುವ ನಿರ್ಧಾರವನ್ನು ಕೈಗೊಂಡಿದ್ದಾರೆ. ಪ್ರಧಾನಿಗಳಾದ ನರೇಂದ್ರ ಮೋದಿ ಅವರ ದೂರದೃಷ್ಟಿ ನಾಯಕತ್ವದಲ್ಲಿ ರಾಷ್ಟ್ರದ ಸಂಚಾರ ವ್ಯವಸ್ಥೆಯನ್ನು ಮತ್ತಷ್ಟು ಸುಗಮಗೊಳಿಸಲಾಗುತ್ತಿದೆ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವರಾದ ಎಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ.**

# ಮೈಸೂರಿನ ಹೈದರಾಲಿ ರಸ್ತೆ ಸಂಚಾರಕ್ಕೆ ರೆಡಿ

• **ಉದಯವಾಹಿನಿ, ಮೈಸೂರು**



ನಜರಾಬಾದ್‌ನ ಹೈದರಾಲಿ ರಸ್ತೆಯಲ್ಲಿ ನಡೆಯುತ್ತಿರುವ ರಸ್ತೆ ಸಮತಟ್ಟುಗೊಳಿಸುವಿಕೆ, ವಿಸ್ತರಣಾ ಕಾಮಗಾರಿ ಅಂತಿಮ ಹಂತಕ್ಕೆ ತಲುಪಿದ್ದು, ಏಪ್ರಿಲ್‌ನಲ್ಲಿ ನವೀಕೃತ ರಸ್ತೆ ಉದ್ಘಾಟನೆಗೊಳ್ಳಲಿದೆ. 10 ಮೀಟರ್ ಅಗಲವಿದ್ದ ರಸ್ತೆಯನ್ನು ಈಗ 30 ಮೀಟರ್‌ಗೆ ವಿಸ್ತರಿಸಲಾಗಿದೆ.

ಸುಮಾರು 4 ಕೋಟಿ ರೂ. ವೆಚ್ಚದಲ್ಲಿ ಕೈಗೊಳ್ಳಲಾಗಿರುವ ಈ ಕಾಮಗಾರಿಯನ್ನು ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಅವರ ಸ್ಥಳೀಯ ಕ್ಷೇತ್ರಾಭಿವೃದ್ಧಿ ನಿಧಿಯಡಿ ರಾಜ್ಯ ಹಣಕಾಸು ಆಯೋಗದ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ರಸ್ತೆ ವಿಸ್ತರಣೆ ಹಿನ್ನೆಲೆಯಲ್ಲಿ ರಸ್ತೆಯಲ್ಲಿದ್ದ 40ಕ್ಕೂ ಹೆಚ್ಚು ಮರಗಳನ್ನು ತೆರವುಗೊಳಿಸಿದ ಘಟನೆ ವಿವಾದದ ಸ್ವರೂಪ ಪಡೆದುಕೊಂಡು ರಾಜ್ಯಾದ್ಯಂತ ಸುದ್ದಿಯಾಗಿತ್ತು.

**ಏನಿದು ಕಾಮಗಾರಿ?:** ಎಸ್‌ಪಿ ಕಚೇರಿ ವೃತ್ತದಿಂದ ನೆಕ್ಸಸ್ ಮಾಲ್ ಸಮೀಪದ ಕಾಳಿಕಾಂಬ ದೇವಾಲಯದವರೆಗಿನ ಈ ರಸ್ತೆಯನ್ನು ಸಮಗ್ರ ಅಭಿವೃದ್ಧಿ ಯೋಜನೆಯಡಿ ವಿಸ್ತರಿಸಲಾಗಿದೆ. ಮೈಸೂರು ನಗರದ ಸಮಗ್ರ ಅಭಿವೃದ್ಧಿ ಯೋಜನೆ ಅನುಸಾರವಾಗಿ ಕೈಗೊಂಡ ಈ ಯೋಜನೆಯಲ್ಲಿ ಮೀಡಿಯನ್, ಎರಡು ಬದಿಗಳಲ್ಲೂ ಫುಟ್‌ಪಾತ್, ಸ್ಟಾಮ್‌ರ್ವಾಟರ್ ಬಾಕ್ಸ್ ಡ್ರೈನ್, ಬೀದಿ ದೀಪಗಳನ್ನು ಅಳವಡಿಸಲಾಗುತ್ತಿದೆ. ರಸ್ತೆಯ ಮಧ್ಯದಲ್ಲಿ 2.5 ಮೀಟರ್ ಅಗಲದ ಕೇಂದ್ರ ಮೀಡಿಯನ್ ನಿರ್ಮಿಸಲಾಗಿದ್ದು, ಶೀಘ್ರದಲ್ಲೇ ಇಲ್ಲಿ ಹೂವಿನ ಸಸಿಗಳನ್ನು ನೆಡಲಾಗುವುದು. ಎರಡು ಬದಿಗಳಲ್ಲೂ ಬಾಕ್ಸ್ ಡ್ರೈನ್‌ಗಳನ್ನು ಹಾಕಲಾಗಿದ್ದು, ನೀರು ನಿಂತುಹೋಗುವ ಸಮಸ್ಯೆಗೆ ಶಾಶ್ವತ ಪರಿಹಾರ ದೊರಕಲಿದೆ. ಪಾದಚಾರಿಗಳ ಸೌಕರ್ಯಕ್ಕಾಗಿ ಸಿಮೆಂಟ್ ಟೈಲ್ಸ್‌ನಿಂದ ಫುಟ್‌ಪಾತ್ ಅಭಿವೃದ್ಧಿಪಡಿಸಲಾಗುತ್ತಿದೆ. ಕಾಮಗಾರಿಗಳು ಅಂತಿಮ ಹಂತ ತಲುಪಿದ್ದು, ಮಾರ್ಚ್ ಅಂತ್ಯದೊಳಗೆ ಪೂರ್ಣಗೊಳ್ಳಲಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

**ಜಂಕ್ಷನ್‌ನಲ್ಲಿ ದೃಷ್ಟಿ ಸಮಸ್ಯೆಗೆ ಪರಿಹಾರ :** ಹೈದರ್ ಅಲಿ ರಸ್ತೆ, ಎಸ್‌ಪಿ ಆಫೀಸ್ ರಸ್ತೆ, ಕರ್ನಾಟಕ ಪೊಲೀಸ್ ಅಕಾಡೆಮಿ (ಕೆಪಿಎ) ರಸ್ತೆಗಳು ಸಂಧಿಸುವ ಜಂಕ್ಷನ್‌ನಲ್ಲಿ ಈ ಹಿಂದೆ ಇದ್ದ ತೀವ್ರ ಎತ್ತರದ ವ್ಯತ್ಯಾಸದಿಂದ ಅಜೀಜ್ ಸೇಠ್ ರಸ್ತೆಯಿಂದ ಬರುವ ವಾಹನಗಳಿಗೆ ಅಡಚಣೆಯಾಗುತ್ತಿತ್ತು. ಮಾಲ್ ಕಡೆಯಿಂದ ಬರುವ ಚಾಲಕರಿಗೆ ಎದುರು ಬರುವ ವಾಹನಗಳು ಸರಿಯಾಗಿ ಕಾಣುತ್ತಿರಲಿಲ್ಲ. ಇದರಿಂದ ಅಪಘಾತ, ಸಂಚಾರ ದಟ್ಟಣೆ ಸಮಸ್ಯೆ ಸಂಭವಿಸುತ್ತಿತ್ತು. ಈ ಸಮಸ್ಯೆಗೆ ಪರಿಹಾರವಾಗಿ ಜಂಕ್ಷನ್‌ನಲ್ಲಿದ್ದ ಎತ್ತರದ ಪ್ರದೇಶವನ್ನು ಸಮತಟ್ಟುಗೊಳಿಸಲಾಗಿದೆ. ಮೂರು ದಿಕ್ಕುಗಳಿಂದ ಬರುವ ಸಂಚಾರವನ್ನು ಗಮನಿಸಿ ಇಂಜಿನಿಯರ್‌ಗಳು ವೈಜ್ಞಾನಿಕವಾಗಿ ಜಂಕ್ಷನ್ ಅನ್ನು ಮರುವಿನ್ಯಾಸಗೊಳಿಸಿದ್ದಾರೆ. ಸಂಚಾರ ಪೊಲೀಸರು ಜಂಕ್ಷನ್‌ನಲ್ಲಿ ಸಿಗ್ನಲ್ ದೀಪಗಳನ್ನು ಅಳವಡಿಸಿದ್ದಾರೆ. ಫುಟ್‌ಪಾತ್, ಬೀದಿ ದೀಪಗಳ ಸ್ಥಾಪನೆ ಮತ್ತು ಕೇಂದ್ರ ಮೀಡಿಯನ್‌ನಲ್ಲಿ ಸಸಿ ನೆಡುವ ಕಾಮಗಾರಿ ಏಪ್ರಿಲ್ ಎರಡನೇ ವಾರದೊಳಗೆ ಪೂರ್ಣಗೊಳ್ಳುವ ಸಾಧ್ಯತೆ ಇದೆ. ಏಪ್ರಿಲ್ ಅಂತ್ಯಕ್ಕೆ ರಸ್ತೆಯನ್ನು ಅಧಿಕೃತವಾಗಿ ಉದ್ಘಾಟಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

# ಅಡುಗೆ ಅನಿಲಕ್ಕಾಗಿ ಗ್ರಾಹಕರ ಪರದಾಟ


• **ಉದಯವಾಹಿನಿ, ಮಾಗಡಿ**

ಪಟ್ಟಣದ ಹೊಂಬಾಳಮ್ಮಕೆರೆ ಸಮೀಪ ಇರುವ ಎಚ್.ಪಿ ಗ್ಯಾಸ್ ಏಜೆನ್ಸಿ ಮುಂಭಾಗದಲ್ಲಿ ಸಿಲಿಂಡರ್ ಪಡೆಯಲು ನೂರಾರು ಗ್ರಾಹಕರು ಸಾಲುಗಟ್ಟಿ ನಿಂತಿದ್ದ ದೃಶ್ಯ ಬುಧವಾರ ಕಂಡುಬಂದಿತು. ಗೃಹ ಬಳಕೆ ಅನಿಲ ತುಂಬಿದ ಲಾರಿ ಬಂದ ಸುದ್ದಿ ತಿಳಿಯುತ್ತಿದ್ದಂತೆ ತಾಲ್ಲೂಕಿನಾದ್ಯಂತ ಜನರು ಮುಗಿಬಿದ್ದ ಕಾರಣ ತೀವ್ರ ನೂಕುನುಗ್ಗಲು ಉಂಟಾಗಿತ್ತು.

ಕುದೂರು, ತಿಪ್ಪಸಂದ್ರ ಸೇರಿದಂತೆ ತಾಲ್ಲೂಕಿನ ವಿವಿಧ ಗ್ರಾಮೀಣ ಭಾಗಗಳಿಂದ ನೂರಾರು ಗ್ರಾಹಕರು ಆಗಮಿಸಿದ್ದರು. ಲಾರಿಯಿಂದ ಸಿಲಿಂಡರ್ ಇಳಿಸುವ ಮೊದಲೇ ನೂರಾರು ಜನರು ಮುಗಿಬಿದ್ದಿದ್ದರಿಂದ ಏಜೆನ್ಸಿ ಮುಂಭಾಗದಲ್ಲಿ ಗೊಂದಲದ ವಾತಾವರಣ ನಿರ್ಮಾಣವಾಗಿತ್ತು. ಮಹಿಳೆಯರು ಮತ್ತು ಹಿರಿಯ ನಾಗರಿಕರು ಬಿಸಿಲಿನಲ್ಲಿ ಗಂಟೆಗಟ್ಟಲೆ ಸಾಲು ನಿಲ್ಲಬೇಕಾದ ಪರಿಸ್ಥಿತಿ ಎದುರಾಯಿತು.

ಗ್ರಾಹಕರು ದೂರದ ಹಳ್ಳಿಗಳಿಂದ ತಮ್ಮ ದ್ವಿಚಕ್ರ ವಾಹನ ಮತ್ತು ಆಟೋಗಳಲ್ಲಿ ಖಾಲಿ ಸಿಲಿಂಡರ್‌ಗಳನ್ನು ಹೊತ್ತು ತಂದರು. 'ಗ್ರಾಮೀಣ ಭಾಗಗಳಲ್ಲಿ ಸರಿಯಾದ ಸಮಯಕ್ಕೆ ವಿತರಣೆ ವ್ಯವಸ್ಥೆ ಇಲ್ಲದ ಕಾರಣ ನಾವು ಇಲ್ಲಿಗೆ ಬರಬೇಕಾಗಿದೆ. ಗಂಟೆಗಟ್ಟಲೆ ಸಿಲಿಂಡರ್ ಪಡೆಯಲು ನಿಲ್ಲುವಂತಾಗಿದೆ' ಎಂದು ಗ್ರಾಹಕರು ತಮ್ಮ ಅಳಲು ತೋಡಿಕೊಂಡರು. ತಾಲ್ಲೂಕು ಆಡಳಿತ ಮತ್ತು ಗ್ಯಾಸ್ ಏಜೆನ್ಸಿ ಗ್ರಾಮೀಣ ಭಾಗಗಳಲ್ಲಿ ಸುಗಮವಾಗಿ ಸಿಲಿಂಡರ್ ವಿತರಿಸಲು ಕ್ರಮ ಕೈಗೊಳ್ಳಬೇಕು. ನೂಕು ನುಗ್ಗಲು ತಪ್ಪಿಸಲು ಟೋಕನ್ ವ್ಯವಸ್ಥೆ ಜಾರಿಗೆ ತರಬೇಕು ಎಂದು ಸಾರ್ವಜನಿಕರ ಒತ್ತಾಯಿಸಿದರು.

ಪಟ್ಟಣದ ಕೆಲವು ಏಜೆನ್ಸಿಗಳು ಮನೆ ಬಾಗಿಲಿಗೆ ಸಿಲಿಂಡರ್ ವಿತರಣೆ ಮಾಡುತ್ತಿದ್ದಾರೆ. ಆದರೆ ಎಚ್.ಪಿ.ಗ್ಯಾಸ್ ಏಜೆನ್ಸಿಯವರು ಮಾತ್ರ ಮನೆ ಬಾಗಿಗೆ ಕಳುಹಿಸದೆ ಏಜೆನ್ಸಿ ಅಂಗಡಿ ಬಳಿ ಬಂದು ಗ್ರಾಹಕರೆ ಸಿಲಿಂಡರ್ ತೆಗೆಕೊಂಡು ಹೋಗುವಂತೆ ಮಾಡಿದ್ದಾರೆ. ಮನೆ ಬಾಗಿಲಿಗೆ ಸಿಲಿಂಡರ್ ತಲುಪಿಸಬೇಕು ಇಲ್ಲವಾದರೆ ಏಜೆನ್ಸಿಯನ್ನು ಕೈ ಬಿಡುತ್ತೇವೆ ಎಂದು ಮಾಗಡಿಯ ಆನಂದ್ ಹೇಳಿದರು.



ಉದಯವಾಹಿನಿ ಚಿತ್ರ

# ಮೈಸೂರು ವಿಶ್ವವಿದ್ಯಾಲಯ: ಸಂಸದ, ಕುಲಪತಿ, ಕುಲಸಚಿವರಿಂದ ಚಿನ್ನದ ಪದಕ ದತ್ತಿ

• **ಉದಯವಾಹಿನಿ, ಮೈಸೂರು**


ಉದಯವಾಹಿನಿ ಚಿತ್ರ

ಇಲ್ಲಿನ ಮೈಸೂರು ವಿಶ್ವವಿದ್ಯಾಲಯದಲ್ಲಿ ವಿವಿಧ ವಿಷಯಗಳಲ್ಲಿ ಅತಿ ಹೆಚ್ಚು ಅಂಕ ಗಳಿಸುವ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಹಾಗೂ ನಗದು ಬಹುಮಾನ ನೀಡಲು ವಿವಿಧ ದತ್ತಿ ಸ್ಥಾಪನೆಗೆ ಅನುಮೋದನೆ ನೀಡಲಾಯಿತು. ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಶಿಕ್ಷಣ ಮಂಡಳಿ ವಿಶೇಷ ಸಭೆಯಲ್ಲಿ ಕುಲಸಚಿವೆ ಎಂ.ಕೆ. ಸವಿತಾ ದತ್ತಿಗಳ ವಿವರವನ್ನು ಮಂಡಿಸಿದರು.

ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಅವರು ಸಾವಿತ್ರಮ್ಮ ಮತ್ತು ಕೃಷ್ಣಪ್ಪಗೌಡ ನೆರಟೂರು ಚಿನ್ನದ ಪದಕ ಹಾಗೂ ತಮ್ಮ ಹೆಸರಿನಲ್ಲಿ ದತ್ತಿ ಸ್ಥಾಪಿಸಿದ್ದಾರೆ. ಇದನ್ನು ಕ್ರಮವಾಗಿ, ಸ್ನಾತಕ (ಬಿ.ಎಸ್ಸಿ.) ಪರೀಕ್ಷೆಯಲ್ಲಿ ಭೌತವಿಜ್ಞಾನ ವಿಷಯದಲ್ಲಿ ಅತಿ ಹೆಚ್ಚು ಅಂಕ ಪಡೆದ ಹಾಗೂ ಭೌತವಿಜ್ಞಾನ ಸ್ನಾತಕೋತ್ತರ ವಿಷಯದಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಅಭ್ಯರ್ಥಿಗೆ ನೀಡಲಾಗುವುದು. ಚಾಮರಾಜನಗರ ಸಂಸದ ಸುನೀಲ್ ಬೋಸ್ ಅವರು ತಂದೆ, ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಅವರ ಹೆಸರಿನಲ್ಲಿ ಚಿನ್ನದ ಪದಕ ನೀಡಲು ದತ್ತಿ ನಿಧಿ ಸ್ಥಾಪಿಸಿದ್ದಾರೆ. ಮಾನಸಗಂಗೋತ್ರಿಯ ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದಲ್ಲಿ ಅಂತಿಮ ವರ್ಷದಲ್ಲಿ ಮೊದಲ ಬಾರಿಗೆ ಅತಿ ಹೆಚ್ಚು ಅಂಕ ಗಳಿಸಿ ತೇರ್ಗಡೆಯಾಗುವ ಅಭ್ಯರ್ಥಿಗೆ ಚಿನ್ನದ ಪದಕ ನೀಡಲಾಗುವುದು. ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಶಿಕ್ಷಣ ಮಂಡಳಿ ವಿಶೇಷ ಸಭೆಯಲ್ಲಿ ಕುಲಸಚಿವೆ ಎಂ.ಕೆ. ಸವಿತಾ ದತ್ತಿಗಳ ವಿವರವನ್ನು ಮಂಡಿಸಿದರು. ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಅವರು ಸಾವಿತ್ರಮ್ಮ ಮತ್ತು ಕೃಷ್ಣಪ್ಪಗೌಡ ನೆರಟೂರು ಚಿನ್ನದ ಪದಕ ಹಾಗೂ ತಮ್ಮ ಹೆಸರಿನಲ್ಲಿ ದತ್ತಿ ಸ್ಥಾಪಿಸಿದ್ದಾರೆ. ಇದನ್ನು ಕ್ರಮವಾಗಿ, ಸ್ನಾತಕ (ಬಿ.ಎಸ್ಸಿ.) ಪರೀಕ್ಷೆಯಲ್ಲಿ ಭೌತವಿಜ್ಞಾನ ವಿಷಯದಲ್ಲಿ ಅತಿ ಹೆಚ್ಚು ಅಂಕ ಪಡೆದ ಹಾಗೂ ಭೌತವಿಜ್ಞಾನ ಸ್ನಾತಕೋತ್ತರ ವಿಷಯದಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಅಭ್ಯರ್ಥಿಗೆ ನೀಡಲಾಗುವುದು.

ಚಾಮರಾಜನಗರ ಸಂಸದ ಸುನೀಲ್ ಬೋಸ್ ಅವರು ತಂದೆ, ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಅವರ ಹೆಸರಿನಲ್ಲಿ ಚಿನ್ನದ ಪದಕ ನೀಡಲು ದತ್ತಿ ನಿಧಿ ಸ್ಥಾಪಿಸಿದ್ದಾರೆ. ಮಾನಸಗಂಗೋತ್ರಿಯ ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದಲ್ಲಿ ಅಂತಿಮ ವರ್ಷದಲ್ಲಿ ಮೊದಲ ಬಾರಿಗೆ ಅತಿ ಹೆಚ್ಚು ಅಂಕ ಗಳಿಸಿ ತೇರ್ಗಡೆಯಾಗುವ ಅಭ್ಯರ್ಥಿಗೆ ಚಿನ್ನದ ಪದಕ ನೀಡಲಾಗುವುದು.

## ಎಚ್‌ಪಿವಿ ಲಸಿಕೆ ಕ್ಯಾನ್ಸರ್‌ಗೆ ಬ್ರಹ್ಮಾಸ್ತ್ರ: ಯಳಂದೂರಿನಲ್ಲಿ ಲಸಿಕೆ ವಿತರಣೆ

# ಸರ್ಕಾರದಿಂದ ಬಾಲಕಿಯರಿಗೆ ಉಚಿತವಾಗಿ ಲಸಿಕೆ

• **ಉದಯವಾಹಿನಿ, ಯಳಂದೂರು**


ಉದಯವಾಹಿನಿ ಚಿತ್ರ

ತಾಲ್ಲೂಕಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಗರ್ಭಕಂಠದ ಕ್ಯಾನ್ಸರ್ ತಡೆಗೆ ನೀಡುವ ಹೂಮನ್ ಪ್ಯಾಪಿಲೋಮ ವೈರಸ್ (ಎಚ್‌ಪಿವಿ) ಲಸಿಕೆ ನೀಡುವ ಕಾರ್ಯಕ್ಕೆ ಚಾಲನೆ ನೀಡಲಾಗಿದೆ. ಲಭ್ಯತೆ ಆಧಾರದ ಮೇಲೆ ಬೇಡಿಕೆಗೆ ತಕ್ಕಂತೆ ಪ್ರತಿದಿನ ವಯೋಮಾನದ ಆಧಾರದ ಮೇಲೆ ಲಸಿಕೆ ಹಾಕಲಾಗುತ್ತಿದೆ. ದುಬಾರಿ ಬೆಲೆಯ ಎಚ್‌ಪಿವಿ ತಡೆ ಲಸಿಕೆ ನೀಡಲು ತಾಲ್ಲೂಕು ಆರೋಗ್ಯ ಇಲಾಖೆ ಸಜ್ಜಾಗಿದೆ. ತಾಲ್ಲೂಕಿನಲ್ಲಿ 14-15 ವಯೋಮಾನದ ಬಾಲಕಿಯರಿಗೆ ಸರ್ಕಾರ ಉಚಿತವಾಗಿ ಲಸಿಕೆ ನೀಡುತ್ತಿದೆ.

ಫಲಾನುಭವಿಗಳ ಆಯ್ಕೆಗೂ ಮೊದಲೇ ಲಸಿಕೆ ನೀಡುವ ಯೋಜನೆ ಆರಂಭವಾಗಿದ್ದು, ತಾಲ್ಲೂಕಿನಲ್ಲಿ ಸುಮಾರು 600 ವಿದ್ಯಾರ್ಥಿನಿಯರಿಗೆ ಈ ಲಸಿಕೆ ವಿತರಿಸುವ ಗುರಿ ಹೊಂದಲಾಗಿದೆ. ಅಮೇರಿಕದ ಗಾರ್ಡಿಸಿಲ್ ಕಂಪನಿ ಉತ್ಪಾದಿಸುವ ಲಸಿಕೆಯನ್ನು ಮಾರ್ಚ್ 1 ರಿಂದ 30ರ ವರೆಗೆ ಪ್ರತಿಯೊಬ್ಬರಿಗೂ 1 ಡೋಸ್‌ನಂತೆ ವಿತರಿಸಲಾಗುತ್ತಿದೆ. ಮಕ್ಕಳಿಗೆ ಲಸಿಕೆ ಕೊಡಿಸುವ ನಿಟ್ಟಿನಲ್ಲಿ ಪೋಷಕರು ಮುಂದೆ ಬರಬೇಕು. ಶಿಕ್ಷಕರ ಸಹಕಾರವೂ ಇರಬೇಕು. ಸದ್ಯ 100 ಮಕ್ಕಳಿಗೆ ಲಸಿಕೆ ನೀಡಿದ್ದು, ಡೋಸ್ ಲಭ್ಯತೆ ಆಧಾರದ ಮೇಲೆ ಪ್ರತಿದಿನ ಲಸಿಕೆ ನೀಡಲಾಗುತ್ತದೆ. ಲಸಿಕೆ ನೀಡಲು ಶುಶೂಷಕರಿಗೆ ತರಬೇತಿ ನೀಡಲಾಗಿದೆ. ಇತರೆ ಚುಚ್ಚುಮದ್ದು ನೀಡುವ ಮಾದರಿಯಲ್ಲಿ ಈ ಲಸಿಕೆಯನ್ನೂ ನೀಡಲಾಗುತ್ತದೆ.

**ಲಸಿಕೆ ಯಾವುದೇ ಅಡ್ಡ ಪರಿಣಾಮ ಬೀರದು**

ಪ್ರೌಢಶಾಲೆಗಳ ವಿದ್ಯಾರ್ಥಿನಿಯರು ಇದರ ಉಪಯೋಗ ಪಡೆಯಬೇಕು. ಬಾಲಕಿಯರು ಲಸಿಕೆ ಪಡೆಯುವ ಮೊದಲು ಪೋಷಕರಿಂದ ಅನುಮತಿ ಪತ್ರ ಹೊಂದಿರಬೇಕು. ಈ ಬಗ್ಗೆ ಮುಖ್ಯ ಶಿಕ್ಷಕರು ಕಾಳಜಿ ವಹಿಸಬೇಕು. ಬಾಲಕಿಯ ಆಧಾರ್ ಸಂಖ್ಯೆ ಮತ್ತು ತಂದೆ-ತಾಯಿ ಫೋನ್ ಸಂಖ್ಯೆ ಸಂಖ್ಯೆ ನಮೂದಿಸಿ, ಒಟಿಪಿ ಬಂದ ನಂತರ ಅಂಥವರಿಗೆ ಲಸಿಕೆ ಹಾಕಲಾಗುತ್ತದೆ. ಲಸಿಕೆ ಪಡೆದ ಬಗ್ಗೆ ಆರೋಗ್ಯ ಇಲಾಖೆ ಪೋರ್ಟಲ್ ನಲ್ಲಿ ನೋಂದಾಯಿಸಲಾಗುತ್ತದೆ' ಎಂದು ಆಸ್ಪತ್ರೆ ವೈದ್ಯಾಧಿಕಾರಿ ಡಾ.ಶ್ರೀಧರ್ ತಿಳಿಸಿದರು. ಲಸಿಕೆ ಯಾವುದೇ ಅಡ್ಡ ಪರಿಣಾಮ ಬೀರದು. ಈ ಬಗ್ಗೆ ಶಾಲಾ-ಕಾಲೇಜುಗಳಲ್ಲಿ ಜಾಗೃತಿ ಮೂಡಿಸಲಾಗಿದೆ. ಎಚ್‌ಪಿವಿ ಲಸಿಕೆ ನೀಡಿದ ನಂತರ 10 ನಿಮಿಷ ವಿಶ್ರಾಂತಿ ಇರಲಿದೆ. ಸರ್ಕಾರಿ ರಜಾ ದಿನ ಹೊರತು ಪಡಿಸಿ, ಬೆಳಿಗ್ಗೆ 9 ರಿಂದ 1 ಗಂಟೆ ನಡುವೆ ಪೋಷಕರ ಉಪಸ್ಥಿತಿಯಲ್ಲಿ ಲಸಿಕೆ ಪಡೆಯಬಹುದು. ಈ ಸಮಯ ಯು-ವಿನ್ ಆ್ಯಪ್‌ನಲ್ಲೂ ನಮೂದಿಲಾಗುತ್ತದೆ. 'ಬೇಡ' ಎಂದು ತಿರಸ್ಕರಿಸುವ ಆಯ್ಕೆಯೂ ಲಭ್ಯವಿದೆ ಎಂದು ವೈದ್ಯರು ಹೇಳಿದರು.

ಯಳಂದೂರು ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ತಾಲ್ಲೂಕು ವೈದ್ಯಾಧಿಕಾರಿ ಡಾ. ತನುಜಾ ಸಮ್ಮುಖದಲ್ಲಿ ಲಸಿಕೆ ನೀಡಲಾಯಿತು. ಆಸ್ಪತ್ರೆ ವೈದ್ಯಾಧಿಕಾರಿ ಡಾ.ಶ್ರೀಧರ್ ನೇತೃತ್ವದಲ್ಲಿ ವಿದ್ಯಾರ್ಥಿನಿಯರಿಗೆ ಗರ್ಭ ಕಂಠದ ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸಲಾಯಿತು.

### ಖಾಸಗಿ ಆಸ್ಪತ್ರೆಗಳಲ್ಲಿ ದುಬಾರಿ

**ಮಹಿಳೆಯರನ್ನು ಕಾಡುವ ಗರ್ಭಕಂಠದ ಕ್ಯಾನ್ಸರ್ ದೇಶದಲ್ಲಿ ಎರಡನೇ ಸ್ಥಾನದಲ್ಲಿ ಇದ್ದು, ಈ ಕಾಯಿಲೆ ತಡೆಯುವ ನಿಟ್ಟಿನಲ್ಲಿ ಎಚ್‌ಪಿವಿ ಲಸಿಕೆ ಪ್ರಮುಖವಾಗಿದೆ. ಆಯ್ದ ಖಾಸಗಿ ಆಸ್ಪತ್ರೆಗಳಲ್ಲಿ ಪಡೆಯುವ ಎಚ್‌ಪಿವಿ ಲಸಿಕೆಗೆ ಹೆಚ್ಚು ಶುಲ್ಕ ಪಾವತಿಸಬೇಕಿದೆ. ಹೀಗಾಗಿ, ಸರ್ಕಾರ ಎಲ್ಲಾ ಮಕ್ಕಳಿಗೂ ತಲುಪಿಸುವ ಆಶಯದೊಂದಿಗೆ ಅಭಿಯಾನ ಆರಂಭಿಸಿದೆ.**

**-ಡಾ.ತನುಜಾ, ತಾಲ್ಲೂಕು ವೈದ್ಯಾಧಿಕಾರಿ**

# ಕೆ.ಸಿ.ವ್ಯಾಲಿ ನೀರು ಕುಡಿಯಲು ಕೊಟ್ಟಿದ್ದೇವೆಯೇ?

• **ಉದಯವಾಹಿನಿ, ಕೋಲಾರ**


ಉದಯವಾಹಿನಿ ಚಿತ್ರ

ಕೆ.ಸಿ.ವ್ಯಾಲಿ ನೀರಿಗೆ ವಿರೋಧ ಏಕೆ? ನಾವೇನು ಈ ನೀರನ್ನು ಕುಡಿಯಲು ಕೊಟ್ಟಿದ್ದೇವೆಯೇ? ಈ ನೀರು ಬಳಕೆಗೆ ಯೋಗ್ಯ ಅಲ್ಲ. ಕುಡಿಯಲು, ಪಾತ್ರೆ, ಬಟ್ಟೆ ತೊಳೆಯಲು ಬಳಸುವಂಥದ್ದಲ್ಲ. ಜಿಲ್ಲೆಯಲ್ಲಿ ಅಂತರ್ಜಲ ಮಟ್ಟ ಹೆಚ್ಚಿಸುವುದಷ್ಟೇ ಕೆ.ಸಿ.ವ್ಯಾಲಿ ಯೋಜನೆಯ ಉದ್ದೇಶವಾಗಿದೆ ಎಂದು ಶಾಸಕ ಕೊತ್ತೂರು ಮಂಜುನಾಥ್, ವ್ಯಾಲಿ ಯೋಜನೆಯನ್ನು ಸಮರ್ಥಿಸಿಕೊಂಡರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ನೀರು ಒಮ್ಮೆ ಅಂತರ್ಜಲ ಸೇರಿದರೆ, ಮಣ್ಣಿನಲ್ಲಿ ಬೆರೆತರೆ 10ನೇ ಹಂತದ ಶುದ್ಧೀಕರಣವಾಗಿ ಬಿಡುತ್ತದೆ. 440 ಎಂಎಲ್ ಡಿ ನೀರು ಬರಬೇಕಿತ್ತು. ಸದ್ಯ 240 ಎಂಎಲ್‌ಡಿ ನೀರು ಬರುತ್ತಿದೆ. ಅಕಸ್ಮಾತ್ ಮೂರನೇ ಹಂತದ ಶುದ್ಧೀಕರಣ ಮಾಡಿದರೆ 40 ಎಂಎಲ್‌ಡಿ ನೀರು ಕೂಡ ಬರಲ್ಲ. ಆಗ ನರಸಾಪುರ, ಬೆಳ್ಳೂರು, ಚೌಡದೇನಹಳ್ಳಿ ಕೆರೆ ತುಂಬಿಸುವಷ್ಟರಲ್ಲಿ ನೀರು ಮುಗಿದು ಹೋಗುತ್ತದೆ ಎಂದರು.

ಜಿಲ್ಲೆಯಲ್ಲಿ ಹಿಂದೆ ನಮ್ಮಲ್ಲಿ 2 ಸಾವಿರ ಅಡಿ ಕೊಳವೆ ಬಾವಿ ತೋಡಿದರೂ ನೀರು ಬರುತ್ತಿರಲಿಲ್ಲ. ಹೀಗಾಗಿ, ಎರಡನೇ ಹಂತದ ಶುದ್ಧೀಕರಣ ಮಾಡಿ ನೀರು ತಂದೆವು. ಈಗ ನಮ್ಮ ಜಿಲ್ಲೆಯಲ್ಲಿ 300 ಅಡಿಗೆ ನೀರು ಸಿಗುತ್ತಿದ್ದು, ರೈತರಿಗೆ ಅನುಕೂಲವಾಗಿದೆ. ರೈತರೇನು ಈ ಕೆರೆಗಳ ಅಚ್ಚುಕಟ್ಟು ಪ್ರದೇಶದಲ್ಲಿ ಭತ್ತ ಬೆಳೆಯುತ್ತಿಲ್ಲ. ಎತ್ತಿನಹೊಳೆ ಬಂದ ಮೇಲೆ ಕೆ.ಸಿ.ವ್ಯಾಲಿ ನೀರುವ ಹರಿಯುವ ಪ್ರಮಾಣ ಕಡಿಮೆ ಆಗುತ್ತದೆ. ಎಲ್ಲಿ ಅಂತರ್ಜಲ ಮಟ್ಟದ ಸಮಸ್ಯೆ ಇದೆಯೋ ಅಲ್ಲಿಗೆ ಮಾತ್ರ ಹರಿಸಲಾಗುವುದು. ಶೀಘ್ರದಲ್ಲೇ ಎತ್ತಿನಹೊಳೆ ನೀರು ಬರಲಿದೆ ಎಂದು ತಿಳಿಸಿದರು. ಕೋಲಾರ ನಗರ ಹಾಗೂ ತಾಲ್ಲೂಕಿನಲ್ಲಿ ನಾವೇನು ಕೆಲಸ ಮಾಡುತ್ತಿದ್ದೇವೆ ಎಂದು ನಾವು ಹೇಳುವುದಿಕ್ಕಿಂತ ಜನರೇ ಮಾತನಾಡುತ್ತಿದ್ದಾರೆ. ವೈದ್ಯಕೀಯ ಕಾಲೇಜು, ರಿಂಗ್ ರಸ್ತೆ, ಎಪಿಎಂಸಿಗೆ ಜಾಗದ ಬಗ್ಗೆ ಆದ್ಯತೆ ನೀಡಿದ್ದೇವೆ. ಆರೋಗ್ಯ ಭಾಗ್ಯ, ರೈತರಿಗೆ ಉತ್ತಮ ಬೆಲೆ ದೊರಕಿಸಿಕೊಡುವುದು ನಮ್ಮ ಮುಖ್ಯ ಉದ್ದೇಶವಾಗಿದೆ ಎಂದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಲೂರಿಗೆ ಏಪ್ರಿಲ್ 1ಕ್ಕೆ ಬರಬೇಕಿತ್ತು. ಅದನ್ನು ಮುಂದೂಡಲಾಗಿದ್ದು, ಏ.15ರ ನಂತರ ಭೇಟಿ ನೀಡಲಿದ್ದಾರೆ. ಕೋಲಾರಕ್ಕೂ ನಂತರದ ದಿನಗಳಲ್ಲಿ ಬರಲಿದ್ದಾರೆ. ದೇವನಹಳ್ಳಿ, ವೇಮಗಲ್, ನರಸಾಪುರ, ಮಾಲೂರು, ಹೊಸೂರು ಹೆದ್ದಾರಿ ರಸ್ತೆಗೂ ಆಗ ಚಾಲನೆ ನೀಡಲಿದ್ದಾರೆ. ಈಗಾಗಲೇ ನಾಲ್ಕು ಪಥಗಳ ಈ ರಸ್ತೆಗೆ ಟೆಂಡರ್ ಆಗಿದ್ದು, 150 ಇಂಜಿನಿಯರ್‌ಗಳು ಸಮೀಕ್ಷೆಯಲ್ಲಿ ತೊಡಗಿದ್ದಾರೆ ಎಂದು ಹೇಳಿದರು. ಅರಹಳ್ಳಿ ವಿವಿಧೋದ್ದೇಶದ ಪ್ರಾಥಮಿಕ ಕೃಷಿ ಗ್ರಾಮೀಣ ಸಂಘದ ಆಡಳಿತ ಮಂಡಳಿ ಚುನಾವಣೆ ಮಾರ್ಚ್ 28ರಂದು ನಡೆಯಲಿದೆ. ಕಾಂಗ್ರೆಸ್ ಬೆಂಬಲಿತ 12 ಅಭ್ಯರ್ಥಿಗಳು ಚುನಾವಣೆಗೆ ಸ್ಪರ್ಧಿಸಿದ್ದು, ಸೋಮೇಶ್ವರ ದೇಗುಲದಲ್ಲಿ ಪೂಜೆ ಸಲ್ಲಿಸಿದ್ದಾರೆ. ಎಲ್ಲರೂ ಸೊಸೈಟಿ ನಿರ್ದೇಶಕರಾಗಲು ಅರ್ಹರಿದ್ದು, ಕೆಲಸ ಮಾಡುವಂಥವರು. ಇವರಿಗೆ ಷೇರುದಾರರು ಮತ ನೀಡಿ ಗೆಲ್ಲಿಸಬೇಕು ಎಂದು ಮನವಿ ಮಾಡಿದರು. ಬಿಜೆಪಿ ಹಾಗೂ ಜೆಡಿಎಸ್‌ನವರು ಕೂಡ ದೇವರ ಮೊರೆ ಹೋಗಿದ್ದಾರೆ ಎಂಬ ಪ್ರಶ್ನೆಗೆ, 'ಬಿಜೆಪಿ-ಜೆಡಿಎಸ್‌ನವರು ದೇವರ ಮೊರೆ ಹೋಗಿರುವುದು ಸಂತೋಷದ ವಿಚಾರ. ಆದರೆ, ದೇವರು ಷೇರುದಾರರಿಗೆ ಆಶೀರ್ವಾದ ಮಾಡಲಿದ್ದು, ಅವರು ನಮ್ಮ ಪಕ್ಷದ ಬೆಂಬಲಿತ ಅಭ್ಯರ್ಥಿಗಳಿಗೆ ಆಶೀರ್ವಾದ ಮಾಡುತ್ತಾರೆ ಎಂಬ ವಿಶ್ವಾಸವಿದೆ' ಎಂದರು.

## ಮಿನಿ ನ್ಯೂಸ್

### ಕಾರುಗಳ ಗಾಜುಗಳನ್ನು ಒಡೆದ ಮೂವರು ದುಷ್ಕರ್ಮಿಗಳ ಬಂಧನ

• **ಉದಯವಾಹಿನಿ, ಕೊರಟಗೆರೆ**

ಪಟ್ಟಣದ ವಿವಿಧ ಬಡಾವಣೆಗಳಲ್ಲಿ ಮನೆ ಮುಂದೆ ನಿಲ್ಲಿಸಿದ್ದ ಸುಮಾರು 15 ಕ್ಕೂ ಹೆಚ್ಚು ಕಾರುಗಳ ಗಾಜುಗಳನ್ನು ಕಿಡಿಗೇಡಿಗಳು ಒಡೆದು ಹಾಕಿದ್ದು ಸ್ಥಳೀಯರಲ್ಲಿ ಆತಂಕ ಮೂಡಿಸಿದೆ. ಪಟ್ಟಣದ ವಿವಿಧ ಬೀದಿಗಳಲ್ಲಿ ನಿಲ್ಲಿಸಿದ್ದ ಕಾರುಗಳು ಮತ್ತು ದ್ವಿಚಕ್ರ ವಾಹನಗಳ ಗ್ಲಾಸ್‌ಗಳು ಬೆಳಗ್ಗೆ ಒಡೆದ ಸ್ಥಿತಿಯಲ್ಲಿ ಕಂಡುಬಂದವು. ಸುಮಾರು 10 ರಿಂದ 15 ವಾಹನಗಳಿಗೆ ಹಾನಿಯಾಗಿರುವುದಾಗಿ ಅಂದಾಜಿಸಲಾಗಿದೆ. ಈ ಘಟನೆ ತಿಳಿದು ಸ್ಥಳೀಯರು ತಕ್ಷಣವೇ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದಾರೆ. ಕೊರಟಗೆರೆ ಸಿಪಿಐ ಅನಿಲ್ ಪಿಎಸ್‌ಐ ತೀರ್ಥೇಶ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಸಿಸಿಟಿವಿ ದೃಶ್ಯಗಳನ್ನು ಪರಿಶೀಲಿಸುತ್ತಿದ್ದಾರೆ. ದುಷ್ಕರ್ಮಿಗಳನ್ನು ಶೀಘ್ರದಲ್ಲೇ ಪತ್ತೆಹಚ್ಚಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಘಟನೆ ಹಿನ್ನೆಲೆ, ಸ್ಥಳೀಯರು ರಾತ್ರಿ ವೇಳೆಯಲ್ಲಿ ಪೊಲೀಸ್ ಪೆಟ್ರೋಲಿಂಗ್ ಹೆಚ್ಚಿಸಲು ಆಗ್ರಹಿಸಿದ್ದಾರೆ. ಪಟ್ಟಣದಲ್ಲಿ ಇಂತಹ ಘಟನೆ ಮರುಕಳಿಸದಂತೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸಾರ್ವಜನಿಕರು ಒತ್ತಾಯಿಸಿದ್ದಾರೆ. ಕೊರಟಗೆರೆ ಪೊಲೀಸ್ ಸಿಪಿಐ ಅನಿಲ್ ಹಾಗೂ ಪಿಎಸ್‌ಐ ತೀರ್ಥೇಶ್ ಮತ್ತು ತಂಡ ಘಟನೆ ನಡೆದ ಎರಡೆ ಗಂಟೆಗಳಲ್ಲಿ ತುಮಕೂರಿನ ಪುಂಡರನ್ನು ಎಡೆಮುರಿ ಕಟ್ಟಿದ ಕೊರಟಗೆರೆ ಪೊಲೀಸರು ಸಂತೋಷ್, ಕಲ್ಯಾಣ್, ಹರೀಶ್ ಎಂಬ ಆರೋಪಿಗಳನ್ನು ಬಂಧಿಸಲಾಗಿ ಮತ್ತೆ ಮೂವರ ಬಂಧನಕ್ಕೆ ಪೊಲೀಸರು ಬಲೆ ಬೀಸಿದ್ದಾರೆ.

### ಕೇರಳ ಲಾಟರಿ ಮಾರಾಟ ಓರ್ವನ ಬಂಧನ



ಉದಯವಾಹಿನಿ ಚಿತ್ರ

• **ಉದಯವಾಹಿನಿ, ಗುಂಡ್ಲುಪೇಟೆ**

ಕೇರಳ ಲಾಟರಿ ಮಾರಾಟ ಮಾಡುತ್ತಿದ್ದ ವ್ಯಕ್ತಿಯನ್ನು ಗುಂಡ್ಲುಪೇಟೆ ಠಾಣೆ ಪೊಲೀಸರು ಬಂಧಿಸಿ, ಲಾಟರಿ ಟಿಕೆಟ್ ಗಳನ್ನು ವಶಕ್ಕೆ ಪಡೆದ ಘಟನೆ ಪಟ್ಟಣದ ಸುರಭಿ ಹೋಟೆಲ್ ಬಳಿ ನಡೆದಿದೆ. ಪಟ್ಟಣದ ಹೊಸೂರಿನ ಮಹದೇವನಾಯಕ(30) ಬಂಧಿತ. ಈತ ಪಟ್ಟಣದ ಸುರಭಿ ಹೋಟೆಲ್ ಬಳಿ ಕೇರಳ ಲಾಟರಿಯನ್ನು ಅಕ್ರಮವಾಗಿ ಮಾರಾಟ ಮಾಡುತ್ತಿದ್ದ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಗುಂಡ್ಲುಪೇಟೆ ಠಾಣೆ ಪೊಲೀಸರು ಆರೋಪಿಯನ್ನು ಬಂಧಿಸಿ ಆತನ ಬಳಿಯಿಂದ 50 ರೂ. ಮುಖ ಬೆಲೆಯ 139 ಟಿಕೆಟ್(6.950 ರೂ.) ಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಈ ಸಂಬಂಧ ಗುಂಡ್ಲುಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕಾರ್ಯಾಚರಣೆಯಲ್ಲಿ ಸಬ್ ಇನ್ಸ್‌ಪೆಕ್ಟರ್ ನರೇಶ್‌ಕುಮಾರ್ ಪೊಲೀಸ್ ಪೇದೆಗಳಾದ ಶಿವರಾಜ್, ಕಿಶೋರ್, ನಟೇಶ್ ಭಾಗವಹಿಸಿದ್ದರು.

### ಶೆಡ್‌ಗೆ ನುಗ್ಗಿ 21 ಕುರಿಗಳನ್ನು ಕೊಂದು ಅಟ್ಟಹಾಸಕ್ಕೆ ಮೆರೆದ ಚಿರತೆ

• **ಉದಯವಾಹಿನಿ, ತುಮಕೂರು**

ಕುರಿ ಶೆಡ್‌ಗೆ ನುಗ್ಗಿದ ಚಿರತೆ 21 ಕುರಿಗಳನ್ನು ಸಾಯಿಸಿರುವ ಘಟನೆ ತಾಲ್ಲೂಕಿನ ದುರ್ಗದಹಳ್ಳಿ ಸಮೀಪದ ಶೇಟುಪಾಳ್ಯದಲ್ಲಿ ನಡೆದಿದೆ. ರೈತ ಹೇಮಂತ್ ಅವರಿಗೆ ಸೇರಿದ ತೋಟದ ಮನೆ ಸಮೀಪದ ಕುರಿಶೆಡ್‌ಗೆ ನುಗ್ಗಿದ ಚಿರತೆ ಶೆಡ್‌ನಲ್ಲಿದ್ದ ಕುರಿಗಳ ಮೇಲೆ ಎರಗಿದೆ. 33 ಕುರಿಗಳ ಪೈಕಿ ಸ್ಥಳದಲ್ಲಿ 19 ಕುರಿಗಳ ರಕ್ತಹೀರಿ ಸಾಯಿಸಿದ ಚಿರತೆ ಎರಡು ಕುರಿಮರಿಗಳನ್ನು ಹೊತ್ತೊಯ್ದಿದೆ. ಪ್ರತಿ ಕುರಿಗಳು 10 ರಿಂದ 15 ಸಾವಿರ ಬೆಲೆ ಬಾಳುತ್ತಿದ್ದು, 2 ಲಕ್ಷದಷ್ಟು ನಷ್ಟ ಉಂಟಾಗಿದೆ. ಘಟನಾ ಸ್ಥಳಕ್ಕೆ ಭೇಟಿಕೊಟ್ಟಿದ್ದ ಆರ್‌ಎಫ್‌ಓ ನಮಿತಾ ಹಾಗೂ ಅರಣ್ಯ ಇಲಾಖೆ ಸಿಬ್ಬಂದಿ ಸ್ಥಳ ಪರಿಶೀಲಿಸಿ ಊರ್ಡಿಗೆರೆ ಪಶು ವೈದ್ಯಾಧಿಕಾರಿಗಳಿಂದ ಕುರಿಗಳ ಮರಣೋತ್ತರ ಪರೀಕ್ಷೆ ನಡೆಸಿ ಇಲಾಖೆ ಮಾನದಂಡದ ಪ್ರಕಾರ ಪ್ರತೀ ಕುರಿ ಸಾವಿಗೆ 4 ಸಾವಿರ ರೂ. ಪರಿಹಾರ ಒದಗಿಸುವುದಾಗಿ ತಿಳಿಸಿದ್ದಾರೆ.

ಪತ್ರಿಕೆಯೊಂದಿಗೆ ಮಾತನಾಡಿದ ಆರ್‌ಎಫ್‌ಓ ನಮಿತಾ ಅವರು ಘಟನಾ ಸ್ಥಳದಲ್ಲಿ ಚಿರತೆ ಸೆರೆಹಿಡಿಯಲು ಬೋನ್ ಇರಿಸಲಾಗಿದ್ದು, ಇಬ್ಬರು ಅರಣ್ಯ ರಕ್ಷಕರ ಗಸ್ತು ಸಹ ಹಾಕಲಾಗಿದೆ. ಇಲಾಖಾ ಮಾನದಂಡದಂತೆ ಪರಿಹಾರ ಮಂಜೂರು ಮಾಡಲಾಗುವುದು ಎಂದರು. ದೇವರಾಯನದುರ್ಗ ಅರಣ್ಯ ಪ್ರದೇಶದ ಸಮೀಪದಲ್ಲೇ ದುರ್ಗದಹಳ್ಳಿಯ ಶೇಟುಪಾಳ್ಯವಿದ್ದು, ಇತ್ತೀಚೆಗೆ ಚಿರತೆ, ಕರಡಿ ಹಾವಳಿ ಹೆಚ್ಚಾಗಿದ್ದು, ರೈತರು ಪ್ರಾಣಾಪಾಯದ ಬದುಕುವಂತಾಗಿದೆ. ಇದರಿಂದ ಕೃಷಿ ಕಾರ್ಯ ಹಾಗೂ ಕುರಿ ಜಾನುವಾರು ಸಾಕಾಣೆಗೆ ತೊಡಕಾಗಿದೆ. ಅರಣ್ಯ ಇಲಾಖೆಯವರು ಶೇಟುಪಾಳ್ಯದ ನಿವಾಸಿಗಳಿಗೆ ರೈತರಿಗೆ ವನ್ಯಮೃಗಗಳ ಕಾಟದಿಂದ ಮುಕ್ತಿ ಕೊಡಿಸಬೇಕು ಎಂದು ಸ್ಥಳೀಯ ರೈತರು ಒತ್ತಾಯಿಸಿದ್ದಾರೆ.

ಸಂತ್ರಸ್ತರಿಗೆ ವೈಜ್ಞಾನಿಕ ಪರಿಹಾರ ಒದಗಿಸಲು ವಿಶೇಷ ಪ್ಯಾಕೇಜ್ ಘೋಷಿಸಿ, ಸಂತ್ರಸ್ತರ 4 ದಶಕಗಳ ಹೋರಾಟಕ್ಕೆ ಇತಿಶ್ರೀ ಹಾಡಬೇಕು

# ಕಾರಂಜಾ ಸಂತ್ರಸ್ತರಿಗೆ ಪರಿಹಾರ: ಶೀಘ್ರ ಸಿಎಂ ಸಭೆ

• ಉದಯವಾಹಿನಿ ಬೀದರ್

ಕಾರಂಜಾ ನೀರಾವರಿ ಯೋಜನೆಯಡಿ ಭೂಮಿ ಕಳೆದುಕೊಂಡ ಸಂತ್ರಸ್ತರಿಗೆ ಪರಿಹಾರ ನೀಡುವ ವಿಷಯದಲ್ಲಿ ಶೀಘ್ರದಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ, ಜಲ ಸಂಪನ್ಮೂಲ ಸಚಿವರಾದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸಭೆ ನಡೆಸಿ ಸರ್ಕಾರದ ತೀರ್ಮಾನ ಪ್ರಕಟಿಸಲಿದ್ದಾರೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ವಿಧಾನಸಭೆ ಅಧಿವೇಶನದಲ್ಲಿ ರಾತ್ರಿ ಬೀದರ್ ದಕ್ಷಿಣ ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ಅವರು. ಮತ್ತೆ ಕಾರಂಜಾ ಸಂತ್ರಸ್ತರ ಸಮಸ್ಯೆ ಬಗ್ಗೆ ಧ್ವನಿ ಎತ್ತಿ ಸುದೀರ್ಘವಾಗಿ ಚರ್ಚೆ ನಡೆಸಿದರು. ಸಂತ್ರಸ್ತರಿಗೆ ವೈಜ್ಞಾನಿಕ ಪರಿಹಾರ ಒದಗಿಸಲು ವಿಶೇಷ ಪ್ಯಾಕೇಜ್ ಘೋಷಿಸಿ, ಸಂತ್ರಸ್ತರ ನಾಲ್ಕು ದಶಕಗಳ ಹೋರಾಟಕ್ಕೆ ಇತಿಶ್ರೀ ಹಾಡುವಂತೆ ಸದನದ ಗಮನ ಸೆಳೆದರು.

ಉಪ ಮುಖ್ಯಮಂತ್ರಿ ಮತ್ತು ಜಲ ಸಂಪನ್ಮೂಲ ಸಚಿವರಾದ ಡಿ.ಕೆ.ಶಿವಕುಮಾರ್ ಅವರ ಪರವಾಗಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಬೆಲ್ದಾಳೆ ಪ್ರಶ್ನೆಗೆ ಉತ್ತರಿಸಿದರು. ಕಾರಂಜಾ ಸಂತ್ರಸ್ತರ ಪರಿಹಾರ ಬೇಡಿಕೆ ಸಂಬಂಧ ಕಲಬುರಗಿ ಪ್ರಾದೇಶಿಕ ಆಯುಕ್ತರ ನೇತೃತ್ವದಲ್ಲಿ ರಚಿಸಿದ್ದ ಸಮಿತಿ 2025ರ ನವೆಂಬರ್ 13 ರಂದು ಸರ್ಕಾರಕ್ಕೆ ವರದಿ ಸಲ್ಲಿಸಿದೆ. ಈ ವರದಿ ಕಾನೂನು, ಕಂದಾಯ, ಆರ್ಥಿಕ ಇಲಾಖೆ ಅಭಿಪ್ರಾಯಕ್ಕೆ ಹೋಗಿದೆ.ಅಲ್ಲಿಂದ ಅಭಿಪ್ರಾಯ ಬಂದ ಮೇಲೆ ಸಿಎಂ, ಡಿಸಿಎಂ ಅವರು ಈ ಬಗ್ಗೆ ನಿರ್ಧಾರ ಕೈಗೊಳ್ಳುತ್ತಾರೆ ಎಂದರು.

ಪ್ರಾದೇಶಿಕ ಆಯುಕ್ತರ ವರದಿ ಜೊತೆಗೆ ಸರ್ಕಾರದ ಅಪರ ಕಾರ್ಯದರ್ಶಿ ವರದಿ ಸಹ ಹೋಲಿಕೆ ಮಾಡಬೇಕಾಗುತ್ತದೆ. ಬಳಿಕ ಕಾನೂನು, ಕಂದಾಯ ಇಲಾಖೆಯಿಂದ ಏನು ವರದಿ ಬರುತ್ತದೆ ನೋಡಿಕೊಂಡು ಆರ್ಥಿಕ ಇಲಾಖೆಗೆ ಇದನ್ನು ಮಂಡನೆ ಮಾಡಲಾಗುತ್ತದೆ. ಇದಾದ ನಂತರ ಸಿಎಂ, ಡಿಸಿಎಂ ಅವರು ನಿಮ್ಮ ಜೊತೆಗೆ ಮತ್ತೊಂದು ಸಭೆ ನಡೆಸಿ ಸರ್ಕಾರದ ತೀರ್ಮಾನ ತಿಳಿಸುತ್ತಾರೆ. ಸತತ ನೀವು ಸಂತ್ರಸ್ತರ ಸಮಸ್ಯೆಯನ್ನು ಸರ್ಕಾರದ ಮುಂದಿಟ್ಟಿರಿ. ನೀವು ಹೇಳಿದ್ದಕ್ಕಾಗಿಯೇ ಹಿಂದೆ ಬೆಳಗಾವಿಯಲ್ಲಿ ಸಿಎಂ, ಡಿಸಿಎಂ ಸಭೆ ಕರೆದಿದ್ದರು. ಸಮಿತಿ ಸಹ ರಚಿಸಿದ್ದರು. ಈಗ ವರದಿ ಸರ್ಕಾರದ ಮುಂದಿದೆ. ಇಷ್ಟು ದಿವಸ ಕಾದಿರುವಿರಿ. ಇನ್ನು ಸ್ವಲ್ಪ ದಿನ ಕಾಯಿರಿ ಎಂದು ಶಾಸಕ ಬೆಲ್ದಾಳೆ ಅವರಿಗೆ ಕೋರಿದರು.

ಧರ್ಮಸಿಂಗ್ ಅವರು ಸಿಎಂ ಇದ್ದಾಗ ವಿಶೇಷ ಪ್ಯಾಕೇಜ್ ನೀಡಿಕೆ ಸಂಬಂಧ ಹೈಪವರ್ ಕಮಿಟಿ ರಚಿಸಲಾಗಿತ್ತು. 60 ಕೋಟಿ ಕೊಡುವುದಾಗಿಯೂ ಹೇಳಿದ್ದರು. ಆದರೆ ನಂತರ ಆಗಿನ ಅಧಿಕಾರಿಗಳು ಕೆಲವು ತಪ್ಪು ಮಾಹಿತಿ ನೀಡಿದ್ದಕ್ಕಾಗಿ ಪರಿಹಾರ ಸಿಕ್ಕಿಲ್ಲ. ಬಳಿಕ ಸರ್ಕಾರ ಬದಲಾಯಿತು, ಸಮಸ್ಯೆ ಹಾಗೆಯೇ ಉಳಿಯಿತು. ಈಗ ಮತ್ತೊಂದು ಹಂತಕ್ಕೆ ಬಂದು ನಿಂತಿದೆ. ಸಂತಸ್ತರಿಗೆ ಸಾವಿರ ಕೋಟಿ ಪ್ಯಾಕೇಜ್ ಕಲ್ಪಿಸಿ, ಮಾನವೀಯ ನೆಲೆಗಟ್ಟಿನಲ್ಲಿ ಪರಿಹಾರ ಒದಗಿಸಿ ಅವರಿಗೆ ಹೊಸ ಜೀವನ ನೀಡುವಂತೆ ಶಾಸಕ ಬೆಲ್ದಾಳೆ ಕೈ ಮುಗಿದು ಮನವಿ ಮಾಡಿದರು.

> ಸರ್ಕಾರ ಕಾನೂನು ಚೌಕಟ್ಟಿನಲ್ಲೇ ಹೆಜ್ಜೆ ಇಡಬೇಕಾಗುತ್ತದೆ. ನಮ್ಮ ಸರ್ಕಾರ ರೈತರ ಪರವಾಗಿ ಇದೆ. ಯುಕೆಪಿನಲ್ಲಿ ಕಾನೂನಿನ ಪ್ರಕಾರ ಪರಿಹಾರ ಕೊಟ್ಟಿದ್ದೇವೆ. ಕಾರಂಜಾ ಸಂತ್ರಸ್ತರ ಪರಿಹಾರ ಸಂಬಂಧ ಪ್ರಾದೇಶಿಕ ಆಯುಕ್ತರ ವರದಿ ಮೇಲೆ ವಿವಿಧ ಇಲಾಖೆಯವರು ಅಭಿಪ್ರಾಯ ತಿಳಿಸಲಿ. ಮುಂದಿನ ಬಗ್ಗೆ ಆಶಾಭಾವ ಹೊಂದೋಣ. -ಪ್ರಿಯಾಂಕ್ ಖರ್ಗೆ ಸಚಿವ

**ಇಲಾಖೆಯವರು ಅಭಿಪ್ರಾಯ ತಿಳಿಸಲಿ**



### ಬೆಲ್ದಾಳೆ ಯತ್ನದಿಂದ ಸಿಎಂ ಸಭೆ

2024ರ ಡಿಸೆಂಬರ್‌ನಲ್ಲಿ ಬೆಳಗಾವಿಯಲ್ಲಿ ನಡೆಯುತ್ತಿದ್ದ ಚಳಿಗಾಲ ಅಧಿವೇಶನ ವೇಳೆ ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ ಅವರು ಶೂನ್ಯ ವೇಳೆಯಲ್ಲಿ ಕಾರಂಜಾ ಸಂತ್ರಸ್ತರ ಸಮಸ್ಯೆ ಪ್ರಸ್ತಾಪಿಸಿ ಗಮನ ಸೆಳೆದಿದ್ದರು. ಇವರು ಹೇಳಿದ್ದಕ್ಕಾಗಿಯೇ ಸಿಎಂ, ಡಿಸಿಎಂ ಅವರು ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಜಿಲ್ಲೆಯ ಎಲ್ಲಾ ಜನಪ್ರತಿನಿಧಿಗಳ ಜೊತೆಗೆ ಸಭೆ ನಡೆಸಿ, ಈ ಬಗ್ಗೆ ಏನು ಮಾಡಬಹುದು ಎಂಬ ಬಗ್ಗೆ ಚರ್ಚಿಸಿ ಸಲಹೆ ಪಡೆದಿದ್ದರು. ಬಳಿಕ ಕಲಬುರಗಿ ಪ್ರಾದೇಶಿಕ ಆಯುಕ್ತರ ನೇತೃತ್ವದಲ್ಲಿ (2025ರ ಏಪ್ರಿಲ್ 7ರಂದು) ಸಮಿತಿ ರಚಿಸಲಾಗಿತ್ತು. ಸಮಿತಿ ಈಗಾಗಲೇ ಸರ್ಕಾರಕ್ಕೆ ವರದಿಯೂ ಕೊಟ್ಟಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು. ಅಪರ ಮುಖ್ಯ ಕಾರ್ಯದರ್ಶಿ ವರದಿ ಮೇಲೆ 2104ರಲ್ಲಿ ಸಂತ್ರಸ್ತರ ಪರಿಹಾರ ಬೇಡಿಕೆ ತಿರಸ್ಕರಿಸಲಾಗಿತ್ತು. ಕಾನೂನಿನ ಪ್ರಕಾರ ಪರಿಹಾರ ನೀಡಿದ್ದಾಗಿದೆ ಎಂಬ ಕಾರಣಕ್ಕೆ ಇದು ತಿರಸ್ಕರಿಸಲಾಗಿತ್ತು. ರೈತರ ಪ್ರತಿಭಟನೆ, ಸದನದಲ್ಲಿ ಶಾಸಕರ ಒತ್ತಡ ಕಾರಣಕ್ಕೆ ಇದರ ಮೇಲೆ ಸರ್ಕಾರ ಮರು ಪರಿಶೀಲನೆ ನಡೆಸಿದೆ ಎಂದರು.

### 60 ಸಾವಿರ ರೈತರ ಸಂಕಷ್ಟ ನಿವಾರಿಸಿ

ಕಾರಂಜಾ ಯೋಜನೆಯಡಿ 28 ಗ್ರಾಮಗಳು ಮುಳುಗಡೆಯಾಗಿವೆ.9 ಗ್ರಾಮ ಪುನರ್ವಸತಿಯಾಗಿವೆ. ತಮ್ಮ ಬೆಲೆಬಾಳುವ, ಅತಿ ಫಲವತ್ತಾದ 24 ಸಾವಿರ ಎಕರೆ ಜಮೀನು ರೈತರು ಕೊಟ್ಟಿದ್ದಾರೆ. ಇವರಿಗೆ 3-4 ಸಾವಿರ ಪರಿಹಾರ ನೀಡಲಾಗಿದೆ, ಭೂಮಿ ಕಳೆದುಕೊಂಡ 60 ಸಾವಿರ ರೈತರು ಸಂಕಷ್ಟದಲ್ಲಿದ್ದಾರೆ. ಅನೇಕರು ಆಂಧ್ರ, ಮಹಾರಾಷ್ಟ್ರ, ತೆಲಂಗಾಣ ಇತರೆಡೆ ಹೊಟ್ಟೆಪಾಡಿಗೆ ಗುಳೆ ಹೋಗಿದ್ದಾರೆ. ಅನೇಕ ಕುಟುಂಬ ಬೀದಿಗೆ ಬಿದ್ದಿವೆ. ಪರಿಹಾರದಲ್ಲಾದ ಅನ್ಯಾಯ ಬಗ್ಗೆ 1990ರಲ್ಲಿ ಕೆಲವರು ಕೋರ್ಟ್‌ಗೆ ಹೋಗಿದ್ದರು. 2015ರಲ್ಲಿ ಇದರ ಆದೇಶವಾಗಿದೆ. ಬಾಪುರ, ಖೇಣಿರಂಜೋಳ, ನೀಡವಂಚಾ, ಬೊಂಬಳಗಿ, ರೇಕುಳಗಿ ಇತರೆ ಗ್ರಾಮದ ಕೆಲವರಿಗೆ ಬಡ್ಡಿಸಹಿತ ಎಕ್ರೆಗೆ 15 ಲಕ್ಷ ರೂ. ಪರಿಹಾರ ಬಂದಿದೆ. ಸರ್ಕಾರ ವಿಶೇಷ ಪ್ಯಾಕೇಜ್ ಕೊಟ್ಟು, ತೀರ ಬಡ ಸಂತ್ರಸ್ಥರ ಸಮಸ್ಯೆಗೆ ಶಾಶ್ವತ ಪರಿಹಾರ ನೀಡುವಂತೆ ಡಾ.ಶೈಲೇಂದ್ರ ಬೆಲ್ದಾಳೆ ಆಗ್ರಹಿಸಿದರು.

## ಕಾಂಗ್ರೆಸ್ ಪಕ್ಷದಿಂದ ಮಾದಿಗ ಸಮಾಜಕ್ಕೆ ಅನ್ಯಾಯ: ಪ್ರತಿಭಟನೆ

• ಉದಯವಾಹಿನಿ ಚಡಚಣ

ಮಾದಿಗ ಸಮುದಾಯದ ಜನರಿಗೆ ತುಂಬಾ ಅನ್ಯಾಯವಾಗುತ್ತಿದೆ ಎಂದು ಚಡಚಣ ಪಟ್ಟಣದಲ್ಲಿ ಮಾದಿಗ ಸಮುದಾಯದ ಜನರು ಬೃಹತ್ ಪ್ರತಿಭಟನೆ ಮಾಡಿದರು.

ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಅವರು ನೇತೃತ್ವದ ಕಾಂಗ್ರೆಸ್ ಮಾದಿಗರ ಬಹು ವರ್ಷಗಳ ಬೇಡಿಕೆಯಾದ ಒಳ ಮೀಸಲಾತಿಯನ್ನು ಶಾಸನ ಬದ್ದವಾಗಿ ಜಾರಿಗೊಳಿಸಿದೆ ಉದ್ಯೋಗ ಮತ್ತು ಶಿಕ್ಷಣದಲ್ಲಿ ಒಳಮೀಸಲಾತಿ ಮಾದಿಗರ ಜನಸಂಖ್ಯೆ ಹಾಗೂ ಹಿಂದುಳಿಯಲು ಆದರದ ಮೇಲೆ ಎಲ್ಲಾ ಆಯೋಗಗಳು ಶಿಫಾರಸ್ಸಿನಂತೆ ಮಾದಿಗರಗೆ ಶೇ.6% ರಷ್ಟು ಪ್ರಮಾಣದ ಮೀಸಲಾತಿಯನ್ನು ಹಂಚಿಕೆ ಮಾಡಿ ಕ್ಯಾಟಗೇರಿ ಒಂದು ಕ್ಯಾಟಗರಿ 1 ಎಂದು ಘೋಷಣೆ ಮಾಡಿದ್ದು 27ನೇ ಮಾರ್ಚ್ 2026 ರಂದು ನಡೆಯುವ ಸಚಿವ ಸಂಪುಟ ಸಭೆಯಲ್ಲಿ 56432 ಹುದ್ದೆಗಳನ್ನು ತುಂಬಲು ತೀರ್ಮಾನಿಸುವುದು ಸ್ವಾರ್ಥದ ವಿಷಯ ಮತ್ತು ಒಳ ಮೀಸಲಾತಿ ಯಾರಿಲಿರುವಾಗ ಪರಿಶಿಷ್ಟ ಜಾತಿಗಳನ್ನು ಒಳ ಮೀಸಲಾತಿ ನೀಡಿದೆ ಉದ್ಯೋಗ ತುಂಬಲು ಮುಂದಾಗಿರೋದು ಮಾದಿಗ ಸಮುದಾಯಕ್ಕೆ ತುಂಬಾ ಅನ್ಯಾಯವಾಗುತ್ತಿದೆ ಮತ್ತು ಆದುದರಿಂದ ಸರ್ಕಾರವೇ ಒಪ್ಪಿ ಒಳ ಮೀಸಲಾತಿಯನ್ನು ಜಾರಿಗೆ ತಂದಿರುವಾಗ ಪರಿಶಿಷ್ಟ ಜಾತಿಗೆ ನಿಗದಿಪಡಿಸಿರುವ ಶೇ.15 ಮೀಸಲಾತಿಯಲ್ಲಿ ಹಂಚಿಕೆ ಮಾಡಿ ಮಾದಿಗರಿಗೆ ಶೇ .6% ಉಳಿದವರಿಗೆ ನಿಮ್ಮ ಇಚ್ಛೆಯಂತೆ ಹಂಚಿಕೆ ಮಾಡಬೇಕು. ಮತ್ತು ಸುಪ್ರೀಂ ಕೋರ್ಟ್ ತೀರ್ಪು ಗೌರವಿಸುವುದು ತುಂಬಾ ಒಳ್ಳೆಯದು ಯಾಕಂದ್ರೆ ಸುಪ್ರೀಂಕೋರ್ಟ್ ನ್ಯಾಯದ ಪರವಿದೆ ಆದರೆ ಕಾಂಗ್ರೆಸ್ ಪಕ್ಷದವರು ಇತ್ತಕಡೆ ಗಮನ ಹರಿಸಬೇಕು ಎಂದು ಪ್ರತಿಭಟನೆ ಮಾಡಿದರು ಮತ್ತು ಚಡಚಣ ದಂಡಾಧಿಕಾರಿಗಳಾದ ಮಾನ್ಯ ತಹಶೀಲ್ದಾರರಿಗೆ ಅವರಿಗೆ ಮಾದಿಗ ಸಮುದಾಯದ ಜನರು ಮನವಿ ಪತ್ರ ನೀಡಿದರು. ಸಮುದಾಯದ ಅಧ್ಯಕ್ಷರು ಪ್ರದೀಪ್ ಮೇಲಿನಮನಿ ತಾಲ್ಲೂಕ ಅಧ್ಯಕ್ಷರು ಸುಭಾಷ್ ಗಾಯಕವಾಡ ಮತ್ತು ಜಿಲ್ಲಾ ಎಲ್ಲಾ ಮುಖಂಡರು ಉಪಸ್ಥಿತರಿದ್ದರು.

## ಸಚಿವರ ಆದೇಶವಿದ್ದರೂ ಮೀನಮೇಷ: ಅರಣ್ಯ ಭೂಮಿ ಅಕ್ರಮ ಪೋಡಿ ಆರೋಪ

• ಉದಯವಾಹಿನಿ ಸಕಲೇಶಪುರ

ತಾಲ್ಲೂಕಿನ ಕಿರುಹುಣುಸೆ ಗ್ರಾಮದ ಸರ್ವೆ ನಂ 72ರ ಅರಣ್ಯ ಇಲಾಖೆ ಸೆಕ್ಷನ್-4ರ ಭೂಮಿಯನ್ನು ಅಕ್ರಮವಾಗಿ ಖಾಸಗಿ ವ್ಯಕ್ತಿಯೊಬ್ಬರಿಗೆ ಸರ್ವೆ ಸೂಪರ್‌ವೈಸರ್, ಸರ್ವೆಯರ್ ಹಾಗೂ ಕೆಲವರು ಸೇರಿ ಪೋಡಿ ಮಾಡಿಕೊಟ್ಟಿರುವ ಪ್ರಕರಣಕ್ಕೆ ಸಂಬಂಧಿಸಿ ತಹಶೀಲ್ದಾರ್ ಕೆ.ಎಸ್. ಸುಪ್ರೀತಾ, ವಲಯ ಅರಣ್ಯ ಅಧಿಕಾರಿ ಎಚ್.ಆರ್. ಹೇಮಂತ್‌ಕುಮಾರ್, ಎಡಿಎಲ್‌ಆರ್ ಕೀರ್ತಿ ಸಿಂಹ ಹಾಗೂ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಜಂಟಿ ಪರಿಶೀಲನೆ ನಡೆಸಿದರು.

ಸುಮಾರು 40 ರಿಂದ 50 ವರ್ಷಗಳ ಅಕೇಶಿಯಾ ಹಾಗೂ ಇತರ ಕಾಡು ಜಾತಿಯ ಮರಗಳು ಹಾಗೂ ಕಾಡು ಇರುವುದನ್ನು, ಅನುಭವದಲ್ಲಿ ಇಲ್ಲದ ವ್ಯಕ್ತಿಯೊಬ್ಬರಿಗೆ ಕಾನೂನು ಉಲ್ಲಂಘಿಸಿ ಪೋಡಿ ಮಾಡಿರುವ ಬಗ್ಗೆ ವರದಿ ಪ್ರಕಟಿಸಿತ್ತು ಇದನ್ನು ಉಲ್ಲೇಖಿಸಿ ಆದೇಶ ನೀಡಿದ್ದ ಅರಣ್ಯ ಸಚಿವ ಈಶ್ವರ್ ಖಂಡ್ರೆ, ಸರ್ವೆ ಸೂಪರ್ ವೈಸರ್ ಹಾಗೂ ಇತರರು ತಪ್ಪು ಮಾಡಿದ್ದರೆ ಅವರ ಮೇಲೆ ಕೂಡಲೇ ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.


ಉದಯವಾಹಿನಿ ಚಿತ್ರ

ಈ ಹಿನ್ನೆಲೆಯಲ್ಲಿ ಅಧಿಕಾರಿಗಳು ಸ್ಥಳಕ್ಕೆ ದಿಢೀರ್ ಭೇಟಿ ನೀಡಿ ಪರಿಶೀಲಿಸಿದರು. ಸರ್ವೆ ನಂಬರ್ 72ರಲ್ಲಿ 10.02 ಎಕರೆಯಲ್ಲಿ ಅರಣ್ಯ ಇಲಾಖೆಯವರು ನೆಟ್ಟು ಬೆಳೆಸಿರುವ ಮರಗಳು ಹಾಗೂ ಕಾಡು ಇರುವುದು ಕಂಡು ಬಂದಿದೆ.

ಕಿರುಹುಣುಸೆ ಗ್ರಾಮಕ್ಕೆ ತಹಶೀಲ್ದಾರ್, ಆರ್‌ಎಫ್‌ಒ ಜೊತೆ ತೆರಳಿ ಸ್ಥಳವನ್ನು ಜಂಟಿ ಪರಿಶೀಲನೆ ನಡೆಸಿದಾಗ ಅರಣ್ಯ ಇಲಾಖೆಯಿಂದ ಮರಗಳನ್ನು ಬೆಳೆಸಿರುವುದು ಹಾಗೂ ಕಾಡು ಇರುವುದು ಕಂಡು ಬಂದಿದೆ. ಸರ್ವೆಯರ್ ಅಳತೆಯ ಟಿಪ್ಪಣಿಯಲ್ಲಿ ಸೂಪರ್‌ವೈಸರ್ ಪರಿಶೀಲಿಸಿದೆ ಎಂದು ಸಹಿ ಹಾಕಿದ್ದಾರೆ. ಸರ್ವೆಯರ್ ಹಾಗೂ ಸೂಪರ್‌ವೈಸರ್ ತಪ್ಪು ಮಾಡಿರುವುದು ಕಂಡು ಬಂದಿದೆ. ಈ ಬಗ್ಗೆ ಇಲಾಖೆಯ ಉಪನಿರ್ದೇಶಕರಿಗೆ ಈ ಬಗ್ಗೆ ವರದಿ ನೀಡಲಾಗುವುದು ಎಂದು ಎಡಿಎಲ್‌ಆರ್ ಕೀರ್ತಿ ಸಿಂಹ ತಿಳಿಸಿದರು.

ಕಿರುಹುಣುಸೆ ಗ್ರಾಮದ ಸರ್ವೆ ನಂ. 72ರಲ್ಲಿ ಅರಣ್ಯ ಇಲಾಖೆಯಿಂದ ಬೆಳೆಸಿರುವ ಮರಗಳು ಹಾಗೂ ಕಾಡು ಇದ್ದು, ಈ ಜಾಗವನ್ನು ಯಾರೂ ಸಾಗುವಳಿ ಮಾಡಿಲ್ಲ. ಪೋಡಿ ಮಾಡಿರುವುದು ಕಾನೂನು ಬಾಹಿರ ಎಂದು ತಹಶೀಲ್ದಾರ್ ಕೆ.ಎಸ್.ಸುಪ್ರೀತಾ ಹೇಳಿದರು. ನಮ್ಮ ಇಲಾಖೆಯ ಸೆಕ್ಷನ್-4 ಅರಣ್ಯದಲ್ಲಿ 40 ವರ್ಷಗಳ ಮರಗಿಡಗಳು ಇವೆ. ಅರಣ್ಯ ಸಚಿವರ ಆದೇಶದಂತೆ ವರದಿ ಬಂದ ಮೇಲೆ ಅಕ್ರಮವಾಗಿ ಪೋಡಿ ಮಾಡಿರುವವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಲಾಗುವುದು ಎಂದು ವಲಯ ಅರಣ್ಯಾಧಿಕಾರಿ ಎಚ್.ಆರ್. ಹೇಮಂತ್ ಕುಮಾರ್ ತಿಳಿಸಿದರು.

## ಒಳಮೀಸಲಾತಿ ಜಾರಿಗೆ ಆಗ್ರಹಿಸಿ ಪ್ರತಿಭಟನೆ

• ಉದಯವಾಹಿನಿ ಶಿವಮೊಗ್ಗ

ಮಾದಿಗ ಸಂಘಟನೆಗಳ ಒಕ್ಕೂಟವು ಒಳಮೀಸಲಾತಿ ಜಾರಿಗೆ ಒತ್ತಾಯಿಸಿ ಜಿಲ್ಲಾಧಿಕಾರಿ ಕಚೇರಿ ಎದುರು ಭಾರಿ ಪ್ರತಿಭಟನೆ ನಡೆಸಿತು. ಸಂಘಟನೆಗಳ ಪ್ರಕಾರ, ಪರಿಶಿಷ್ಟ ಜಾತಿಗಳ ಮೀಸಲಾತಿ 101 ಜಾತಿಗಳ ನಡುವೆ ಸಮನಾಗಿ ಹಂಚಿಕೆಯಾಗದ ಹಿನ್ನೆಲೆಯಲ್ಲಿ ಕಳೆದ 35 ವರ್ಷಗಳಿಂದ ಒಳಮೀಸಲಾತಿ ವರ್ಗೀಕರಣಕ್ಕಾಗಿ ಹೋರಾಟ ನಡೆಯುತ್ತಿದೆ. ಸುಪ್ರೀಂ ಕೋರ್ಟ್ 01/08/2024 ರಂದು ನೀಡಿದ ತೀರ್ಪಿನ ಅನ್ವಯ ರಾಜ್ಯ ಸರ್ಕಾರಕ್ಕೆ ಮೀಸಲಾತಿ ವರ್ಗೀಕರಣದ ಅಧಿಕಾರವಿದ್ದರೂ, ಸರ್ಕಾರವು ಅದನ್ನು ಜಾರಿಗೆ ತರದೆ 27/02/2026ರಂದು ಹಳೆಯ ರೋಸ್ಟರ್ ಪದ್ಧತಿಯಂತೆ 56,432 ಹುದ್ದೆಗಳ ನೇಮಕಾತಿಗೆ ಸುತ್ತೋಲೆ ಹೊರಡಿಸಿರುವುದು ಕಾನೂನುಬಾಹಿರ ಎಂದು ಪ್ರತಿಭಟನಾಕಾರರು ಆರೋಪಿಸಿದರು. ಒಳಮೀಸಲಾತಿ ಜಾರಿಗೆ ಯಾವುದೇ ತಾಂತ್ರಿಕ ಅಡಚಣೆ ಅಥವಾ ನ್ಯಾಯಾಲಯದ ತಡೆಯಾಜ್ಞೆ ಇಲ್ಲದಿದ್ದರೂ ಸರ್ಕಾರ ವಿಳಂಬ ಧೋರಣೆ ಅನುಸರಿಸುತ್ತಿದೆ ಎಂದು ಸಂಘಟನೆಗಳು ಆರೋಪಿಸಿದವು. ಈ ಹಿನ್ನೆಲೆಯಲ್ಲಿ ಸಮುದಾಯದ ಉದ್ಯೋಗಾವಕಾಶಗಳು ಕಳೆದು ಹೋಗುವ ಭೀತಿ ವ್ಯಕ್ತವಾಗಿದೆ ಎಂದರು. ಮುಖ್ಯ


ಉದಯವಾಹಿನಿ ಚಿತ್ರ

ಹಕ್ಕೊತ್ತಾಯಗಳು 56,432 ಹುದ್ದೆಗಳ ನೇಮಕಾತಿ ಸುತ್ತೋಲೆಯನ್ನು ತಕ್ಷಣ ಹಿಂಪಡೆಯಬೇಕು ಒಳಮೀಸಲಾತಿ ಜಾರಿ ಮಾಡಿ ಜನಸಂಖ್ಯೆ ಅನುಗುಣ ಉದ್ಯೋಗ ಹಂಚಿಕೆ ಮಾಡಬೇಕು ವಿಶ್ವವಿದ್ಯಾಲಯಗಳನ್ನು ಒಂದೇ ಘಟಕವಾಗಿ ಪರಿಗಣಿಸುವ ಕ್ರಮ ಕೈಬಿಡಬೇಕು ಅಲೆಮಾರಿ ಸಮುದಾಯಗಳಿಗೆ ಪ್ರತ್ಯೇಕ ಮೀಸಲಾತಿ ನೀಡಬೇಕು ಎಸ್‌ಸಿ/ಎಸ್‌ಟಿ ಮೀಸಲಾತಿ ಪ್ರಮಾಣ ಹೆಚ್ಚಿಸಿ ಸಂವಿಧಾನದ 9ನೇ ಅನುಸೂಚಿಗೆ ಸೇರಿಸಬೇಕು ಗುತ್ತಿಗೆ ಪೌರಕಾರ್ಮಿಕರನ್ನು ಕಾಯಂಗೊಳಿಸಬೇಕು ಸಾಮಾಜಿಕ ನ್ಯಾಯ ಕೇವಲ ಘೋಷಣೆಯಾಗದೇ ಸಂವಿಧಾನಬದ್ಧ ಹಕ್ಕು ಎಂದು ಸಂಘಟನೆಗಳು ಒತ್ತಿ ಹೇಳಿದ್ದು, ಸರ್ಕಾರ ತಕ್ಷಣ ಕ್ರಮ ಕೈಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ಹೋರಾಟ ತೀವ್ರಗೊಳ್ಳಲಿದೆ ಎಂದು ಎಚ್ಚರಿಕೆ ನೀಡಿದರು.

## ಬಂಕ್‌ನಲ್ಲಿ ನೋ ಸ್ಟಾಕ್ ಬೋರ್ಡ್ ನೋಡಿ ಜನರು ಆತಂಕ

• ಉದಯವಾಹಿನಿ ನರೇಗಲ್

ಮಧ್ಯಪ್ರಾಚ್ಯ ಯುದ್ಧದ ಪರಿಣಾಮ ಪೆಟ್ರೋಲ್, ಡೀಸೆಲ್ ಅಭಾವ ಉಂಟಾಗಲಿದೆ ಹಾಗೂ ದರ ಏರಿಕೆಯಾಗಲಿದೆ ಎಂಬ ವದಂತಿ ಹರಡಿದ ಬೆನ್ನಲ್ಲೇ ನರೇಗಲ್ ಪಟ್ಟಣದ ಅಬ್ಬಿಗೇರಿ ಮಾರ್ಗದ ಪೆಟ್ರೋಲ್ ಬಂಕ್‌ನಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಖರೀದಿಗೆ ವಾಹನ ಸವಾರರು ಮುಗಿಬಿದ್ದರು.

ಇನ್ನೊಂದೆಡೆ ಗಜೇಂದ್ರಗಡ ಮಾರ್ಗದ ಅನ್ನದಾನಿ ಬಂಕ್‌ನಲ್ಲಿ ಮಧ್ಯಾಹ್ನವೇ ಪೆಟ್ರೋಲ್-ಡೀಸೆಲ್ ಖಾಲಿ ಎಂಬ ಫಲಕ ಹಾಕಲಾಗಿತ್ತು. ಇದರಿಂದಾಗಿ ಅಭಾವ ಸೃಷ್ಟಿಯಾಗುವ ಭಯದಲ್ಲಿ ಅಪಾರ ಸಂಖ್ಯೆಯ ಜನರು ಇಂಧನ ಖರೀದಿಸಲು ಬೇರೆ ಗ್ರಾಮದ ಬಂಕ್‌ಗಳಿಗೆ ಎಡತಾಕಿದ ದೃಶ್ಯಗಳು ಕಂಡುಬಂದವು. ಸುಡು ಬಿಸಿಲಲ್ಲಿಯೂ ಸಹ ವಾಹನ ಸವಾರರು ಸರತಿ ಸಾಲಿನಲ್ಲಿ ನಿಂತಿದ್ದರು. ಅದರಲ್ಲಿ ಕೆಲವರು ಕಾರು, ಬೈಕ್‌ಗಳಿಗೆ ವಾಹನ ಸವಾರರು ಟ್ಯಾಂಕ್ ಫುಲ್ ಮಾಡಿಸಿಕೊಂಡು ತೆರಳುತ್ತಿದ್ದರು. ಈಗ ಇಲ್ಲಿ ಪೆಟ್ರೋಲ್ ಸ್ಟಾಕ್ ಇಲ್ಲ, ಬರುತ್ತೆ, ಇಂಧನ ಕೊರತೆ ಇಲ್ಲ, ಇಂಧನ ಸಾಕಷ್ಟಿದೆ ಎಂದು ಬಂಕ್ ಸಿಬ್ಬಂದಿ ಹೇಳಿದರೂ. ವಾಹನ ಸವಾರರು ಬಂಕ್‌ನಿಂದ ಕದಲಲಿಲ್ಲ. ಜನರ ಮನವೊಲಿಸುವಲ್ಲಿ ಸಿಬ್ಬಂದಿ ಹೈರಾಣಾದರು. ರೈತ ಸಮುದಾಯ ಹೆಚ್ಚಿರುವ ನರೇಗಲ್‌ನಲ್ಲಿ ಕೃಷಿಕರು ತಮ್ಮ ಟ್ರ್ಯಾಕ್ಟರ್‌ಗಳಿಗೆ, ಕೃಷಿ ಯಂತ್ರಗಳಿಗೆ, ರಾಶಿ ಮಷಿನ್‌ಗಳಿಗೆ ಟ್ರ್ಯಾಕ್ಟರ್ ಮೂಲಕ ದೊಡ್ಡ, ದೊಡ್ಡ ಕ್ಯಾನ್ ತಂದು, ಪೆಟ್ರೋಲ್, ಡೀಸೆಲ್ ಗಳನ್ನು ತುಂಬಿಸಿಕೊಂಡು ಹೋಗುತ್ತಿದ್ದ ದೃಶ್ಯ ಕಂಡು ಬಂದವು. ಬಂಕ್‌ನಲ್ಲಿ ಪೆಟ್ರೋಲ್, ಡೀಸೆಲ್ ಇದ್ದರು ಹಾಕುತ್ತಿಲ್ಲ. ನೋ ಸ್ಟಾಕ್ ಎನ್ನುವ ಬೋರ್ಡ್ ಹಾಕಿ ಬೇಕಾದವರಿಗೆ ನೀಡುತ್ತಿದ್ದಾರೆ ಇದರಿಂದಾಗಿ ಬೇರೆ ಬಂಕ್‌ಗಳಲ್ಲಿ ದಟ್ಟಣೆಯೂ ಉಂಟಾಗಿದ್ದು, ಪರಿಸ್ಥಿತಿ ನಿಯಂತ್ರಿಸಲು ಬಂಕ್ ಸಿಬ್ಬಂದಿ ಹರಸಾಹಸ ಪಡುತ್ತಿದ್ದಾರೆ ಎಂದು ವಾಹನ ಸವಾರರು ಆರೋಪ ಮಾಡಿದರು.


ಉದಯವಾಹಿನಿ ಚಿತ್ರ

ನೆನ್ನೆಯಿಂದ ಲೋಡ್ ಬಂದಿಲ್ಲ. ಮಧ್ಯಾಹ್ನ 2.30ಕ್ಕೆ ನಮ್ಮಲ್ಲಿನ ಸ್ಟಾಕ್ ಖಾಲಿಯಾಗಿದೆ. ಕೇಳಿದಷ್ಟು ಇಂಧನ ಪೂರೈಕೆ ಆಗುತ್ತಿಲ್ಲ. 330 ಬಂಕ್‌ಗಳಿಗೆ ದಿನಕ್ಕೆ 100 ಲೋಡ್ ಮಾತ್ರ ಕಳುಹಿಸುತ್ತಿದ್ದಾರೆ. ಆದ್ಯತೆ ಮೇರೆಗೆ ಇಂಧನ ಸರಬರಾಜು ಮಾಡುತ್ತಿದ್ದಾರೆ. ಗುರುವಾರ ಮಧ್ಯಾಹ್ನದ ಒಳಗೆ ನಮಗೆ ಇಂಧನ ಸಿಗುವ ನಿರೀಕ್ಷೆ ಇದೆ. ಜನರು ಆತಂಕಗೊಳ್ಳಬಾರದು ಎಂದು ಅನ್ನದಾನಿ ಪೆಟ್ರೋಲ್ ಬಂಕ್ ಮಾಲೀಕ ರಾಹುಲ್ ಎಂ. ಮಾಹಿತಿ ನೀಡಿದರು.

## ಕಸದ ರಾಶಿ: ಸಾರ್ವಜನಿಕರ ಆಕ್ರೋಶ

• ಉದಯವಾಹಿನಿ ಹುನಗುಂದ

ತಾಲ್ಲೂಕಿನ ಚಿತ್ತವಾಡಗಿಯ ಹಿರೇಹಳ್ಳದ ದಡದಲ್ಲಿ ಗ್ರಾಮ ಪಂಚಾಯಿತ್ತಿ ಸಿಬ್ಬಂದಿ ವಾಹನದ ಮೂಲಕ ಚರಂಡಿ ತ್ಯಾಜ್ಯ ಹಾಗೂ ಕಸಕಡ್ಡಿ ಸುರಿಯುತ್ತಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ಗ್ರಾಮ ಪಂಚಾಯಿತಿ ಸಿಬ್ಬಂದಿ ಹಿರೇಹಳ್ಳಕ್ಕೆ ತ್ಯಾಜ್ಯ ಸುರಿಯುವುದರಿಂದ ನೀರು ಮಲಿನಗೊಳ್ಳುತ್ತದೆ. ಜಾನುವಾರು, ಪ್ರಾಣಿ, ಪಕ್ಷಿಗಳು ಹಾಗೂ ಜಲಚರಗಳು ಹಿರೇಹಳ್ಳದ ನೀರನ್ನು ಆಶ್ರಯಿಸಿವೆ. ಆದರೆ ಬೇಸಿಗೆ ಸಂದರ್ಭದಲ್ಲಿ ಹಳ್ಳಕ್ಕೆ ತ್ಯಾಜ್ಯ ಸುರಿಯುವುದು ಎಷ್ಟರ ಮಟ್ಟಿಗೆ ಸರಿ ಎಂದು ಜನರು ಪ್ರಶ್ನಿಸುತ್ತಾರೆ.

ಕಳೆದ ಕೆಲವು ತಿಂಗಳುಗಳಿಂದ ಹಳ್ಳದ ದಡದಲ್ಲಿ ತ್ಯಾಜ್ಯ ಸುರಿಯುವ ಕಾರ್ಯ ನಿರಂತರವಾಗಿ ನಡೆಯುತ್ತಿದೆ. ಪದೇ ಪದೇ ಹಳ್ಳಕ್ಕೆ ತ್ಯಾಜ್ಯ ಸುರಿಯುವುದರಿಂದ ಹಳ್ಳದ ನೀರಿಗೆ ತ್ಯಾಜ್ಯ ಸೇರಿ ನೀರು ಮಲಿನಗೊಳ್ಳುತ್ತಿದೆ ಜೊತೆಗೆ ದುರ್ವಾಸನೆ ಬೀರುತ್ತಿದೆ. ಚಿತ್ತವಾಡಗಿ ಗ್ರಾಮವು ಹಿರೇಬಾದವಾಡಗಿ ಗ್ರಾಮ ಪಂಚಾಯಿತ್ತಿ ವ್ಯಾಪ್ತಿಗೆ ಒಳಪಡುತ್ತದೆ. ಗ್ರಾಮ ಪಂಚಾಯಿತಿ ಪ್ರತ್ಯೇಕ ತ್ಯಾಜ್ಯ ವಿಲೇವಾರಿ ಘಟಕ ಹೊಂದಿದೆ. ಆದರೂ ಹಳ್ಳದಲ್ಲಿ ಪದೇ ಪದೇ ತ್ಯಾಜ್ಯ ಸುರಿಯುತ್ತಿರುವುದು ಏಕೆ? ನೀರು ಮಲಿನಗೊಂಡು ಪ್ರಾಣಿ, ಪಕ್ಷಿಗಳ ಮೇಲೆ ದುಷ್ಪರಿಣಾಮ ಉಂಟಾದರೆ ಯಾರು ಹೊಣೆ ಎಂದು ಸ್ಥಳೀಯರು ಪ್ರಶ್ನಿಸುತ್ತಾರೆ. ಹಿರೇಹಳ್ಳದ ದಡದಲ್ಲಿ ಗ್ರಾಮದ ಆರಾಧ್ಯ ದೈವ ವೀರಭದ್ರೇಶ್ವರ ದೇವಸ್ಥಾನವಿದೆ. ದೇವಸ್ಥಾನದ ಸುತ್ತಲಿನ ಪರಿಸರವನ್ನು ಸ್ವಚ್ಛಂದವಾಗಿಡುವ ಬದಲಿಗೆ ಜಾಗ ಮಲಿನಗೊಳಿಸುತ್ತಿರುವುದು ಸರಿಯಲ್ಲ ಎನ್ನುತ್ತಾರೆ ಗ್ರಾಮಸ್ಥರು. ಹಳ್ಳದ ದಡದಲ್ಲಿ ತ್ಯಾಜ್ಯ ಸುರಿಯುತ್ತಿರುವುದರ ಬಗ್ಗೆ ಮಾಹಿತಿ ಪಡೆಯಲು ಹಿರೇಬಾದವಾಡಗಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಕರೆ ಮಾಡಿದರೆ ಕರೆ ಸ್ವೀಕರಿಸಲಿಲ್ಲ.


ಉದಯವಾಹಿನಿ ಚಿತ್ರ

# ನಿಗಧಿತ ಕಾಲಾವಧಿಯ ಒಳಗೆ ಯೋಜನೆ ಪೂರ್ಣಗೊಳಿಸಿ:ಡಿಸಿ

• ಘಟಕ ಪ್ರಾರಂಭಿಸದೇ ಇರುವ ಉದ್ದಿಮೆದಾರರ ಕರಾರು ರದ್ದುಪಡಿಸಿ, ಆಸಕ್ತರಿಗೆ ಅವಕಾಶ ಕಲ್ಪಿಸಬೇಕು


• ಉದಯವಾಹಿನಿ ಉಡುಪಿ

ಕೈಗಾರಿಕೆ ಘಟಕಗಳ ಸ್ಥಾಪನೆಯೊಂದಿಗೆ ಸ್ಥಳೀಯ ಜನರಿಗೆ ಉದ್ಯೋಗ ಅವಕಾಶ ಕಲ್ಪಿಸಲು ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿ ಪಡಿಸಿ, ಆಸಕ್ತ ಉದ್ಯಮಿಗಳಿಗೆ ಹಂಚಿಕೆ ಮಾಡಿದ್ದು, ಘಟಕಗಳನ್ನು ನಿಗಧಿತ ಕಾಲಾವಧಿಯ ಒಳಗೆ ಯೋಜನೆಗಳನ್ನು ಪೂರ್ಣಗೊಳಿಸಬೇಕು. ತಪ್ಪಿದ್ದಲ್ಲಿ ಮಂಜೂರಾತಿಯನ್ನು ರದ್ದುಪಡಿಸಿ, ನವ ಉದ್ಯಮಿಗಳಿಗೆ ಹಂಚಿಕೆ ಮಾಡಬೇಕೆಂದು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ ಸೂಚನೆ ನೀಡಿದರು.

ಅವರು ನಗರದ ಮಣಿಪಾಲ ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ ಸಭೆ, ಕೈಗಾರಿಕಾ ಸ್ಪಂದನ, ಜಿಲ್ಲಾ ಮಟ್ಟದ ರಫ್ತು ಉತ್ತೇಜನ ಸಮಿತಿ ಸಭೆ, ಪ್ರಧಾನಮಂತ್ರಿಯವರ ಉದ್ಯೋಗ ಸೃಜನ ಯೋಜನೆಯ ಡಿ.ಎಲ್.ಎಂ.ಸಿ ಸಭೆ ಹಾಗೂ ಪಿ.ಎಂ ವಿಶ್ವಕರ್ಮ ಯೋಜನೆಯ ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡುತ್ತಿದ್ದರು.

ಕೈಗಾರಿಕಾ ಪ್ರದೇಶಗಳಲ್ಲಿ ಕೈಗಾರಿಕಾ ಘಟಕ ಸ್ಥಾಪನೆಗೆ ಹೆಚ್ಚಿನ ಕಾಲಾವಕಾಶ ಪಡೆದಿರುವ ಘಟಕಗಳು ನಿಗಧಿತ ಅವಧಿಯಲ್ಲಿ ಯೋಜನೆಯನ್ನು ಪೂರ್ಣಗೊಳಿಸಬೇಕು.

ತಪ್ಪಿದ್ದಲ್ಲಿ ಸದ್ರಿರವರಿಗೆ ಮಂಜೂರಾಗಿರುವ ನಿವೇಶನವನ್ನು ರದ್ದುಪಡಿಸಿ, ಹೊಸದಾಗಿ ಅರ್ಜಿ ಸಲ್ಲಿಸಿರುವ ಉದ್ಯಮಿಗಳಿಗೆ ನಿವೇಶನವನ್ನು ಹಂಚಿಕೆ ಮಾಡಲು ಕ್ರಮವಹಿಸಬೇಕು ಎಂದು ಕೆ.ಐ.ಎ.ಡಿ.ಬಿ ಅಧಿಕಾರಿಗಳಿಗೆ ಸೂಚಿಸಿದರು. ಹೊಸ ಕೈಗಾರಿಕಾ ಪ್ರದೇಶ ನಿರ್ಮಾಣಕ್ಕೆ ಹೆಬ್ರಿ ತಾಲ್ಲೂಕು ಶಿವಪುರದಲ್ಲಿ 74.84 ಎಕರೆ ಹಾಗೂ ಕೆರೆಬೆಟ್ಟುವಿನಲ್ಲಿ 38.75 ಎಕರೆ ಖಾಸಗಿ ಹಾಗೂ ಸರ್ಕಾರಿ ಜಮೀನು ಸೇರಿದಂತೆ ಒಟ್ಟು 113.59 ಎಕರೆ ಜಮೀನಿನ ಗಡಿ ಗುರುತಿಸುವ ಕಾರ್ಯವನ್ನು ಆದ್ಯತೆ ಮೇಲೆ ಕೈಗೊಳ್ಳುವಂತೆ ಹಿಂದಿನ ಸಭೆಯಲ್ಲಿ ಸೂಚಿಸಿದ್ದು, ಅದರಂತೆ ಅರಣ್ಯ ಇಲಾಖೆ, ಕಂದಾಯ ಇಲಾಖೆ ಹಾಗೂ ಮೋಜಣಿ ಶಿವಮೊಗ್ಗ ಇವರು ಜಂಟಿ ಸಮೀಕ್ಷೆ ನಡೆಸಿದ್ದು, ಶೀಘ್ರವಾಗಿ ಗಡಿ ಕಲ್ಲುಗಳನ್ನು ಅಳವಡಿಸುವ ಕಾರ್ಯವನ್ನು ಈಗಾಗಲೇ ಕೈಗೊಂಡಿದ್ದು, ವರದಿಯನ್ನು ಆದ್ಯತೆಯ ಮೇಲೆ ಶೀಘ್ರದಲ್ಲಿಯೇ ನೀಡಬೇಕೆಂದರು.


ಉದಯವಾಹಿನಿ ಚಿತ್ರ

**ಕೆಐಎಡಿಬಿ ಅಧಿಕಾರಿಗಳಿಗೆ ಸೂಚನೆ**

ಬ್ರಹ್ಮಾವರ ತಾಲ್ಲೂಕು ಉಪ್ಪೂರಿನಲ್ಲಿ 101.1950 ಎಕರೆ ಖಾಸಗಿ ಜಮೀನನ್ನು ಸಣ್ಣ ಕೈಗಾರಿಕಾ ವಸಾಹತು ಸ್ಥಾಪನೆಗೆ ಗುರುತಿಸಲಾಗಿದ್ದು, ಈ ಕುರಿತ ಪ್ರಸ್ತಾವನೆಗೆ ಸಂಬಂಧಿಸಿದಂತೆ ಬೇಡಿಕೆಯ ವಿವರಗಳನ್ನು ಮಾನ್ಯ ಸಚಿವರಿಗೆ ಸಲ್ಲಿಸಲಾಗಿದೆ. ಸರಕಾರದ ಮಟ್ಟದಲ್ಲಿ ಇದನ್ನು ಅನುಸರಿಸಿ, ಕೈಗಾರಿಕಾ ಪ್ರದೇಶಗಳ ಪ್ರಸ್ತಾನಬೆಗೆ ಅನುಮೋದನೆ ಪಡೆಯಬೇಕು ಎಂದರು.

ಉಡುಪಿ ತಾಲ್ಲೂಕು ಕೋಡಿಬೆಟ್ಟು ಗ್ರಾಮ ಪಂಚಾಯತ್ ವ್ಯಾಪ್ತಿಯ ಪೆರ್ಣಂಕಿಲ ಗ್ರಾಮದ ಸ.ನಂ. 06 ರಲ್ಲಿನ 28 ಎಕರೆ ಸರ್ಕಾರಿ ಜಮೀನಿನಲ್ಲಿ ಕೈಗಾರಿಕಾ ವಸಾಹತು ಸ್ಥಾಪಿಸಲು ಮಂಜೂರು ಮಾಡುವಂತೆ ಉಡುಪಿ ತಹಶೀಲ್ದಾರರಿಗೆ ಪತ್ರ ಬರೆಯಲಾಗಿದ್ದು, ಈ ಬಗ್ಗೆ ಕ್ರಮವಹಿಸುವಂತೆ ತಿಳಿಸಿದರು.

ಜಿಲ್ಲೆಯ ವಿವಿಧ ಕೈಗಾರಿಕಾ ಪ್ರದೇಶಗಳಲ್ಲಿ ಗುತ್ತಿಗೆ ಕರಾರು ನಿರ್ವಹಿಸಿಕೊಂಡು ಯೋಜನೆ ಪ್ರಾರಂಭಿಸದೇ ಇರುವ ಘಟಕಗಳ ಮಾಹಿತಿ ಪಡೆದು ಮಾತನಾಡಿದ ಜಿಲ್ಲಾಧಿಕಾರಿಗಳು, ನಂದಿಕೂರು, ಬೆಳಪು ಹಾಗೂ ಮಿಯ್ಯಾರು ಕೈಗಾರಿಕಾ ಪ್ರದೇಶದ 18.39 ಎಕರೆಯಲ್ಲಿ ಒಟ್ಟು 26 ಘಟಕಗಳು ಗುತ್ತಿಗೆಗಾರರು ನಿರ್ವಹಿಸಿಕೊಂಡಿದ್ದು, 6 ಘಟಕಗಳು ಅನುಷ್ಠಾನದ ಹಂತದಲ್ಲಿದ್ದು, 1 ಘಟಕವು ನ್ಯಾಯಾಲಯದ ಹಂತದಲ್ಲಿದ್ದು, 19 ಘಟಕಗಳು ಯಾವುದೇ ಕೆಲಸ ಆರಂಭಿಸಿರುವುದಿಲ್ಲ. ಘಟಕ ಪ್ರಾರಂಭಿಸದೇ ಇರುವ ಉದ್ದಿಮೆದಾರರ ಕರಾರು ರದ್ದುಪಡಿಸಿ, ಕೈಗಾರಿಕಾ ಘಟಕ ಸ್ಥಾಪನೆಗೆ ಮುಂದೆ ಬರುವ ಆಸಕ್ತರಿಗೆ ಅವಕಾಶ ಕಲ್ಪಿಸಬೇಕು ಎಂದರು.

> ಜಿಲ್ಲೆಯಲ್ಲಿ ಕೈಗಾರಿಕೋದ್ಯಮಿಗಳು ಘಟಕ ಸ್ಥಾಪನೆಗೆ ಹಂಚಿಕೆಯಾದ ನಿವೇಶನಗಳಲ್ಲಿ ಉದ್ದಿಮೆ ಪ್ರಾರಂಭಿಸದೇ ಪ್ರತೀ ಸಭೆಯಲ್ಲಿಯೂ ವಿವಿಧ ನೆಪವೊಡ್ಡಿ ಹೆಚ್ಚುವರಿ ಕಾಲಾವಕಾಶ ಕೋರುತ್ತಾರೆ. ಹೆಚ್ಚುವರಿ ಕಾಲಾವಕಾಶ ಪಡೆದ ಹಾಗೂ ಚಟುವಟಿಕೆ ಬದಲಾಯಿಸಿಕೊಂಡ ಘಟಕಗಳ ಸ್ಥಿತಿ-ಗತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ವರದಿ ನೀಡುವಂತೆ ತಿಳಿಸಿದ ಅವರು, ಇದು ಪುನರಾವರ್ತನೆಯಾದಲ್ಲಿ ಕೈಗಾರಿಕೆ ಪ್ರಾರಂಭಿಸಲು ನಿವೇಶನ ಕೋರಿ ಅರ್ಜಿ ಸಲ್ಲಿಸುವ ಆಸಕ್ತರುಗಳಿಗೆ ನಿವೇಶನವನ್ನು ಮರು ಹಂಚಿಕೆ ಮಾಡಲು ಕ್ರಮವಹಿಸಲಾಗುವುದು.
> -ಸ್ವರೂಪ ಟಿ.ಕೆ, ಜಿಲ್ಲಾಧಿಕಾರಿ

## ಮಿನಿ ನ್ಯೂಸ್

### ತೃತೀಯ ಭಾಷಾ ಪರೀಕ್ಷೆಯ ದಿನಾಂಕ ಬದಲಾವಣೆ

• ಉದಯವಾಹಿನಿ

2026ರ ಎಸ್‌ಎಸ್‌ಎಲ್‌ಸಿ ಪರೀಕ್ಷೆ-1ನ್ನು ದಿನಾಂಕ:18.03.2026 ರಿಂದ 02.04.2026ರವರೆಗೆ ನಡೆಸಲು ದಿನಾಂಕ:04.11.2025ರಂದು ಅಂತಿಮ ವೇಳಾಪಟ್ಟಿಯನ್ನು ಪ್ರಕಟಿಸಲಾಗಿತ್ತು. ಅದರಂತೆ ಈಗಾಗಲೇ ಪರೀಕ್ಷೆಯು ಪ್ರಾರಂಭವಾಗಿರುತ್ತದೆ. ಸದರಿ ವೇಳಾಪಟ್ಟಿಯನ್ವಯ ತೃತೀಯ ಭಾಷೆ ಪರೀಕ್ಷೆಯನ್ನು ದಿನಾಂಕ:30.03.2026ರಂದು ನಿಗಧಿಪಡಿಸಲಾಗಿತ್ತು. **ಆದರೆ ಸರ್ಕಾರದ ಅಧಿಸೂಚನೆ ಸಂಖ್ಯೆ**:ಸಿಆಸುಇ 07 ಹೆಚ್‌ಹೆಚ್‌ಎಲ್ 2026 ದಿನಾಂಕ:26.03.2026 ರನ್ವಯ ಮಹಾವೀರ ಜಯಂತಿ ಪ್ರಯುಕ್ತ **ಘೋಷಿಸಲಾಗಿರುವ ಸಾರ್ವತ್ರಿಕ ರಜಾ ದಿನವನ್ನು ದಿನಾಂಕ**:31.03.2026ರ ಮಂಗಳವಾರ ಬದಲಾಗಿ ದಿನಾಂಕ: 30.03.2026ರ ಸೋಮವಾರ ಎಂದು ಮಾರ್ಪಡಿಸಿ ಆದೇಶಿಸಲಾಗಿದೆ. ಈ ಸಂಬಂಧ ದಿನಾಂಕ:30.03.2026ರಂದು ನಿಗಧಿಪಡಿಸಲಾಗಿದ್ದ ತೃತೀಯ ಭಾಷೆ ವಿಷಯದ ಪರೀಕ್ಷೆಯನ್ನು ದಿನಾಂಕ: 31.03.2026ರ ಮಂಗಳವಾರ ಈಗಾಗಲೇ ನಿಗಧಿಪಡಿಸಿರುವ ಅವಧಿಯಲ್ಲಿ ನಡೆಸಲಾಗುವುದು. ಉಳಿದ ವಿಷಯದ ಪರೀಕ್ಷೆಗಳು ವೇಳಾಪಟ್ಟಿಯಂತೆ ಯಥಾವತ್ತಾಗಿ ನಡೆಯುವುದು.

### ಕೇರಳ ಚುನಾವಣೆ : ಮದ್ಯ ಮಾರಾಟ ನಿಷೇಧ

• ಉದಯವಾಹಿನಿ ಮಂಗಳೂರು

ಕೇರಳ ರಾಜ್ಯದಲ್ಲಿ ನಡೆಯಲಿರುವ ವಿಧಾನಸಭಾ ಸಾರ್ವತ್ರಿಕ ಚುನಾವಣೆ -2026ರ ಸಂಬಂಧ ಮತದಾನದ ನಿಮಿತ್ತ ಏಪ್ರಿಲ್ 7 ರ ಸಂಜೆ 5 ಗಂಟೆಯಿಂದ ಏಪ್ರಿಲ್ 9 ರಂದು ಮಧ್ಯರಾತ್ರಿ 12 ಗಂಟೆಯ ತನಕ ಹಾಗೂ ಮತ ಎಣಿಕೆಯ ನಿಮಿತ್ತ ಮೇ 3 ರ ಮಧ್ಯರಾತ್ರಿ 12 ಗಂಟೆಯಿಂದ ಮೇ 4 ರ ಮಧ್ಯರಾತ್ರಿ 12 ಗಂಟೆಯ ತನಕ ಒಣ ದಿನ ಎಂದು ಘೋಷಿಸಲಾಗಿದೆ. ಈ ದಿನಗಳಲ್ಲಿ ಕೇರಳ ರಾಜ್ಯಕ್ಕೆ ಹೊಂದಿಕೊಂಡಿರುವ ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ, ಬಂಟ್ವಾಳ, ಪುತ್ತೂರು ಮತ್ತು ಸುಳ್ಯ ತಾಲ್ಲೂಕುಗಳ ಗಡಿಭಾಗದ 5 ಕಿ.ಮೀ. ವ್ಯಾಪ್ತಿಯಲ್ಲಿರುವ ಎಲ್ಲಾ ವಿಧದ ಮದ್ಯದಂಗಡಿ/ಬಾರ್ ಸನ್ನದುಗಳನ್ನು, ಮದ್ಯ ತಯಾರಿಕಾ ಘಟಕಗಳನ್ನು, ಶೇಂದಿ ಅಂಗಡಿಗಳನ್ನು ಮುಚ್ಚಲು ಹಾಗೂ ಈ ದಿನಗಳಂದು ನಿಷೇಧಿಸಿರುವ ಪ್ರದೇಶಗಳಲ್ಲಿ ಎಲ್ಲಾ ವಿಧದ ಮದ್ಯ ಮಾರಾಟವನ್ನು ನಿಷೇಧಿಸಿ ಜಿಲ್ಲಾಧಿಕಾರಿ ದರ್ಶನ್ ಎಚ್.ವಿ ಆದೇಶ ಹೊರಡಿಸಿದ್ದಾರೆ.

### ಆಂಧ್ರ ಪೊಲೀಸರಿಂದ ಉಗ್ರವಾದದ ಸಿದ್ಧಾಂತ ಪ್ರಚಾರಕನ ಬಂಧನ

• ಉದಯವಾಹಿನಿ ಬಳ್ಳಾರಿ

ಆಂಧ್ರ ಪ್ರದೇಶದ ಪೊಲೀಸರು ನಗರದ ಕೌಲ್ ಬಜಾರ್ ಪ್ರದೇಶದ. ಅಬ್ದುಲ್ ಕಲಾಂ ಬೀದಿಯ ವಾಸಿಯಾಗಿದ್ದ ಅಬ್ದುಲ್ ಸಲಾಂ (36) ಎಂಬ ಯುವಕನನ್ನು. ಅಲ್ಲಿಪುರದ ದಾರದ ಮಿಲ್ ಬಳಿ ಉಗ್ರವಾದದ ಸಿದ್ಧಾಂತ ಪ್ರಚಾರ ಮಾಡುತ್ತಿದ್ದನೆಂದು ಬಂಧಿಸಿ ಮೊನ್ನೆ ಕರೆದೊಯ್ದಿದ್ದಾರೆ. ಬಂಧಿತ ಯುವಕ ಆನ್ ಲೈನ್‌ನಲ್ಲಿ ಮೂಲಭೂತವಾದದ ಪ್ರಚಾರ, ನಿಷೇಧಿತ ಉಗ್ರ ಸಂಘಟನೆಗಳೊಂದಿಗೆ ಸಂಪರ್ಕ ಹೊಂದಿದ್ದ ಆರೋಪ ಇದೆ. ವಿದೇಶಿ ಉಗ್ರ ಅಲ್ ಹಕೀಮ್ ಶುಕೂರ್ ನೊಂದಿಗೆ ಈತ ಸಂಪರ್ಕ ಹೊಂದಿ. ಈತ ಸಾಮಾಜಿಕ ಮಾಧ್ಯಮಗಳನ್ನು ಬಳಸಿಕೊಂಡು ಉಗ್ರವಾದದ ಬಗ್ಗೆ ತಿಳಿಸುತ್ತಿದ್ದನಂತೆ, ಜಿಹಾದ್ ಪರಿಕಲ್ಪನೆಗಳನ್ನು ಪ್ರಚಾರ ಮಾಡುವ ಗುಂಪಿನ ಸದಸ್ಯನಾಗಿದ್ದನಂತೆ.

### ಕಡಲೆ ಖರೀದಿ ಕೇಂದ್ರದ ಸದುಪಯೋಗ ಪಡಿಸಿಕೊಳ್ಳಲು ಕರೆ

• ಉದಯವಾಹಿನಿ ನವಲಗುಂದ

ತಾಲ್ಲೂಕು ಮರಬ ಗ್ರಾಮದಲ್ಲಿ ಪ್ರಾರಂಭವಾದ ಕಡಲೆ ಖರೀದಿ ಕೇಂದ್ರಕ್ಕೆ ಬಿಜೆಪಿ ಮುಖಂಡರಾದ ದೇವರಾಜ್ ಬ.ದಾಡಿಬಾವಿ ಭೇಟಿ ನೀಡಿ ಖರೀದಿ ಕೇಂದ್ರದಲ್ಲಿ, ಖಾಲಿ ಚೀಲದ ಅಭಾವ ಕಂಡುಬರುತ್ತಿದ್ದು ಸರ್ಕಾರ ಕೂಡಲೇ ಎಲ್ಲಾ ಕಡಲೆ ಕೇಂದ್ರಗಳಿಗೆ ಕಾಲಿ ಚೀಲ ಪೂರೈಕೆ ಮಾಡಿ ರೈತರಿಗೆ ಅನುಕೂಲ ಕಲ್ಪಿಸಬೇಕು ಹಾಗೂ ಪ್ರಸ್ತುತ ಖರೀದಿ ಕೇಂದ್ರದ ಸ್ಥಿತಿಗತಿಗಳನ್ನು ಕುರಿತು ರೈತರೊಂದಿಗೆ ಚರ್ಚಿಸಿ ರೈತರು ತಾವು ಬೆಳೆದ ಕಡಲೆ ಬೆಳೆ ಬೆಂಬಲ ಬೆಲೆಯಲ್ಲಿ ಖರೀದಿ ಕೇಂದ್ರಗಳಲ್ಲಿ ಮಾರಾಟ ಮಾಡಿ ಕೇಂದ್ರದ ಸದುಪಯೋಗ ಪಡಿಸಿಕೊಳ್ಳಲು ಕರೆ ನೀಡಿದರು. ರೈತ ಮುಖಂಡರು ರೈತರು ಉಪಸ್ಥಿತರಿದ್ದರು.

### ಸಮಾಜಕ್ಕೆ ತ್ಯಾಗ ಮಾಡಿದ ಗಣ್ಯರನ್ನು ಸ್ಮರಿಸಬೇಕು: ಸಾಹಿತಿ ಮಹಾಂತಪ್ಪ

• ಉದಯವಾಹಿನಿ ಹುಬ್ಬಳ್ಳಿ

ಸಮಾಜಕ್ಕೆ ತ್ಯಾಗ ಮಾಡಿದ ಗಣ್ಯರನ್ನು ಸದಾ ಸ್ಮರಿಸಿಕೊಂಡು ತಮ್ಮ ತಮ್ಮ ಜೀವನದಲ್ಲಿ ಪರಿವರ್ತನೆ ತಂದುಕೊಂಡು ಸಂತಸದ ಜೀವನವನ್ನು ಮಾಡಬೇಕೆಂದು ಸಾಹಿತಿ ಮಹಾಂತಪ್ಪ ನಂದೂರ ಹೇಳಿದರು.

ಅವರು ಭೈರಿದೇವರಕೊಪ್ಪದ ಜಾನಪದ ಜಗಲಿಯಲ್ಲಿ ನುಡಿ ಕನ್ನಡ ಬಳಗ, ಜಾನಪದ ಜಗಲಿ, ಡಾ. ಡಿ.ಎಸ್. ಕರ್ಕಿ ಸಾಹಿತ್ಯ ವೇದಿಕೆ ಮತ್ತು ಜೀವಿ ಕಲಾ ಬಳಗದ ಸಂಯುಕ್ತ ಆಶ್ರಯದಲ್ಲಿ ಜರುಗಿದ ಸುಪ್ರಭಾತ ಕವಿ ಗಂಗಪ್ಪ ವಾಲಿ ಅವರ 114ನೇ ಮತ್ತು ನಿರಂಜನ ವಾಲಿಶೆಟ್ಟರ ಅವರ 87ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಮಾತನಾಡುತ್ತಾ, ಉಭಯತರರು ಸಾಹಿತ್ಯದ ಕಂಪನ್ನು ನಾಡಿಗೆ ನೀಡಿದ್ದಾರೆಂದು ಹೇಳಿದರು. ಸಾಹಿತಿ ಶ್ರೀಮತಿ ಸುನಂದಾ ಕಡಮೆ, ಹಿರಿಯ ಪತ್ರಕರ್ತ ಗಣಪತಿ ಗಂಗೊಳ್ಳಿ, ನಗರದ ಶರಣ ಸಾಹಿತ್ಯ ಘಟಕದ ಅಧ್ಯಕ್ಷರಾದ ಗುರುಸಿದ್ದಪ್ಪ ಬಡಿಗೇರ, ಉಭಯತರರ ಜೀವನ ಮತ್ತು ಸಾಧನೆಗಳನ್ನು ವಿವರಿಸಿದರು.

### ಪರೀಕ್ಷಾ ಕೇಂದ್ರಗಳಿಗೆ ಜಿಲ್ಲಾಧಿಕಾರಿ ಡಾ.ಆನಂದ ಭೇಟಿ, ಪರಿಶೀಲನೆ

• ಉದಯವಾಹಿನಿ ವಿಜಯಪುರ


ನಗರದ ಮರಾಠಿ ವಿದ್ಯಾಲಯದಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷಾ ಕೇಂದ್ರಕ್ಕೆ ಜಿಲ್ಲಾಧಿಕಾರಿ ಡಾ.ಆನಂದ ಕೆ. ಅವರು ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಈ ಸಂದರ್ಭದಲ್ಲಿ ಪರೀಕ್ಷೆ ಸುಸೂತ್ರವಾಗಿ ನಡೆಸುವ ನಿಟ್ಟಿನಲ್ಲಿ ಪರೀಕ್ಷಾ ಮಾರ್ಗಸೂಚಿಯನ್ವಯ ಕಾರ್ಯ ನಿರ್ವಹಿಸುವಂತೆಯೂ, ಯಾವುದೇ ಸಮಸ್ಯೆ ಬಾರದ ರೀತಿಯಲ್ಲಿ ಅತ್ಯಂತ ಜಾಗೃತೆಯಿಂದ ಕಾರ್ಯ ನಿರ್ವಹಿಸಿ ಸುಸೂತ್ರ ಪರೀಕ್ಷೆ ನಡೆಯುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗುವಂತೆ ಪರೀಕ್ಷೆಯ ನಿಯೋಜಿತ ಅಧಿಕಾರಿಗಳಿಗೆ ಸೂಚನೆ ನೀಡಿದರು. ಈ ಸಂದರ್ಭ ಪರೀಕ್ಷಾ ಕೇಂದ್ರದಲ್ಲಿ ಒದಗಿಸಿರುವ ಮೂಲಭೂತ ಸೌಲಭ್ಯ, ಭದ್ರತೆ, ಕುಡಿಯುವ ನೀರು, ಅಳವಡಿಸಿರುವ ಸಿಸಿಟಿವಿ ಎಲ್ಲಾ ವ್ಯವಸ್ಥೆಗಳನ್ನು ಪರಿಶೀಲನೆ ನಡೆಸಿದ ಅವರು ಸಮರ್ಪಕವಾಗಿ ಇರುವಂತೆ ನೋಡಿಕೊಳ್ಳಿ, ಕಟ್ಟುನಿಟ್ಟಾಗಿ ಮೇಲ್ವಿಚಾರಣೆ ಇರಬೇಕು. ಸಮಯಪಾಲನೆ ಅನುಸರಿಸಿ ಪರೀಕ್ಷೆಗೆ ನಿಯೋಜಿತ ಅಧಿಕಾರಿ, ಸಿಬ್ಬಂದಿವಹಿಸಿರುವ ಜವಾಬ್ದಾರಿ ಅಚ್ಚುಕಟ್ಟಾಗಿ ಬಹು ಎಚ್ಚರಿಕೆಯಿಂದ ನಿಭಾಯಿಸಿ ಎಂದು ಸೂಚನೆ ನೀಡಲಾಯಿತು. ಈ ಸಂದರ್ಭದಲ್ಲಿ ಪರೀಕ್ಷೆಗೆ ನಿಯೋಜಿತ ಅಧಿಕಾರಿ, ಸಿಬ್ಬಂದಿ ಇದ್ದರು.

### ಐಆರ್ ಜಿಸಿ ನೌಕಾ ವಿಭಾಗದ ಕಮಾಂಡರ್ ಅಲಿರೆಜಾ ತಂಗ್ಸಿರಿ ಹತ್ಯೆ ಎಂದು ಇಸ್ರೇಲ್ ವರದಿ

# ಸೇನೆಗೆ 12 ವರ್ಷದ ಮಕ್ಕಳ ಸೇರ್ಪಡೆಗೆ ಮುಂದಾದ ಇರಾನ್

**ಇರಾನ್:** ಹಾರ್ಮುಜ್ ಜಲಸಂಧಿ ಯ ಮೇಲೆ ಹತೋಟಿ ಸಾಧಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ ನೌಕಾ ವಿಭಾಗದ ನೇತೃತ್ವ ವಹಿಸಿದ್ದ ಅಲಿರೆಜಾ ತಂಗ್ಸಿರಿ ಅವರು ಬಂದರ್ ಅಬ್ಬಾಸ್ ಬಂದರು ನಗರದಲ್ಲಿ ನಡೆದ ದಾಳಿಗೆ ಬಲಿಯಾಗಿದ್ದಾರೆ ಎಂದು ಇಸ್ರೇಲ್ ಅಧಿಕಾರಿಯೊಬ್ಬರು ತಿಳಿಸಿದೆ. ಕಳೆದ ನಾಲ್ಕು ವಾರಗಳಿಂದ ನಡೆಯುತ್ತಿರುವ ಈ ಯುದ್ಧದಲ್ಲಿ ಇದು ಅತ್ಯಂತ ಪ್ರಮುಖ ಬೆಳವಣಿಗೆಯಾಗಿದೆ. ಏತನ್ಮಧ್ಯೆ, ಸೈನಿಕರಿಗೆ ಬೆಂಬಲ ನೀಡುವ ಸಿಬ್ಬಂದಿ ವಿಭಾಗದ ನೇಮಕಾತಿಯ ವಯಸ್ಸನ್ನು 12ಕ್ಕೆ ಇಳಿಸಿರುವ ಇರಾನ್, ಮಕ್ಕಳನ್ನು ಸಹ ಯುದ್ಧದಲ್ಲಿ ಬಳಕೆ ಮಾಡಿಕೊಳ್ಳಲು ಮುಂದಾಗಿದೆ ಎಂಬ ಆತಂಕಕಾರಿ ಸಂಗತಿ ವರದಿಯಾಗಿದೆ.

ಆದರೆ ಇರಾನ್ ಸರ್ಕಾರ ಮಾತ್ರ ಈ ವಿಚಾರವನ್ನು ದೃಢಪಡಿಸಿಲ್ಲ. ಅತ್ತ ಇಸ್ರೇಲ್ ರಕ್ಷಣಾ ಪಡೆಗಳು ಕೂಡ ಈ ನಿರ್ದಿಷ್ಟ ದಾಳಿಯ ಬಗ್ಗೆ ಅಧಿಕೃತವಾಗಿ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಆದರೆ, ಒಂದು ವೇಳೆ ಇದು ದೃಢಪಟ್ಟರೆ, ಪರ್ಷಿಯನ್ ಕೊಲ್ಲಿಯಲ್ಲಿ ಇರಾನ್‌ನ ನೌಕಾ ಕಾರ್ಯಾಚರಣೆಗಳಿಗೆ ಮತ್ತು ಅದರ ಮಿಲಿಟರಿ ನಾಯಕತ್ವಕ್ಕೆ ಇದು ದೊಡ್ಡ ಹೊಡೆತವಾಗಲಿದೆ. ಜಗತ್ತಿನ ಅತಿ ದೊಡ್ಡ ತೈಲ ಸಾಗಣೆ ಮಾರ್ಗಗಳಲ್ಲಿ ಒಂದಾಗಿರುವ ಹಾರ್ಮುಜ್ ಜಲಸಂಧಿಯನ್ನು ಬಂದ್ ಮಾಡುವ ಮತ್ತು ಜಾಗತಿಕ ತೈಲ ಪೂರೈಕೆಗೆ ಅಡ್ಡಿಪಡಿಸುವ



ಇರಾನ್‌ನ ಕಾರ್ಯಾಚರಣೆಯ ಮೇಲ್ವಿಚಾರಣೆಯನ್ನು ತಂಗ್ಸಿರಿ ಅವರೇ ಮಾಡುತ್ತಿದ್ದರು.




ಫೆಬ್ರವರಿ 28 ರಂದು ಯುಎಸ್ ಮತ್ತು ಇಸ್ರೇಲ್ ಇರಾನ್ ಮೇಲೆ ಸಂಘಟಿತ ಮಿಲಿಟರಿ ದಾಳಿಗಳನ್ನು ಪ್ರಾರಂಭಿಸಿದಾಗ ಯುದ್ಧ ಪ್ರಾರಂಭವಾದಾಗಿನಿಂದ ಹತ್ಯೆಗೀಡಾದ ಹಿರಿಯ ಇರಾನಿನ ಅಧಿಕಾರಿಗಳ ಪಟ್ಟಿಗೆ ಟ್ಯಾಂಗ್ಸಿರಿಯವರ ವರದಿಯಾದ ಸಾವು ಸೇರ್ಪಡೆಯಾಗಿದೆ. ಈ ಸಂಘರ್ಷ ಪ್ರಾರಂಭ ಆಧ ಬಳಿಕ ಇರಾನ್‌ನ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಹತರಾಗಿದ್ದರು. ಆ ಬಳಿಕ ಹಿರಿಯ ರಾಜ ಕಾರಣಿ ಮತ್ತು ಇರಾನ್‌ನ ಭದ್ರತಾ ಮುಖ್ಯಸ್ಥ ಅಲಿ ಲಾರಿಜಾನಿ ಕೊಲ್ಲಲ್ಪಟ್ಟರು. ಬಾಂಬ್ ದಾಳಿಯಲ್ಲಿ ಅವರ ಕುಟುಂಬ ಸದಸ್ಯರು ಸಾವನ್ನಪ್ಪಿದ್ದರು ಎಂದು ವರದಿಯಾಗಿತ್ತು.

ಮಾರ್ಚ್ 23ರ ಮಂಗಳವಾರದಂದು ಡೊನಾಲ್ಡ್ ಟ್ರಂಪ್ ಅವರು 5 ದಿನಗಳ ಕಾಲ ಯುದ್ಧವಿರಾಮ ನೀಡುವುದಾಗಿ ಘೋಷಿಸಿದ್ದರು, ಆದರೆ ದಾಳಿ- ಪ್ರತಿದಾಳಿಗಳು ಮಾತ್ರ ನಿಂತಿಲ್ಲ. ಏತನ್ಮಧ್ಯೆ, ಬುಧವಾರವಷ್ಟೇ ಅಮೆರಿಕ ಮತ್ತು ಇರಾನ್ ಗಳೆರಡೂ ಶಾಂತಿ ಮಾತುಕತೆಗೆ ಷರತ್ತುಗಳ ಮೇಲೆ ಸಿದ್ಧವಾಗಿವೆ. ಅಮೆರಿಕ 15 ಷರತ್ತುಗಳನ್ನು ಮುಂದಿಟ್ಟರೆ, ಇರಾನ್ 7 ಪ್ರತಿಷರತ್ತುಗಳನ್ನು ಮುಂದಿಟ್ಟಿವೆ. ಪಾಕಿಸ್ತಾನ ಅಥವಾ ಟರ್ಕಿ ಮಧ್ಯಸ್ಥಿಕೆಯಲ್ಲಿ ಸಂಧಾನ ನಡೆಯುವ ಸಾಧ್ಯತೆಯಿದೆ ಎಂದೂ ಹೇಳಲಾಗಿತ್ತು. ಏತನ್ಮಧ್ಯೆ, ಅಲಿರೆಜಾ ತಂಗ್ಸಿರಿ ಹತ್ಯೆ ಆಗಿರುವುದು ಮಧ್ಯಪ್ರಾಚ್ಯದಲ್ಲಿ ಈಗಾಗಲೇ ಇರುವ ಯುದ್ಧದ ಭೀತಿಯನ್ನು ಮತ್ತಷ್ಟು ಹೆಚ್ಚಿಸಿದೆ.

### ಸೇನಾ ವಿಭಾಗಗಳಲ್ಲಿ ಮಕ್ಕಳ ನೇಮಕಾತಿ

ಇಷ್ಟೆಲ್ಲಾ ಬೆಳವಣಿಗೆಗಳ ಮಧ್ಯೆ, ಯುದ್ಧದಲ್ಲಿ ಸೈನಿಕರಿಗೆ ಬೆಂಬಲಿಗರಾಗಿ ಭಾಗವಹಿಸುವ ಸಿಬ್ಬಂದಿಯ ಕನಿಷ್ಠ ವಯಸ್ಸನ್ನು 12ಕ್ಕೆ ಇಳಿಸಲಾಗಿದೆ ಎಂದು ಇರಾನ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಟೆಹ್ರಾನ್‌ನಲ್ಲಿ ಗಾರ್ಡ್‌ಗಳ ಸಾಂಸ್ಕೃತಿಕ ಅಧಿಕಾರಿ ಎಂದು ವಿವರಿಸಲಾದ ರಹೀಮ್ ನಡಾಲಿ ಅವರು ಫಾರ್ ಇರಾನ್ ಎಂಬ ಉಪಕ್ರಮದ ಮೂಲಕ ಗಸ್ತು, ಚೆಕ್‌ಪೋಸ್ಟ್‌ಗಳು ಮತ್ತು ಲಾಜಿಸ್ಟಿಕ್ಸ್‌ಗಾಗಿ ಜನರನ್ನು ನೇಮಿಸಿಕೊಳ್ಳುತ್ತಿದೆ. ಇದರಲ್ಲಿ ಕಿರಿಯ ಸ್ವಯಂಸೇವಕರು ಭಾಗಿಯಾಗಲು ಬಯಸುತ್ತಿರುವುದರಿಂದ ನೇಮಕಾತಿಯ ಕನಿಷ್ಠ ವಯಸ್ಸನ್ನು ಇಳಿಸಲಾಗಿದೆ. 12 ಮತ್ತು 13 ವರ್ಷ ವಯಸ್ಸಿನವರು ಈಗ ಅವರು ಬಯಸಿದಲ್ಲಿ ಭಾಗವಹಿಸಬಹುದು ಎಂದು ಮಾಹಿತಿ ನೀಡಿದ್ದಾರೆ.

- ಹಾರ್ಮುಜ್' ಸೂತ್ರಧಾರ ಅಲಿರೆಜಾ ತಂಗ್ಸಿರಿ ಹತ್ಯೆ
- ಐಆರ್ ಜಿಸಿ ನೌಕಾ ವಿಭಾಗದ ಕಮಾಂಡರ್ ಅಲಿರೆಜಾ ತಂಗ್ಸಿರಿ ಹತ್ಯೆ ಎಂದು ಇಸ್ರೇಲ್ ವರದಿ
- ಆದರೆ ಇರಾನ್ ಸರ್ಕಾರ, ಇರಾನ್ ರಕ್ಷಣಾ ಪಡೆಗಳು ಈವರೆಗೂ ಈ ಬಗ್ಗೆ ದೃಢಪಡಿಸಿಲ್ಲ
- ಹಾರ್ಮುಜ್ ಜಲಸಂಧಿ ನಿರ್ಬಂಧ ಹೇರುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಅಲಿರೆಜಾ ತಂಗ್ಸಿರಿ

### ಯಾರು ಈ ಅಲಿರೆಜಾ ತಂಗ್ಸಿರಿ?

ದಕ್ಷಿಣ ಇರಾನ್‌ನ ಬುಶೆಹರ್ ಪ್ರಾಂತ್ಯದಲ್ಲಿ ಜನಿಸಿದ ಅಲಿರೆಜಾ ತಂಗ್ಸಿರಿ ಅವರು 1980ರಲ್ಲಿ ಇರಾನ್ -ಇರಾಕ್ ಯುದ್ಧದ ಸಮಯದಲ್ಲಿ ಐಆರ್‌ಜಿಸಿ ನೌಕಾಪಡೆಗೆ ಸೇರಿದ್ದರು. 2010 ರಿಂದ 2018 ರವರೆಗೆ ಉಪ ಕಮಾಂಡರ್ ಆಗಿ ಸೇವೆ ಸಲ್ಲಿಸಿದ ನಂತರ ಅವರು ನೌಕಾಪಡೆಯ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಂಡಿದ್ದರು. ಇತ್ತೀಚೆಗೆ ಅವರು ಹಾರ್ಮುಜ್ ಜಲಸಂಧಿಯಲ್ಲಿ ಇಸ್ರೇಲ್ ಮತ್ತು ಅಮೆರಿಕದ ವಿರುದ್ಧ ಅತ್ಯಂತ ಆಕ್ರಮಣಕಾರಿ ನಿಲುವನ್ನು ತಳೆದಿದ್ದರು.

---

## ಬಾಂಗ್ಲಾದೇಶದಲ್ಲಿ ನದಿಗೆ ಉರುಳಿಬಿದ್ದ ಬಸ್
## ನೀರು ಪಾಲಾದ 24 ಬಸ್ ಪ್ರಯಾಣಿಕರು

**ಢಾಕಾ:** ಬಾಂಗ್ಲಾದೇಶದಲ್ಲಿ ಸಾರಿಗೆ ದೋಣಿ ಹತ್ತಲು ಪ್ರಯತ್ನಿಸುತ್ತಿದ್ದಾಗ ಬಸ್ ನದಿಗೆ ಉರುಳಿಬಿದ್ದ ಪರಿಣಾಮ ಕನಿಷ್ಠ 24 ಜನರು ಸಾವನ್ನಪ್ಪಿದ್ದು, ಹಲವರು ನಾಪತ್ತೆಯಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ನೈಋತ್ಯ ಜಿಲ್ಲೆಯ ರಾಜ್ಬರಿಯಲ್ಲಿ ದೌಲಾಡಿಯಾ ಟರ್ಮಿನಲ್‌ನಲ್ಲಿ ಬಸ್ ಪದ್ಮಾ ನದಿಗೆ ಬಿದ್ದಾಗ ಈ ಅಪಘಾತ ಸಂಭವಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.ಢಾಕಾಗೆ ತೆರಳುತ್ತಿದ್ದ ಬಸ್‌ನಲ್ಲಿ ಸುಮಾರು 40 ಪ್ರಯಾಣಿಕರಿದ್ದರು, ಅವರಲ್ಲಿ ಹಲವಾರು ಮಕ್ಕಳು ಸೇರಿದ್ದಾರೆ ಎಂದು ಅವರು ಅಂದಾಜಿಸಿದ್ದಾರೆ, ಅವರಲ್ಲಿ ಹೆಚ್ಚಿನವರು ಈದ್ ರಜಾದಿನಗಳ ನಂತರ ರಾಜಧಾನಿಗೆ ಹಿಂತಿರುಗುತ್ತಿದ್ದರು.

ಸ್ಥಳೀಯ ಅಗ್ನಿಶಾಮಕ ದಳದ ಅಧಿಕಾರಿಗಳ ಪ್ರಕಾರ, 24 ಶವಗಳನ್ನು ಹೊರತೆಗೆಯಲಾಗಿದೆ.11 ಮಹಿಳೆಯರು, ಆರು ಪುರುಷರು ಮತ್ತು ಐದು ಮಕ್ಕಳು ಸೇರಿದಂತೆ ಇಪ್ಪತ್ತೆರಡು ಶವಗಳನ್ನು ಬಸ್




ಒಳಗಿನಿಂದ ಹೊರತೆಗೆಯಲಾಗಿದೆ. ಹಮ್ಜಾ ತನ್ನ ಕ್ರೇನ್‌ಗಳೊಂದಿಗೆ ಬಸ್ ಅನ್ನು ಹೊರತೆಗೆದರು, ಎಂದು ಅಗ್ನಿಶಾಮಕ ದಳದ ಅಧಿಕಾರಿ ಸೋಹೆಲ್ ರಾಣಾ ಸ್ಥಳದಲ್ಲಿ ಸುದ್ದಿಗಾರರಿಗೆ ತಿಳಿಸಿದರು. ಅಗ್ನಿಶಾಮಕ ಸೇವೆ ಮತ್ತು ಕರಾವಳಿ ಕಾವಲು ಪಡೆ ಡೈವರ್‌ಗಳು ಮಿಲಿಟರಿ ಮತ್ತು ಪೊಲೀಸ್ ಸಹಾಯದಿಂದ ಕಾಣೆಯಾದ ಜನರಿಗಾಗಿ ಹುಡುಕಾಟವನ್ನು ಮುಂದುವರೆಸಿದರು ಎಂದು ರಾಣಾ ಹೇಳಿದರು. ರಾಜ್‌ಬರಿ ಜಿಲ್ಲಾ ಆಡಳಿತ ಅಧಿಕಾರಿಗಳ ಪ್ರಕಾರ, ಪ್ರಧಾನಿ ತಾರಿಕ್ ರೆಹಮಾನ್ ರಕ್ಷಣಾ ಅಭಿಯಾನದ ಕುರಿತು ನವೀಕರಣಗಳಿಗಾಗಿ ಅವರನ್ನು ಕರೆದು ಅಪಘಾತದ ಬಗ್ಗೆ ತನಿಖೆಗೆ ಆದೇಶಿಸಿದರು.

ಪೊಲೀಸರು ಮತ್ತು ಪ್ರತ್ಯಕ್ಷದರ್ಶಿಗಳು ಈ ಹಿಂದೆ ಸುಮಾರು 11 ಪ್ರಯಾಣಿಕರು ಈಜುವಲ್ಲಿ ಯಶಸ್ವಿಯಾಗಿದ್ದಾರೆ ಅಥವಾ ರಕ್ಷಿಸಲ್ಪಟ್ಟಿದ್ದಾರೆ ಎಂದು ಹೇಳಿದರು, ಆದರೆ ಹೆಚ್ಚಿನವರು ನಾಪತ್ತೆಯಾಗಿದ್ದಾರೆ ಎಂದು ಹೇಳಿದರು. ಬಸ್ ಪಾಂಟೂನ್‌ನಿಂದ ದೋಣಿಯ ಕಡೆಗೆ ಹೋಗುತ್ತಿದ್ದಾಗ, ಮತ್ತೊಂದು ಸಣ್ಣ ಯುಟಿಲಿಟಿ ದೋಣಿ ಪಾಂಟೂನ್‌ಗೆ ಡಿಕ್ಕಿ ಹೊಡೆದಿದೆ. ಬಸ್ ಚಾಲಕ ಸ್ಟೀರಿಂಗ್ ನಿಯಂತ್ರಣ ಕಳೆದುಕೊಂಡ ಕಾರಣ ಅದು ನದಿಗೆ ಬಿದ್ದಿತು ಎಂದು ಟರ್ಮಿನಲ್‌ನ ಮೇಲ್ವಿಚಾರಕ ಮೋನಿರ್ ಹೊಸೈನ್ ಹೇಳಿದರು.ನಮ್ಮ ಕಣ್ಣೆದುರೇ ಬಸ್ ನದಿಗೆ ಬಿದ್ದಿತು, ಆದರೆ ನಾವು ಏನೂ ಮಾಡಲು ಸಾಧ್ಯವಾಗಲಿಲ್ಲ ಎಂದು ಅವರು ಹೇಳಿದರು.

## ನನ್ನನ್ನೇ ಸುಪ್ರೀಂ ಲೀಡರ್ ಮಾಡಲು ಮುಂದಾಗಿದ್ದರು

**ವಾಷಿಂಗ್ಟನ್:** ಇರಾನ್ ನಮ ಮುಂದೆ ಮಂಡಿಯೂರಿದೆ ಆದರೆ ಬಹಿರಂಗವಾಗಿ ಹೇಳಿಕೊಳ್ಳುತ್ತಿಲ್ಲ. ಅವರಿಗೆ ಜೀವ ಭಯ ಕಾಡುತ್ತಿದೆ. ಅವರ ಸುಪ್ರೀಂ ನಾಯಕ ನಾನೇ ಆಗಬೇಕೆಂದು ಅವರು ಬಯಸಿದ್ದರು ಅದಕ್ಕೆ ನಾನೆ ಒಪ್ಪಲಿಲ್ಲ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬಡಾಯಿ ಕೊಚ್ಚಿ ಕೊಂಡಿದ್ದಾರೆ. ಅಮೆರಿಕದಲ್ಲಿ ರಿಪಬ್ಲಿಕನ್ ನಿಧಿ ಸಂಗ್ರಹಣೆಯಲ್ಲಿ ಮಾತನಾಡಿದ ಅವರು, ಇರಾನ್ ನಮ್ಮ ಜೊತೆ ಮಾತುಕತೆ ನಡೆಸುತ್ತಿದೆ. ಆದರೆ ಅದನ್ನು ಬಹಿರಂಗವಾಗಿ ಒಪ್ಪಿಕೊಳ್ಳಲು ಹೆದರುತ್ತಿದೆ. ಅವರು ಒಪ್ಪಂದವನ್ನು ಮಾಡಿ ಕೊಳ್ಳಲು ಕಾತುರರಾಗಿದ್ದಾರೆ. ಒಂದು ವೇಳೆ ಆ ವಿಚಾರವನ್ನು ಬಹಿರಂಗವಾಗಿ ಒಪ್ಪಿಕೊಂಡರೆ ತಮ್ಮದೇ ಜನರು ತಮ್ಮನ್ನು ಸಾಯಿಸುತ್ತಾರೆ ಎಂಬ ಭಯ ಇರಾನ್ ನಾಯಕರನ್ನು ಕಾಡುತ್ತಿದೆ. ಹೀಗಾಗಿಯೇ ಅವರು ಒಪ್ಪಂದಕ್ಕೆ ಸಿದ್ಧವಿಲ್ಲ ಎಂಬ ಹೇಳಿಕೆ ನೀಡುತ್ತಿದ್ದಾರೆ ಎಂದು ಹೇಳಿದ್ದಾರೆ.

ಇರಾನ್ ಮಾತ್ರ ಅಮೆರಿಕ ತನ್ನ ಜೊತೆ ಯಾವುದೇ ರೀತಿಯ ಕದನವಿರಾಮದ ಮಾತುಕತೆ ನಡೆಸಿಲ್ಲ, ನಾವು ಅದಕ್ಕೆ ಒಪ್ಪುವುದೂ ಇಲ್ಲ. ಕದನವಿರಾಮದ ದಿನದ ಬಗ್ಗೆ ಹಾಗೂ ಷರತ್ತುಗಳ ಬಗ್ಗೆ ಟ್ರಂಪ್ ನಿರ್ಧಾರ ಮಾಡಲು ನಾವು ಬಿಡುವುದಿಲ್ಲ ಎಂದು ಹೇಳಿಕೆ ನೀಡಿದೆ. ಇದರ ಜೊತೆಗೆ ಟ್ರಂಪ್ ಇನ್ನೊಂದು ಶಾಕಿಂಗ್ ಹೇಳಿಕೆಯನ್ನೂ ನೀಡಿದ್ದಾರೆ. ನಾವು ನಿಮ್ಮನ್ನು ಇರಾನ್‌ನ ಮುಂದಿನ ಸುಪ್ರೀಂ ಲೀಡರ್ ಮಾಡಲು ಬಯಸುತ್ತೇವೆ ಎಂದು ಇರಾನ್ ನಾಯಕರು ಹೇಳಿದ್ದರು. ಆದರೆ, ನಾನು ನೋ, ಥ್ಯಾಂಕ್ಸ್. ನನಗೆ ಅದು ಬೇಡ ಎಂದು ಹೇಳಿದ್ದೆ ಎಂದಿದ್ದಾರೆ. ಕಳೆದ ತಿಂಗಳು ಅಲಿ ಖಮೇನಿ ಹತ್ಯೆಯ ನಂತರ ಇರಾನ್ ನಾಯಕತ್ವದಲ್ಲಿನ ಅನಿಶ್ಚಿತತೆಯ ಮಧ್ಯೆ ಈ ಹೇಳಿಕೆಗಳು ಬಂದಿವೆ. ಅವರ ಮಗ ಮೊಜ್ತಾಬಾ ಖಮೇನಿ ಅವರನ್ನು ಸುಪ್ರೀಂ ಲೀಡರ್ ಆಗಿ ಬಡ್ತಿ ನೀಡಲಾಗಿದೆ. ಯುದ್ಧ ಪ್ರಾರಂಭವಾದಾಗಿನಿಂದ ಸಾರ್ವಜನಿಕವಾಗಿ ಅವರು ಎಲ್ಲೂ ಕಾಣಿಸಿಕೊಂಡಿಲ್ಲ.




## ಮದ್ಯಪಾನ ಮಾಡಿ ಈಜಲು ತೆರಳಿದ್ದೇ ಗಾಯಕ ಜುಬೀನ್ ಗಾರ್ಗ್ ಸಾವಿಗೆ ಕಾರಣ: ಸಿಂಗಾಪುರ ಕೋರ್ಟ್

**ಸಿಂಗಾಪುರ:** ಮದ್ಯಪಾನ ಮಾಡಿ, ಲೈಫ್ ಜಾಕೆಟ್ ಧರಿಸದೇ ಈಜಲು ತೆರಳಿದ್ದೇ ಖ್ಯಾತ ಅಸ್ಸಾಮಿ ಗಾಯಕ ಜುಬೀನ್ ಗಾರ್ಗ್ ಸಾವಿಗೆ ಕಾರಣ ಎಂದು ಸಿಂಗಾಪುರ ಕೋರ್ಟ್ ಹೇಳಿದೆ. ಈ ಮೂಲಕ ಹಲವು ತಿಂಗಳುಗಳಿಂದ ಚರ್ಚೆಯಲ್ಲಿದ್ದ ವದಂತಿಗಳಿಗೆ ಕೋರ್ಟ್ ಬ್ರೇಕ್ ಹಾಕಿದೆ.

ಸಿಂಗಾಪುರ ಪೊಲೀಸ್ ಕೋಸ್ಟ್ ಗಾರ್ಡ್ ನಡೆಸಿದ ತನಿಖೆಯ ಬಳಿಕ ಈ ಸಾವು ದುರದೃಷ್ಟಕರ ಮುಳುಗುವಿಕೆ ಎಂದು ತೀರ್ಮಾನಿಸಲಾಗಿದೆ ಎಂದು ವರದಿಯಾಗಿದೆ. 2025ರ ಸೆಪ್ಟೆಂಬರ್‌ನಲ್ಲಿ ಜುಬೀನ್ ಗಾರ್ಗ್ ಅವರು ಈಶಾನ್ಯ ಭಾರತ ಉತ್ಸವದಲ್ಲಿ ಭಾಗವಹಿಸಲು ಸಿಂಗಾಪುರಕ್ಕೆ ತೆರಳಿದ್ದರು.

ಸೆ.19ರಂದು ತಮ್ಮ ನಿಗದಿತ ಪ್ರದರ್ಶನಕ್ಕೆ ಒಂದು ದಿನ ಮೊದಲು ಸಾವನ್ನಪ್ಪಿದ್ದರು. ಗಾರ್ಗ್ ಬೋಟ್‌ನಲ್ಲಿ ಲಾಜರಸ್ ದ್ವೀಪಕ್ಕೆ ವಿಹಾರಕ್ಕೆ ತೆರಳಿದ್ದರು. ಈ ವೇಳೆ ಅವರು ಮದ್ಯ ಸೇವಿಸಿದ್ದರು. ನಂತರ ಬೋಟ್‌ನಿಂದ ನೀರಿಗಿಳಿದು ಈಜುವಾಗ ಲೈಫ್ ಜಾಕೆಟ್ ಧರಿಸಿದ್ದರು. ನಂತರ ಅವರು ದ್ವೀಪದ ಕಡೆಗೆ ಈಜುವಾಗ ಲೈಫ್ ಜಾಕೆಟ್ ಧರಿಸಲು ನಿರಾಕರಿಸಿದ್ದರು ಎಂದು ಸಾಕ್ಷಿದಾರರು ನ್ಯಾಯಾಲಯಕ್ಕೆ ತಿಳಿಸಿದ್ದಾರೆ. ಸ್ನೇಹಿತರು ದೋಣಿಗೆ ಹಿಂತಿರುಗಲು ಪದೇ ಪದೇ ವಿನಂತಿಸಿದ್ದರು. ದುರದೃಷ್ಟವಶಾತ್ ಅವರು ಸಾವನ್ನಪ್ಪಿದರು ಎಂದು ವರದಿಯಾಗಿದೆ. ನ್ಯಾಯಾಲಯದಲ್ಲಿ ವಿಚಾರಣೆ ಸಮಯದಲ್ಲಿ ವಿಷಶಾಸ್ತ್ರ ವರದಿಯ ಪ್ರಕಾರ 100 ಮಿಲಿಗೆ 333 ಮಿಗ್ರಾಂ ರಕ್ತ ಆಲ್ಕೋಹಾಲ್ ಸಾಂದ್ರತೆಯನ್ನು ಬಹಿರಂಗಪಡಿಸಿದೆ.

ಇದು ಈಜಲು ತೆರಳುವಾಗ ಆಲ್ಕೋಹಾಲ್ ಸೇವನೆಯನ್ನು ಸೂಚಿಸುತ್ತದೆ. ಈ ಮೂಲಕ ಅವರ ಸಾವಿನ ಹಿಂದಿನ ಪಿತೂರಿ ಅನುಮಾನವನ್ನು ನ್ಯಾಯಾಲಯ ತಳ್ಳಿ ಹಾಕಿದೆ.



## ಹೋಟೆಲ್-ರೆಸ್ಟೋರೆಂಟ್‌ಗಳಲ್ಲಿ ಎಲ್‌ಪಿಜಿ ಶುಲ್ಕ ವಸೂಲಿಗೆ ಕೇಂದ್ರ ಸರ್ಕಾರ ಬ್ರೇಕ್

**ನವದೆಹಲಿ:** ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ಕೊರತೆ ಹಿನ್ನೆಲೆಯಲ್ಲಿ ಹೋಟೆಲ್-ರೆಸ್ಟೋರೆಂಟ್‌ಗಳಲ್ಲಿ ಆಹಾರದ ಬೆಲೆಯ ಹೊರತಾಗಿ ಯಾವುದೇ ಎಲ್‌ಪಿಜಿ ಶುಲ್ಕ, ಗ್ಯಾಸ್ ಸರ್ ಚಾರ್ಜ್ ಅಥವಾ ಇಂಧನ ವೆಚ್ಚ ಎಂಬ ಹೆಸರಿನಲ್ಲಿ ಹೆಚ್ಚುವರಿ ಹಣ ವಸೂಲಿ ಮಾಡುವುದಕ್ಕೆ ಕೇಂದ್ರ ಸರ್ಕಾರ ಬ್ರೇಕ್ ಹಾಕಿದೆ. ಈ ಕುರಿತು ಕೇಂದ್ರ ಗ್ರಾಹಕ ಸಂರಕ್ಷಣಾ ಪ್ರಾಧಿಕಾರ ಕಟ್ಟುನಿಟ್ಟಿನ ಮಾರ್ಗಸೂಚಿಯನ್ನು ಹೊರಡಿಸಿದೆ. ಇತ್ತೀಚಿನ ದಿನಗಳಲ್ಲಿ ವಾಣಿಜ್ಯ ಬಳಕೆಯ ಗ್ಯಾಸ್ ಸಿಲಿಂಡರ್ ಬೆಲೆ ಏರಿಕೆಯ ನೆಪವೊಡ್ಡಿ, ಕೆಲವು ಪ್ರತಿಷ್ಠಿತ ಹೋಟೆಲ್‌ಗಳು ಗ್ರಾಹಕರ ಬಿಲ್‌ನಲ್ಲಿ ಪ್ರತ್ಯೇಕವಾಗಿ ಗ್ಯಾಸ್ ಚಾರ್ಜ್ ಹೆಸರಿನಲ್ಲಿ 20ರಿಂದ 50 ರೂ.ಗಳವರೆಗೆ ಹೆಚ್ಚುವರಿ ಶುಲ್ಕ ವಿಧಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿತ್ತು.ಇದನ್ನು ಅಪ್ರಾಮಾಣಿಕ ವ್ಯಾಪಾರ ಪದ್ಧತಿ ಎಂದು ಸರ್ಕಾರ ಪರಿಗಣಿಸಿದೆ.

ವಾಣಿಜ್ಯ ಸಿಲಿಂಡರ್ ಪೂರೈಕೆಯಲ್ಲಿನ ವ್ಯತ್ಯಯದಿಂದ ಹೋಟೆಲ್ ಮಾಲೀಕರು ಸಂಕಷ್ಟಕ್ಕೆ ಸಿಲುಕಿದ್ದರು. ಆದರೆ ಈ ಹೊರೆಯನ್ನು ಗ್ರಾಹಕರ ಮೇಲೆ ನೇರವಾಗಿ ಗ್ಯಾಸ್ ಶುಲ್ಕ ಎಂಬ ಹೆಸರಿನಲ್ಲಿ ಹಾಕುವುದು ಗ್ರಾಹಕ ಸಂರಕ್ಷಣಾ ಕಾಯ್ದೆ 2019ರ ಉಲ್ಲಂಘನೆಯಾಗುತ್ತದೆ ಎಂದು ಪ್ರಾಧಿಕಾರ



ಎಚ್ಚರಿಸಿದೆ. ಹೀಗಾಗಿ ಬಿಲ್‌ನಲ್ಲಿ ಅಡುಗೆ ಅನಿಲದ ಹೆಸರಿನಲ್ಲಿ ಯಾವುದೇ ಗುಪ್ತ ಅಥವಾ ಹೆಚ್ಚುವರಿ ಶುಲ್ಕವನ್ನು ಸೇರಿಸುವಂತಿಲ್ಲ. ಹೋಟೆಲ್‌ನ ಮೆನು ಕಾರ್ಡ್‌ನಲ್ಲಿ ನಮೂದಿಸಿರುವ ದರದಲ್ಲೇ ಗ್ಯಾಸ್, ವಿದ್ಯುತ್ ಮತ್ತು ನೀರಿನಂತಹ ಎಲ್ಲಾ ನಿರ್ವಹಣಾ ವೆಚ್ಚಗಳು ಸೇರಿರಬೇಕು. ಮೆನು ದರದ ಮೇಲೆ ಕೇವಲ ಸರ್ಕಾರ ನಿಗದಿಪಡಿಸಿದ ಜಿಎಸ್‌ಟಿ ಮಾತ್ರ ವಿಧಿಸಲು ಅವಕಾಶವಿದೆ. ಯಾವುದೇ ಹೆಚ್ಚುವರಿ ಶುಲ್ಕವನ್ನು ಗ್ರಾಹಕರ ಅನುಮತಿಯಿಲ್ಲದೆ ಬಿಲ್‌ನಲ್ಲಿ ಸೇರಿಸುವುದು ಕಾನೂನುಬಾಹಿರ ಎಂದಿದೆ. ಗ್ರಾಹಕ ಹಿತರಕ್ಷಣಾ ಕಾಯ್ದೆ 2019ರಡಿ ಸ್ಥಾಪಿತವಾಗಿರುವ ಕೇಂದ್ರ ಗ್ರಾಹಕ ಸಂರಕ್ಷಣಾ ಪ್ರಾಧಿಕಾರವು ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳು ವಿಧಿಸುತ್ತಿರುವ ಹೆಚ್ಚುವರಿ ಗ್ಯಾಸ್ ಶುಲ್ಕಗಳ ವಿರುದ್ಧ ಅಧಿಕೃತ ಆದೇಶ ಹೊರಡಿಸಿದೆ.

### ಗ್ರಾಹಕರು ಏನು ಮಾಡಬೇಕು?

ಗ್ರಾಹಕರು ಬಿಲ್ ಪಾವತಿಸುವ ಮೊದಲು ಅದರಲ್ಲಿ ಯಾವುದೇ ಹೆಚ್ಚುವರಿ ಗ್ಯಾಸ್ ಶುಲ್ಕ ಇದೆಯೇ ಎಂದು ಖಚಿತಪಡಿಸಿಕೊಳ್ಳಬೇಕು. ಒಂದು ವೇಳೆ ನೀವು ಹೋಟೆಲ್‌ಗೆ ಹೋದಾಗ ಬಿಲ್‌ನಲ್ಲಿ ಇಂತಹ ಶುಲ್ಕಗಳನ್ನು ಕಂಡರೆ ತಕ್ಷಣವೇ ಹೋಟೆಲ್ ಮ್ಯಾನೇಜರ್ ಗಮನಕ್ಕೆ ತಂದು ಆ ಶುಲ್ಕವನ್ನು ತೆಗೆದುಹಾಕಲು ಸೂಚಿಸಿ. ಹೋಟೆಲ್‌ನವರು ಶುಲ್ಕ ರದ್ದುಪಡಿಸಲು ನಿರಾಕರಿಸಿದರೆ ರಾಷ್ಟ್ರೀಯ ಗ್ರಾಹಕ ಸಹಾಯವಾಣಿ ಸಂಖ್ಯೆ 1915ಕ್ಕೆ ಕರೆ ಮಾಡಿ ದೂರು ನೀಡಬಹುದು. ಇ-ಜಾಗೃತಿ ಪೋರ್ಟಲ್ ಅಥವಾ ಎನ್‌ಸಿಎಚ್ ಮೊಬೈಲ್ ಆಪ್ ಮೂಲಕ ಮನೆಯಲ್ಲೇ ಕುಳಿತು ದೂರು ದಾಖಲಿಸಬಹುದು ಎಂದು ಹೇಳಿದೆ.

## ರಷ್ಯಾದ 10 ಲಕ್ಷ ಬ್ಯಾರಲ್ ಕಚ್ಚಾ ತೈಲ ಹೊತ್ತೊಯ್ಯುತ್ತಿದ್ದ ಟರ್ಕಿ ಚಾಲಿತ ಟ್ಯಾಂಕರ್ ಮೇಲೆ ದಾಳಿ

**ಅಂಕಾರ:** ಇಸ್ತಾನ್‌ಬುಲ್ ಬಳಿಯ ಕಪ್ಪು ಸಮುದ್ರದಲ್ಲಿ ಟರ್ಕಿ ನಿರ್ವಹಿಸುತ್ತಿದ್ದ ಕಚ್ಚಾ ತೈಲ ಟ್ಯಾಂಕರ್ ಹಡಗಿನ ಮೇಲೆ ದಾಳಿ ನಡೆದಿದೆ. ಕಪ್ಪು ಸಮುದ್ರವನ್ನು ಮರ್ಮರ ಸಮುದ್ರ (ದ್ವೀಪ ಸಮುದ್ರ) ಮತ್ತು ಮೆಡಿಟರೇನಿಯನ್‌ನೊಂದಿಗೆ ಸಂಪರ್ಕಿಸುವ ಪ್ರಮುಖ ಜಲಮಾರ್ಗವಾದ ಬಾಸ್ಪರಸ್‌ನಿಂದ ಸುಮಾರು 33 ಕಿಮೀ ದೂರದಲ್ಲಿ ದಾಳಿ ನಡೆದಿದೆ.

ಸಿಯೆರಾ ಲಿಯೋನ್ ಧ್ವಜ ಹೊತ್ತ ಟ್ಯಾಂಕರ್ ರಷ್ಯಾದ ಕಚ್ಚಾ ತೈಲ ಸಾಗಿಸುತ್ತಿತ್ತು. ಸುಮಾರು 10 ಲಕ್ಷ ಬ್ಯಾರಲ್‌ಗಳನ್ನ ಹಡಗಿನಲ್ಲಿ ಲೋಡ್ ಮಾಡಲಾಗಿತ್ತು. ರಷ್ಯಾದ ತೈಲ ತುಂಬಿದ ಟ್ಯಾಂಕರ್ ನೊವೊರೊಸಿಸ್ಕ್‌ಗೆ ಹೊರಟಿತ್ತು. ಈ ವೇಳೆ ಟರ್ಕಿಯ ಪ್ರಾದೇಶಿಕ ಸಮುದ್ರ ಗಡಿಯಿಂದ ಹೊರಗೆ ದಾಳಿ ನಡೆದಿದೆ.




ಈ ಕುರಿತು ಮಾಹಿತಿ ಹಂಚಿಕೊಂಡಿರುವ ಟರ್ಕಿಯ ಸಾರಿಗೆ ಸಚಿವ ಅಬ್ದುಲ್ಕದಿರ್ ಉರಾಲೋಗ್ಲು, ಟರ್ಕಿ ನಿರ್ವಹಿಸಲ್ಪಡುತ್ತಿದ್ದ ವಿದೇಶಿ ಧ್ವಜವಿದ್ದ ಹಡಗು ರಷ್ಯಾದ ಕಚ್ಚಾ ತೈಲ ಹೊತ್ತು ಹೊರಟಿತ್ತು. ಆದ್ರೆ ಬುಧವಾರ ಮಧ್ಯರಾತ್ರಿ ಸುಮಾರಿಗೆ ಇಂಜಿನ್ ಕೊಠಡಿಯಲ್ಲಿ ಭಾರೀ ಸ್ಫೋಟ ಸಂಭವಿಸಿದೆ. ಸ್ಫೋಟ ಸಂಭವಿಸಿದ ಬಳಿಕ ತುರ್ತು ಕೇಂದ್ರಕ್ಕೆ ವರದಿ ಮಾಡಲಾಗಿತ್ತು.

ಪರಿಶೀಲನೆ ನಡೆಸಿದಾಗ ಇಂಜಿನ್ ಕೋಣೆಯನ್ನ ನಿರ್ದಿಷ್ಟವಾಗಿ ಗುರಿಯಾಗಿಸಿ ದಾಳಿ ನಡೆಸಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಇದು ಡ್ರೋನ್ ಮೂಲಕ ದಾಳಿ ನಡೆಸಿಲ್ಲ, ಸಮುದ್ರದಾಳದಿಂದ, ಮಾನವರಹಿತ ವಾಹನದಿಂದ ದಾಳಿ ನಡೆಸಲಾಗಿದೆ ಎಂದು ತಿಳಿಸಿದ್ದಾರೆ.

ಘಟನೆ ಸಮಯದಲ್ಲಿ 27 ಟರ್ಕಿ ಸಿಬ್ಬಂದಿ ಹಡಗಿನಲ್ಲಿದ್ದು, ಎಲ್ಲರೂ ಸುರಕ್ಷಿತವಾಗಿದ್ದಾರೆ. ಮಾಹಿತಿ ತಿಳಿದ ಕೂಡಲೇ ಟರ್ಕಿ ಸರ್ಕಾರವು ಸ್ಥಳಕ್ಕೆ ರಕ್ಷಣಾ ತಂಡಗಳನ್ನ ಕಳುಹಿಸಿದ್ದು, ಪರಿಸ್ಥಿತಿಯನ್ನ ಸೂಕ್ಷ್ಮವಾಗಿ ಗಮನಿಸುತ್ತಿದೆ.

## ಮಿನಿ ನ್ಯೂಸ್

### ಕಾಣೆಯಾಗಿದ್ದ 8 ವರ್ಷದ ಬಾಲಕಿ ಹಿಟ್ಟಿನ ಡಬ್ಬಿಯಲ್ಲಿ ಶವವಾಗಿ ಪತ್ತೆ

**ಆಗ್ರಾ:** ಕಳೆದ ಮೂರು ದಿನದ ಹಿಂದೆ ಕಾಣೆಯಾಗಿದ್ದ 8ವರ್ಷದ ಬಾಲಕಿಯ ಶವವು ಕೋಣೆಯೊಂದರ ಹಿಟ್ಟಿನ ಡಬ್ಬಿಯೊಳಗೆ ಪತ್ತೆಯಾಗಿರುವ ಘಟನೆ ಆಗ್ರಾ ಜಿಲ್ಲೆಯ ತಾಜ್‌ಗಂಜ್ ಪ್ರದೇಶದ ಸಿದ್ಧಾಂತ್ ನಗರದಲ್ಲಿ ನಡೆದಿದೆ. ಬಾಲಕಿ ಮಾ.24ರಂದು ಸಂಜೆ ಸುಮಾರು 4 ಗಂಟೆ ಸುಮಾರಿನಲ್ಲಿ ಕಾಣೆಯಾಗಿದ್ದಳು. ಕುಟುಂಬದವರು ಪೊಲೀಸರಿಗೆ ಮಾಹಿತಿ ನೀಡಿದ ಬಳಿಕ ವ್ಯಾಪಕ ಶೋಧ ಕಾರ್ಯಾಚರಣೆ ಆರಂಭಿಸಲಾಯಿತು.

ಮಗುವನ್ನು ಪತ್ತೆಹಚ್ಚಲು ಎಂಟು ತಂಡಗಳನ್ನು ನಿಯೋಜಿಸಲಾಗಿತ್ತು. ಸುತ್ತಮುತ್ತಲಿನ ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಿದಾಗ ಅದೇ ಪ್ರದೇಶದಲ್ಲಿ ಅವರ ಮನೆಯ ಬಳಿ ಬಾಲಕಿ ಕಂಡುಬಂದರೂ, ನಂತರದ ಯಾವುದೇ ದೃಶ್ಯಗಳಲ್ಲಿ ಕಂಡುಬಂದಿಲ್ಲ ಎಂದು ನಗರ ಉಪ ಪೊಲೀಸ್ ಆಯುಕ್ತ ಅಲಿ ಅಬ್ಬಾಸ್ ತಿಳಿಸಿದ್ದಾರೆ. ಶಂಕೆ ಆಧರಿಸಿ, ಅದೇ ಮನೆಯಲ್ಲಿ ವಾಸಿಸುತ್ತಿದ್ದ ಸುನೀಲ್ ಎಂಬ ವ್ಯಕ್ತಿ ಬಾಡಿಗೆಗೆ ಪಡೆದಿದ್ದ ಕೋಣೆಯ ಬಾಗಿಲು ಮುರಿದು ಪೊಲೀಸರು ಶೋಧ ನಡೆಸಿದರು. ಈ ವೇಳೆ ಕೋಣೆಯೊಳಗಿನ ಹಿಟ್ಟಿನ ಡಬ್ಬಿಯಲ್ಲಿ ಬಾಲಕಿಯ ಶವ ಪತ್ತೆಯಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

### ಪಾಕ್ ಮತ್ತು ಬಾಂಗ್ಲಾದ ಎಲ್‌ಇಟಿ ಉಗ್ರರಿಗಾಗಿ ಕಣಿವೆಯಲ್ಲಿ ಶೋಧ

**ಶ್ರೀನಗರ:** ಪಾಕಿಸ್ತಾನ ಮತ್ತು ಬಾಂಗ್ಲಾದೇಶದ ಲಷ್ಕರ್-ಎ-ತೈಬಾ (ಎಲ್‌ಇಟಿ) ನಿರ್ವಹಿಸುವ ಅಂತರರಾಷ್ಟ್ರೀಯ ಭಯೋತ್ಪಾದನಾ ಘಟಕದ ತನಿಖೆಯ ಭಾಗವಾಗಿ ಜಮ್ಮು ಮತ್ತು ಕಾಶ್ಮೀರ ಪೊಲೀಸರ ಕೌಂಟರ್ ಇಂಟೆಲಿಜೆನ್ಸ್ ವಿಂಗ್ ಗುರುವಾರ ಕಣಿವೆಯ ಅನೇಕ ಸ್ಥಳಗಳಲ್ಲಿ ದಾಳಿ ನಡೆಸಿದೆ. ಕೌಂಟರ್ ಇಂಟೆಲಿಜೆನ್ಸ್ ಕಾಶ್ಮೀರ (ಸಿಐಕೆ) ಕಣಿವೆಯ ಮೂರು ಜಿಲ್ಲೆಗಳ 10 ಸ್ಥಳಗಳಲ್ಲಿ ದಾಳಿ ನಡೆಸಲಾಗಿದೆ. ಶ್ರೀನಗರ, ಶೋಪಿಯಾನ್ ಮತ್ತು ಗಂಡರ್ಬಲ್ ಜಿಲ್ಲೆಗಳಲ್ಲಿ ದಾಳಿಗಳು ನಡೆಯುತ್ತಿವೆ ಎಂದು ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ. ಸಿಐಕೆ ಪೊಲೀಸ್ ಠಾಣೆಯಲ್ಲಿ ಇತ್ತೀಚೆಗೆ ದಾಖಲಾಗಿರುವ ಹೊಸ ಭಯೋತ್ಪಾದನಾ ತನಿಖಾ ಪ್ರಕರಣದಲ್ಲಿ ನ್ಯಾಯಾಲಯವು ಹೊರಡಿಸಿದ ಶೋಧ ವಾರಂಟ್‌ನಿಂದ ಶೋಧಗಳು ಬೆಂಬಲಿತವಾಗಿವೆ ಎಂದು ಅವರು ಹೇಳಿದರು.

### ಅಂಬೇಡ್ಕರ್ ಪ್ರತಿಮೆ ಹಾನಿ: ಕೈ ಕತ್ತರಿಸಿದವರಿಗೆ ಬಹುಮಾನ ಘೋಷಿಸಿದ್ದ ವ್ಯಕ್ತಿ ಬಂಧನ

**ಮೀರತ್:** ಡಾ. ಬಿ. ಆರ್. ಅಂಬೇಡ್ಕರ್ ಅವರ ಪ್ರತಿಮೆಯನ್ನು ಧ್ವಂಸಗೊಳಿಸಿದ ವ್ಯಕ್ತಿಯ ಕೈ ಕತ್ತರಿಸಿದವರಿಗೆ ಬಹುಮಾನ ನೀಡುವ ಪ್ರಚೋದನಕಾರಿ ಹೇಳಿಕೆ ನೀಡಿದ ಆರೋಪದ ಮೇಲೆ ವ್ಯಕ್ತಿಯೊಬ್ಬರ ವಿರುದ್ಧ ಪ್ರಕರಣ ದಾಖಲಿಸಿ ವಶಕ್ಕೆ ಪಡೆಯಲಾಗಿದೆ ಎಂದು ಉತ್ತರ ಪ್ರದೇಶ ಪೊಲೀಸರು ತಿಳಿಸಿದ್ದಾರೆ. ಭಗವಾನ್‌ಪುರ ಗ್ರಾಮದಲ್ಲಿ ಇತ್ತೀಚೆಗೆ ಯಾರೋ ಅಂಬೇಡ್ಕರ್ ಅವರ ಪ್ರತಿಮೆಗೆ ಹಾನಿ ಮಾಡಿದ್ದಾರೆ. ಮಾಹಿತಿ ಪಡೆದ ಪೊಲೀಸರು ಸ್ಥಳಕ್ಕೆ ಧಾವಿಸಿ ಸ್ಥಳೀಯರನ್ನು ಸಮಾಧಾನಪಡಿಸಿದ ನಂತರ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತಂದರು.ಈ ಪ್ರದೇಶದಲ್ಲಿ ಕಾನೂನು ಸುವ್ಯವಸ್ಥೆಯನ್ನು ಪುನಃಸ್ಥಾಪಿಸಲಾಗಿದೆ. ವಿಧ್ವಂಸಕ ಕೃತ್ಯಕ್ಕೆ ಕಾರಣರಾದವರ ಕೈಗಳನ್ನು ಕತ್ತರಿಸಿದವರಿಗೆ 11 ಲಕ್ಷ ರೂ. ಬಹುಮಾನ ನೀಡುವುದಾಗಿ ವ್ಯಕ್ತಿಯೊಬ್ಬರು ಘೋಷಿಸಿದಾಗ ವಿವಾದ ಉಲ್ಬಣಗೊಂಡಿತು ಎಂದು ಪೊಲೀಸರು ತಿಳಿಸಿದ್ದಾರೆ. ಭವನ್‌ಪುರ ಪೊಲೀಸ್ ಠಾಣೆ ವ್ಯಾಪ್ತಿಯ ಅಬ್ದುಲಾಪುರ ನಿವಾಸಿ ಹಸೀನ್ ಯಾಸೀನ್ ಎಂದು ಗುರುತಿಸಲಾದ ಆರೋಪಿಯನ್ನು ಬಂಧಿಸಿ ಸಂಬಂಧಿತ ಕಾನೂನು ನಿಬಂಧನೆಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

### ಬಸ್ ಪಲ್ಟಿ: ಇಬ್ಬರು ಸಾವು

**ನವದೆಹಲಿ:** ಮಧ್ಯ ದೆಹಲಿಯ ಕರೋಲ್ ಬಾಗ್‌ನಲ್ಲಿರುವ ಝುಂಡೆವಾಲನ್ ದೇವಾಲಯದ ಬಳಿ ಇಂದು ಮುಂಜಾನೆ ಬಸ್ ನಿಯಂತ್ರಣ ತಪ್ಪಿ ಪಲ್ಟಿಯಾದ ಪರಿಣಾಮ ಇಬ್ಬರು ಸಾವನ್ನಪ್ಪಿದ್ದಾರೆ ಮತ್ತು 20 ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ಸುಮಾರು 25 ಪ್ರಯಾಣಿಕರೊಂದಿಗೆ ಬಸ್ ರಾಜಸ್ಥಾನದ ಜೈಪುರದಿಂದ ಹೊರಟಿತ್ತು ಎಂದು ಪೊಲೀಸರು ತಿಳಿಸಿದ್ದಾರೆ. ಮುಂಜಾನೆ 1:08 ಕ್ಕೆ ಅಪಘಾತದ ಬಗ್ಗೆ ಮಾಹಿತಿ ಲಭಿಸಿದ ನಂತರ ರಕ್ಷಣಾ ಕಾರ್ಯಾಚರಣೆಗಾಗಿ ಅನೇಕ ತಂಡಗಳನ್ನು ಸ್ಥಳಕ್ಕೆ ರವಾನಿಸಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗಾಯಗೊಂಡ ಪ್ರಯಾಣಿಕರನ್ನು ಪಲ್ಟಿಯಾದ ವಾಹನದಿಂದ ಹೊರತೆಗೆದು ಸರ್ ಗಂಗಾ ರಾಮ್ ಆಸ್ಪತ್ರೆ ಮತ್ತು ರಾಮ್ ಮನೋಹರ್ ಲೋಹಿಯಾ ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು. ಪ್ರಾಥಮಿಕ ತನಿಖೆಯಲ್ಲಿ ಚಾಲಕನು ವಾಹನದ ನಿಯಂತ್ರಣವನ್ನು ಕಳೆದುಕೊಂಡಿರಬಹುದು, ಇದು ಬಸ್ ಪಲ್ಟಿಯಾಗಲು ಕಾರಣವಾಗಿದೆ ಎಂದು ಸೂಚಿಸಿದೆ. ಆದರೂ ಅಪಘಾತಕ್ಕೆ ನಿಖರವಾದ ಕಾರಣ ಇನ್ನೂ ತಿಳಿದುಬಂದಿಲ್ಲ.

ಅಪಘಾತಕ್ಕೆ ಕಾರಣವಾದ ಘಟನೆಗಳ ಅನುಕ್ರಮವನ್ನು ನಿರ್ಧರಿಸಲು ಪೊಲೀಸರು ತನಿಖೆಯನ್ನು ಪ್ರಾರಂಭಿಸಿದ್ದಾರೆ. ಉತ್ತರ ಪ್ರದೇಶದ ಹತ್ರಾಸ್‌ನ ಯಮುನಾ ಎಕ್ಸ್‌ಪ್ರೆಸ್ ವೇಯಲ್ಲಿ ಖಾಸಗಿ ಡಬಲ್ ಡೆಕ್ಕರ್ ಬಸ್ಸೊಂದು ಚಲಿಸುವ ವ್ಯಾನ್ ಗೆ ಡಿಕ್ಕಿ ಹೊಡೆದು ಕನಿಷ್ಠ ಆರು ಜನರು ಸಾವನ್ನಪ್ಪಿದ ವಾರಗಳ ನಂತರ ಈ ಅಪಘಾತ ಸಂಭವಿಸಿದೆ.

---

# ನಾಸಾದ ಐತಿಹಾಸಿಕ 'ಆರ್ಟೆಮಿಸ್-2' ಪಯಣಕ್ಕೆ ಸಿದ್ಧತೆ ಪೂರ್ಣ

### ಉಡಾವಣೆಗೆ ಕೇವಲ ಒಂದು ವಾರ ಮಾತ್ರ ಬಾಕಿ ಇದ್ದು, ಅಮೆರಿಕದ ಫ್ಲೋರಿಡಾದಲ್ಲಿರುವ ಕೆನಡಿ ಸ್ಪೇಸ್ ಸೆಂಟರ್‌ನಲ್ಲಿ ಉಡಾವಣಾ ಸಿದ್ಧತೆಗಳು ಭರ್ಜರಿಯಾಗಿ ನಡೆದಿದೆ

**ವಾಷಿಂಗ್ಟನ್ ಡಿಸಿ:** ಚಂದಮಾಮನ ತೋರಿಸಿ ಕಂದಮ್ಮಗಳಿಗೆ ತುತ್ತುಣಿಸುವ ತಾಯಂದಿರೇ, ಇನ್ನೊಂದು ವಾರದಲ್ಲಿ ಆ ಚಂದ್ರನ ಅಂಗಳದಲ್ಲಿ ಕಾಣಿಸಿಕೊಳ್ಳಲಿರುವ ಮಾನವರತ್ತಲೂ ನಿಮ್ಮ ಮಗು ಗಮನಹರಿಸುವಂತೆ ಮಾಡಿ. ಅರೆ! ನಿರ್ಜೀವ ಚಂದ್ರನಲ್ಲಿ ಮಾನವ ಕಾಣಿಸಿಕೊಳ್ಳಲು ಹೇಗೆ ಸಾಧ್ಯ ಅಂತೀರಾ? ಅಮೆರಿಕದ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ನಾಸಾ ಇದನ್ನು ಸಾಧ್ಯ ಮಾಡಲಿದೆ. ಹೌದು, ನಾಸಾ ತನ್ನ ಐತಿಹಾಸಿಕ ಆರ್ಟೆಮಿಸ್-2 ಚಂದ್ರ ಯೋಜನೆಗೆ ಏಪ್ರಿಲ್ 1ರಂದು ಚಾಲನೆ ನೀಡಲಿದೆ. ಮಾನವರನ್ನು ಚಂದ್ರನ ನೆಲಕ್ಕೆ ಹೊತ್ತೊಯ್ಯಲಿರುವ ಈ ಕಾರ್ಯಾಚರಣೆ, ಆಧುನಿಕ ಮಾನವನ ಬಾಹ್ಯಾಕಾಶ ದಿಗ್ವಿಜಯದ ಹೊಸ ಇತಿಹಾಸವನ್ನು ಸುವರ್ಣಾಕ್ಷರಗಳಲ್ಲಿ ಬರೆಯಲಿದೆ.

ಆರ್ಟೆಮಿಸ್-2 ಮಿಷನ್‌ನಲ್ಲಿ ನಾಲ್ವರು ಗಗನಯಾತ್ರಿಗಳು ಚಂದ್ರನೆಡೆಗೆ ಪ್ರಯಾಣ ಮಾಡಲಿದ್ದಾರೆ. ಬರೋಬ್ಬರಿ ಅರ್ಧ ಶತಮಾನದ ಬಳಿಕ ಮನುಷ್ಯ ಮತ್ತೆ ಚಂದ್ರನ ಅಂಗಳ ತಲುಪಲಿದ್ದು, ಆರ್ಟೆಮಿಸ್-2 ಮಿಷನ್‌ನ ಉಡಾವಣೆಗೆ ದಿನಾಂಕವನ್ನು ನಾಸಾ ಘೋಷಿಸಿದೆ. ಅದರಂತೆ ಉಡಾವಣೆಗೆ ಕೇವಲ ಒಂದು ವಾರ ಮಾತ್ರ ಬಾಕಿ ಇದ್ದು, ಅಮೆರಿಕದ ಫ್ಲೋರಿಡಾದಲ್ಲಿರುವ ಕೆನಡಿ ಸ್ಪೇಸ್ ಸೆಂಟರ್‌ನಲ್ಲಿ ಉಡಾವಣಾ ಸಿದ್ಧತೆಗಳು ಭರ್ಜರಿಯಾಗಿ ನಡೆದಿದೆ. ನಾಸಾದ ಅಪೊಲೊ 11 ಬಾಹ್ಯಾಕಾಶ ಕಾರ್ಯಾಚರಣೆಯು, ಮೊಟ್ಟ ಮೊದಲ ಬಾರಿಗೆ ಚಂದ್ರನ ನೆಲದಲ್ಲಿ ಮಾನವರನ್ನು ಇಳಿಸಿತ್ತು. ಜುಲೈ 16, 1969ರಲ್ಲಿ ಆರಂಭವಾಗಿದ್ದ ಈ ಮಿಷನ್, ಜುಲೈ 24, 1969ರಂದು ಮಾನವರನ್ನು ಚಂದ್ರನಲ್ಲಿ ಇಳಿಸುವ ಮೂಲಕ ಇತಿಹಾಸ ನಿರ್ಮಿಸಿತ್ತು. ಈ ಮಿಷನ್‌ನ ಕಮಾಂಡರ್ ಆಗಿದ್ದ ನೀಲ್ ಆರ್ಮ್‌ಸ್ಟ್ರಾಂಗ್, ಚಂದ್ರನ ಅಂಗಳದಲ್ಲಿ ಕಾಲಿಟ್ಟ ಮೊದಲ ಮಾನವರಾಗಿ ಇತಿಹಾಸ ನಿರ್ಮಿಸಿದ್ದರು. ಅದಾದ ಬಳಿಕ 1972ರಲ್ಲಿ ನಾಸಾ ಅಪೊಲೊ 17 ಹೆಸರಿನ ತನ್ನ ಕೊನೆಯ ಮೂನ್ ಮಿಷನ್ ಪೂರ್ಣಗೊಳಿಸಿತ್ತು. ಈಗ ಬರೋಬ್ಬರಿ 54 ವರ್ಷಗಳ ಬಳಿಕ ಮತ್ತೆ ನಾಸಾ ಚಂದ್ರನೆಡೆಗೆ ತನ್ನ ಗಗನಯಾತ್ರಿಗಳನ್ನು ಕಳುಹಿಸುತ್ತಿದೆ. ನಾಸಾದ ಆರ್ಟೆಮಿಸ್ ಯೋಜನೆಯಲ್ಲಿ ಭಾರತ ಭಾಗಿ ಆಗಿದೆ ಎಂಬುದು ಇಲ್ಲಿ ಉಲ್ಲೇಖನೀಯ.

**ಗಗನಯಾತ್ರಿಗಳು ಯಾರು?:** ಸದ್ಯ ಆರ್ಟೆಮಿಸ್-2 ಬಾಹ್ಯಾಕಾಶ ಕಾರ್ಯಾಚರಣೆಯ ಉಡಾವಣಾ ವಿಂಡೋ ಏಪ್ರಿಲ್ 1, 2026ರಂದು ತೆರೆಯಲಿದ್ದು, ಅಂದಿನ ಹವಾಮಾನ ಪರಿಸ್ಥಿತಿ ಹಾಗೂ ತಾಂತ್ರಿಕ ಸಿದ್ಧತೆಗಳ ಆಧಾರದ ಮೇಲೆ ನಿಖರವಾದ ಉಡಾವಣಾ ಸಮಯ ನಿರ್ಧಾರವಾಗಲಿದೆ. ಈ ಕಾರ್ಯಾಚರಣೆ ಸುಮಾರು 10 ದಿನಗಳ ಕಾಲ ನಡೆಯಲಿದ್ದು, ಅತ್ಯಾಧುನಿಕ ತಂತ್ರಜ್ಞಾನ ಹಾಗೂ ಅಂತಾರಾಷ್ಟ್ರೀಯ ಸಹಕಾರದ ಪ್ರತೀಕವಾಗಿರುವ ಆರ್ಟೆಮಿಸ್-2 ಚಂದ್ರ ಕಾರ್ಯಾಚರಣೆಯಲ್ಲಿ ನಾಲ್ವರು ದಿಟ್ಟ ಗಗನಯಾತ್ರಿಗಳಿದ್ದಾರೆ.

- ಚಂದ್ರನತ್ತ ಮಾನವರನ್ನು ಕಳುಹಿಸಲು ಸಜ್ಜಾದ ನಾಸಾ.
- ಐತಿಹಾಸಿಕ ಆರ್ಟೆಮಿಸ್-2 ಕಾರ್ಯಾಚರಣೆಗೆ ದಿನಗಣನೆ ಆರಂಭ.
- 54 ವರ್ಷಗಳ ಬಳಿಕ ಮಾನ ಚಂದ್ರನ ನೆಲಕ್ಕೆ ಮುತ್ತಿಡುವುದನ್ನು ನೋಡುವುದೇಗೆ?

**ಉಡಾವಣಾ ಸಿದ್ಧತೆಗಳು ಭರ್ಜರಿ**



### ಇತಿಹಾಸ ಪುನರಾವರ್ತನೆ

1972ರಲ್ಲಿ ನಡೆದ ಅಪೊಲೊ 17 ಮಿಷನ್ ನಂತರ ಇದೇ ಮೊದಲ ಬಾರಿಗೆ ಮಾನವಸಹಿತ ನೌಕೆಯೊಂದು ಚಂದ್ರನತ್ತ ಪಯಣ ಬೆಳೆಸುತ್ತಿರುವುದು ಇಡೀ ವಿಜ್ಞಾನ ಲೋಕದಲ್ಲಿ ಭಾರೀ ಸಂಚಲನ ಮೂಡಿಸಿದೆ. 2026ರ ಏಪ್ರಿಲ್ 1ರಂದು ಈ ಐತಿಹಾಸಿಕ ಉಡಾವಣೆಗೆ ಮುಹೂರ್ತ ನಿಗದಿ ಆಗಿದ್ದು, ನಾಸಾದ ಅತಿ ದೊಡ್ಡ ರಾಕೆಟ್ ಸ್ಪೇಸ್ ಲಾಂಚ್ ಸಿಸ್ಟಮ್ ಅಂದರೆ SLS ಮೂಲಕ ಓರಾಯನ್ ನೌಕೆ ನಭಕ್ಕೆ ಚಿಮ್ಮಲಿದೆ. ಕೆನಡಿ ಸ್ಪೇಸ್ ಸೆಂಟರ್‌ನ ಲಾಂಚ್ ಕಾಂಪ್ಲೆಕ್ಸ್ 39ಬಿ ನಿಂದ ಉಡಾವಣೆ ನಡೆಯಲಿದೆ.

### ಲೈವ್ ಕವರೇಜ್

ಏಪ್ರಿಲ್ 1, 2026ರಂದು ನಡೆಯಲಿರುವ ನಾಸಾ ಆರ್ಟೆಮಿಸ್-2 ಮಿಷನ್ ಉಡಾವಣೆಯನ್ನು (ಅಧಿಕೃತ ಸ್ಟ್ರೀಮಿಂಗ್ ಸೇವೆ), ಚಾನೆಲ್, ನಾಸಾದ ಅಧಿಕೃತ ವೆಬ್ ಸೈಟ್ ಮತ್ತು ಅಧಿಕೃತ ನಾಸಾ ಅಪ್ಲಿಕೇಶನ್‌ನಲ್ಲಿ ಲೈವ್ ಸ್ಟ್ರೀಮ್‌ಗಳ ಮೂಲಕ ವೀಕ್ಷಿಸಬಹುದಾಗಿದೆ. ವರದಿಯು ಪೂರ್ವ-ಉಡಾವಣಾ ಬ್ರೀಫಿಂಗ್‌ಗಳು ಕೂಡ ಇರಲಿವೆ ಎಂಬುದು ಇಲ್ಲಿ ಉಲ್ಲೇಖನೀಯ.


# ಸಂಜಯ್ ದತ್ ಹೊಸ ಸಿನಿಮಾ ಆಖ್ರಿ ಸವಾಲ್

ಬಾಲಿವುಡ್‌ನ ಹಿರಿಯ ನಟ ಸಂಜಯ್ ದತ್ ಸದ್ಯ ಯಶಸ್ಸಿನ ಅಲೆಯಲ್ಲಿ ತೇಲುತ್ತಿದ್ದಾರೆ. ಆದಿತ್ಯ ಧರ್ ನಿರ್ದೇಶನದ ಬ್ಲಾಕ್‌ಬಸ್ಟರ್ 'ಧುರಂಧರ್: ದಿ ರಿವೆಂಜ್' ಸಿನಿಮಾದಲ್ಲಿ ಚೌಧರಿ ಅಸ್ಲಂ ಎಂಬ ಪಾತ್ರದ ಮೂಲಕ ಸಂಜಯ್ ದತ್ ಅವರು ಪ್ರೇಕ್ಷಕರ ಮನಗೆದ್ದಿದ್ದಾರೆ. ಈಗ ಅವರು ತಮ್ಮ ಮುಂದಿನ ಸಿನಿಮಾ ಬಗ್ಗೆ ಮಾಹಿತಿ ನೀಡಿದ್ದಾರೆ. 'ಆಖ್ರಿ ಸವಾಲ್' ಎಂಬುದು ಈ ಸಿನಿಮಾದ ಹೆಸರು. ಚಿತ್ರತಂಡವು ಸಾಮಾಜಿಕ ಜಾಲತಾಣಗಳಲ್ಲಿ ಫಸ್ಟ್‌ಲುಕ್ ಪೋಸ್ಟರ್ ಬಿಡುಗಡೆ ಮಾಡಿದೆ.



ಬಿಡುಗಡೆಯಾಗಿರುವ ಪೋಸ್ಟರ್‌ನಲ್ಲಿ ಸಂಜಯ್ ದತ್ ಅತ್ಯಂತ ಗಂಭೀರವಾಗಿ ಕಾಣಿಸಿಕೊಂಡಿದ್ದಾರೆ. ವಿಶೇಷವೆಂದರೆ, ಅವರ ಈ ಭಾವಚಿತ್ರವು ಒಂದು ಬೃಹತ್ ಪ್ರಶ್ನಾರ್ಥಕ ಚಿಹ್ನೆಯ ಒಳಗೆ ಅಡಕವಾಗಿದೆ. ಪೋಸ್ಟರ್‌ನ ವಿನ್ಯಾಸ ಗಮನ ಸೆಳೆದಿದೆ. ಕಥೆಯ ಬಗ್ಗೆ ಕೌತುಕ ಮೂಡಿಸಿದೆ. ಪೋಸ್ಟರ್‌ನಲ್ಲಿರುವ 'The Question India Never Stopped Asking' ಎಂಬ ಟ್ಯಾಗ್‌ಲೈನ್ ಸಖತ್ ಹೈಲೈಟ್ ಆಗಿದೆ.

'ಆಖ್ರಿ ಸವಾಲ್' ಚಿತ್ರವನ್ನು ನಿಖಿಲ್ ನಂದಾ, ಧನರಾಜ್ ನಾಥ್ವಾನಿ ಮತ್ತು ಸ್ವತಃ ಸಂಜಯ್ ದತ್ ನಿರ್ಮಿಸುತ್ತಿದ್ದಾರೆ. ಈ ಚಿತ್ರವು 'ನಿಖಿಲ್ ನಂದಾ ಮೋಷನ್ ಪಿಕ್ಚರ್ಸ್' ಮತ್ತು 'ನೀಮ್ ಟ್ರೀ ಎಂಟರ್‌ಟೈನ್‌ಮೆಂಟ್' ಬ್ಯಾನರ್ ಅಡಿಯಲ್ಲಿ ಮೂಡಿಬರುತ್ತಿದೆ. ಸಂಜಯ್ ದತ್ ಅವರೊಂದಿಗೆ ಚಿತ್ರದಲ್ಲಿ ಅಮಿತ್ ಸಾಧ್, ನಮಾಶಿ ಚಕ್ರವರ್ತಿ, ಸಮೀರಾ ರೆಡ್ಡಿ, ತ್ರಿದಾ ಚೌಧರಿ ಮತ್ತು ನೀತು ಚಂದ್ರ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಪೋಸ್ಟರ್‌ನಲ್ಲಿ 'ಆಖ್ರಿ ಸವಾಲ್' ಸಿನಿಮಾದ ಬಿಡುಗಡೆ ದಿನಾಂಕದ ಬಗ್ಗೆಯೂ ಮಾಹಿತಿ ಹಂಚಿಕೊಳ್ಳಲಾಗಿದೆ. ಈ ಚಿತ್ರವು 2026ರ ಮೇ 15ರಂದು ವಿಶ್ವಾದ್ಯಂತ ಚಿತ್ರಮಂದಿರಗಳಲ್ಲಿ ತೆರೆಕಾಣಲಿದೆ. ಕಥೆಯ ಬಗ್ಗೆ ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ. ಆದರೆ ಇದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕುರಿತು



# ಆಪರೇಷನ್ ಸಿಂಧೂರ್ ಸಿನಿಮಾ ಘೋಷಣೆ

'ಏಪ್ರಿಲ್ 22, 2025' ಈ ದಿನವನ್ನು ಪ್ರತಿಯೊಬ್ಬ ಭಾರತೀಯನು ಮರೆಯಲು ಸಾಧ್ಯವೇ ಇಲ್ಲ. ಬರೋಬ್ಬರಿ 25 ಭಾರತೀಯ ಪ್ರವಾಸಿಗರನ್ನು ಬಲಿ ತೆಗೆದುಕೊಂಡ ಪೆಹಲ್ಗಾಮ್ ಭಯೋತ್ಪಾದಕ ದಾಳಿಯನ್ನು ನೆನಪು ಮಾಡಿಕೊಂಡರೆ ಈಗಲೂ ಪ್ರತಿಯೊಬ್ಬ ಭಾರತೀಯರ ರಕ್ತ ಕುದಿಯುತ್ತೆ. ಆ ಬಳಿಕ ಈ ದಾಳಿಗೆ ಪ್ರತೀಕಾರವಾಗಿ ಭಾರತೀಯ ಸೇನೆಯು 'ಆಪರೇಷನ್ ಸಿಂಧೂರ್' ದ ಮೂಲಕ ತಕ್ಕ ಉತ್ತರವನ್ನು ನೀಡಿದರು. ಪಾಕಿಸ್ತಾನದ ಸೊಕ್ಕನ್ನಡಗಿಸಿದರು. ಈ ಎಲ್ಲಾ ಘಟನೆಗಳ ಬಗ್ಗೆ ನಮಗೆ ಮಾಹಿತಿಗಳಷ್ಟೇ ಗೊತ್ತು. ಆದರೆ ಇದೀಗ ಈ ಘಟನೆಗಳು ದೃಶ್ಯವಾದರೆ ಹೇಗಿರುತ್ತೆ, ಅಲ್ವಾ ಕಾಶ್ಮೀರ ಫೈಲ್ಸ್ ಚಿತ್ರದ ಮೂಲಕ ಕಾಶ್ಮೀರದ ಪಂಡಿತರ ಕಥೆಯನ್ನು ಹೇಳಿದ ನಿರ್ದೇಶಕ ವಿವೇಕ್ ಅಗ್ನಿಹೋತ್ರಿ, ಇದೀಗ ಆಪರೇಷನ್ ಸಿಂಧೂರ್ ಸಿನಿಮಾವನ್ನು ಘೋಷಣೆ ಮಾಡಿದ್ದಾರೆ.

ಹೌದು, ಪೆಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿಯ ಭೀಕರತೆ ಎಷ್ಟರ ಮಟ್ಟಿಗೆ ಇತ್ತು ಎಂಬುದರ ಬಗ್ಗೆ ನಾವು ಕೇಳಿದ್ದೇವೆ. ಖುಷಿ ಖುಷಿಯಿಂದ ಸಮಯ ಕಳೆಯಲೆಂದು ತಮ್ಮ ಕುಟುಂಬದೊಂದಿಗೆ ಹೋದ ಒಟ್ಟು 26 ಜನ ಭಾರತೀಯ ಪ್ರವಾಸಿಗರನ್ನು ಕೊಲ್ಲಲಾಯಿತು. ಈ ದಾಳಿ ಇಡೀ ಭಾರತವೇ ನಡುಗಿಸಿತ್ತು. ಆ ಬಳಿಕ ಈ ದಾಳಿಗೆ ಪ್ರತಿಯಾಗಿ ನಮ್ಮ ಭಾರತ 'ಆಪರೇಷನ್ ಸಿಂಧೂರ್' ಕಾರ್ಯಾಚರಣೆ ಮಾಡಿತು. ಇದೀಗ ಈ ಘಟನೆ ಆಧರಿಸಿ 'ಆಪರೇಷನ್ ಸಿಂಧೂರ್' ಸಿನಿಮಾ ಮಾಡಲಾಗುವುದು ಎಂದು ಖ್ಯಾತ ನಿರ್ದೇಶಕ ವಿವೇಕ್ ಅಗ್ನಿಹೋತ್ರಿ ತಿಳಿಸಿದ್ದಾರೆ.

ಈ ಬಗ್ಗೆ ತಮ್ಮ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಿರುವ ವಿವೇಕ್ ಅಗ್ನಿಹೋತ್ರಿ ಈ ರೀತಿಯಾಗಿ ಬರೆದುಕೊಂಡಿದ್ದಾರೆ. ಭೂಷಣ್ ಕುಮಾರ್, ನಾನು ಆಪರೇಷನ್ ಸಿಂಧೂರ್‌ಗಾಗಿ ಸೇರಿದ್ದೇವೆ.

ಇದು ಉಪಖಂಡದಲ್ಲಿ ಭದ್ರತೆಯನ್ನು ಮರುವ್ಯಾಖ್ಯಾನಿಸಿದ ಮತ್ತು ಪಾಕಿಸ್ತಾನದ ಪರಮಾಣು ವಂಚನೆಯನ್ನು ಬಹಿರಂಗಪಡಿಸಿದ ಕಥೆಯಾಗಿದೆ. ಈ ಚಿತ್ರವು ಲೆಫ್ಟಿನೆಂಟ್ ಜನರಲ್ ಕೆಜೆಎಸ್ 'ಟೈನಿ' ಧಿಲ್ಲೋನ್ ಅವರ ಆಪರೇಷನ್ ಸಿಂಧೂರ್: ದಿ ಅನ್‌ಟೋಲ್ಡ್ ಸ್ಟೋರಿ ಆಫ್ ಇಂಡಿಯಾಸ್ ಡೀಪ್ ಸ್ಟ್ರೈಕ್ಸ್ ಇನ್‌ಸೈಡ್ ಪಾಕಿಸ್ತಾನ್ ಪುಸ್ತಕವನ್ನು ಆಧರಿಸಿದೆ ಎಂದು ಹೇಳಿದ್ದಾರೆ.

ಇದು ಕೆಲವು ಕಥೆಗಳನ್ನು ಆಯ್ಕೆ ಮಾಡಲಾಗುವುದಿಲ್ಲ. ಅವು ನಿಮ್ಮನ್ನು ಆಯ್ಕೆ ಮಾಡುತ್ತವೆ. ಆಪರೇಷನ್ ಸಿಂಧೂರ್ ಅಂತಹ ಒಂದು ಕಥೆ – ಇದನ್ನು ಪ್ರಾಮಾಣಿಕತೆ, ಧೈರ್ಯ ಮತ್ತು ಜವಾಬ್ದಾರಿಯಿಂದ ಹೇಳಬೇಕಾಗುತ್ತದೆ. ಇದು ಕೇವಲ ಚಲನಚಿತ್ರವಲ್ಲ, ಇದು ಒಂದು ಬಹಿರಂಗಪಡಿಸುವಿಕೆ. ಒಂದು ರಾಷ್ಟ್ರವು ಅಂತಹ ದೊಡ್ಡ ಘಟನೆಗಳ ಮೂಲಕ ಹೋದಾಗ, ಅವುಗಳನ್ನು ಸತ್ಯವಾಗಿ ದಾಖಲಿಸುವುದು ಮುಖ್ಯವಾಗುತ್ತದೆ ಎಂದು ಭೂಷಣ್ ಕುಮಾರ್ ತಿಳಿಸಿದ್ದಾರೆ.

# ತೆಲುಗು ಚಿತ್ರರಂಗಕ್ಕೆ ಗುಡ್ ಬೈ



ರಾಮ್ ಗೋಪಾಲ್ ವರ್ಮಾ ಒಂದು ಕಾಲದ ಭಾರತದ ಸ್ಟಾರ್ ಸಿನಿಮಾ ನಿರ್ದೇಶಕ. ಸಿನಿಮಾ ನಿರ್ದೇಶನದಲ್ಲಿ ಹೊಸ ಮಾದರಿ ಹಾಕಿಕೊಟ್ಟ ನಿರ್ದೇಶಕ. ರಾಮ್ ಗೋಪಾಲ್ ವರ್ಮಾ ಹಾದಿ ಹಿಡಿದು ಬಂದ ಹಲವರು ಇಂದು ಸ್ಟಾರ್ ನಿರ್ದೇಶಕರುಗಳಾಗಿದ್ದಾರೆ. ಆದರೆ ಕಳೆದ ಕೆಲ ವರ್ಷಗಳಿಂದ ರಾಮ ಗೋಪಾಲ್ ವರ್ಮಾ ಸಿನಿಮಾಗಳಿಗಿಂತಲೂ ವಿವಾದಗಳಿಂದ, ಟ್ವೀಟ್‌ಗಳಿಂದ, ಸಂದರ್ಶನಗಳಿಂದ ಮಾತ್ರವೇ ಸದ್ದು, ಸುದ್ದಿ ಮಾಡುತ್ತಿದ್ದಾರೆ. ಆದರೆ ಇದೀಗ ವರ್ಮಾ, ಹೊಸ ಘೋಷಣೆ ಮಾಡಿದ್ದು, ತಾವು ತೆಲುಗು ಚಿತ್ರರಂಗವನ್ನು ತ್ಯಜಿಸುತ್ತಿರುವುದಾಗಿ ಘೋಷಿಸಿದ್ದಾರೆ. ಗಲಾಟ ಪ್ಲಸ್ ಯೂಟ್ಯೂಬ್ ಚಾನೆಲ್ಲಿನ ಸಂದರ್ಶನಗಳಲ್ಲಿ ಈ ಬಗ್ಗೆ ಮಾತನಾಡಿರುವ ರಾಮ್ ಗೋಪಾಲ್ ವರ್ಮಾ, ಆದಿತ್ಯ ಧರ್ ನಿರ್ದೇಶನದ 'ಧುರಂಧರ್ 2' ಚಿತ್ರವು ಬಿಡುಗಡೆಯಾದ ನಂತರ ತಮ್ಮ ಆಲೋಚನಾ ಕ್ರಮವೇ ಬದಲಾಗಿದೆ ಎಂದಿದ್ದಾರೆ. ಈ ಚಿತ್ರದ ಮೇಕಿಂಗ್ ಮತ್ತು ರಿಯಲಿಸ್ಟಿಕ್ ಶೈಲಿಯನ್ನು ಕಂಡು ಬೆರಗಾಗಿರುವ ಅವರು, 'ಈ ಚಿತ್ರವು ಭಾರತೀಯ ಚಿತ್ರರಂಗದ ಹಳೆಯ ಸೂತ್ರಗಳನ್ನು ಧೂಳೀಪಟ ಮಾಡಿದೆ' ಎಂದು ಬಣ್ಣಿಸಿದ್ದಾರೆ ಅತಿರಂಜಿತ ಆಕ್ಷನ್, ಅತಿಯಾದ ಹೀರೋಗಿರಿ ಇರುವ ಸಿನಿಮಾಗಳ ಕಾಲ ಮುಗಿದಿದೆ ಎಂದು ಆರ್‌ಜಿವಿ ಅಭಿಪ್ರಾಯಪಟ್ಟಿದ್ದಾರೆ.

# ನನ್ನನ್ನು ಡಾ. ಶ್ರೀಲೀಲಾ ಎಂದು ಕರೆಯೋದು ಬೇಡ!

ಚಿತ್ರರಂಗದಲ್ಲಿ, ಹೆಚ್ಚಿನ ಜನರು ಗ್ಲಾಮರ್ ಮತ್ತು ಸ್ಟಾರ್‌ಡಮ್ ನಂತರ ತಮ್ಮ ಅಧ್ಯಯನವನ್ನು ಬದಿಗಿಡುತ್ತಾರೆ. ಅದರಲ್ಲೂ ವೈದ್ಯಕೀಯ ನಂತಹ ಕಠಿಣ ಕೋರ್ಸ್ ಅನ್ನು ಹಗಲು ರಾತ್ರಿ ಶೂಟಿಂಗ್ ಮಧ್ಯೆಯೂ ನಿಭಾಯಿಸಿಕೊಂಡು ಹೋಗುವುದು ಬಲು ಕಷ್ಟ. ಆದರೆ ದಕ್ಷಿಣ ಭಾರತೀಯ ಚಿತ್ರರಂಗದಲ್ಲಿ ಅತಿ ಚಿಕ್ಕ ವಯಸ್ಸಿನಲ್ಲಿ ಅಪಾರ ಕ್ರೇಜ್ ಗಳಿಸಿರುವ ಕನ್ನಡತಿ ನಟಿ ಶ್ರೀಲೀಲಾ ಈ ಅಪರೂಪದ ಸಾಧನೆಯನ್ನು ಸಾಧಿಸಿದ್ದಾರೆ. ಒಂದೆಡೆ, ಸ್ಟಾರ್ ಹೀರೋಗಳೊಂದಿಗೆ ದೊಡ್ಡ, ದೊಡ್ಡ ಪ್ರಾಜೆಕ್ಟ್‌ಗಳನ್ನು ಮಾಡುತ್ತಿದ್ದರೆ ಮತ್ತೊಂದೆಡೆ, ಎಂಬಿಬಿಎಸ್ ಪೂರ್ಣಗೊಳಿಸಿ ವೈದ್ಯೆಯಾಗುವ ಕನಸನ್ನು ನನಸಾಗಿಸಿದ್ದಾರೆ. ಇತ್ತೀಚೆಗೆ, ಶ್ರೀ ಲೀಲಾ ತಮ್ಮ ಕೋರ್ಸ್ ಅನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದರು ಮತ್ತು ಎಲ್ಲರಿಗೂ ಸ್ಫೂರ್ತಿ ನೀಡಿದರು. ಇತ್ತೀಚೆಗೆ ನಟಿ ತಮ್ಮ ವೃತ್ತಿಜೀವನ ಮತ್ತು ಉಸ್ತಾದ್ ಭಗತ್ ಸಿಂಗ್ ಚಿತ್ರದ ಬಗ್ಗೆ ಮಾತನಾಡಿದ್ದಾರೆ. ಶ್ರೀಲೀಲಾ ಏಪ್ರಿಲ್ 2023 ರಲ್ಲಿ ಪವನ್ ಕಲ್ಯಾಣ್ ಅವರ ಉಸ್ತಾದ್ ಭಗತ್ ಸಿಂಗ್ ಚಿತ್ರದ ಸೆಟ್‌ಗೆ ಎಂಟ್ರಿ ಕೊಟ್ಟಿದ್ದರು. ಆದಾಗ್ಯೂ, ವಿವಿಧ ಕಾರಣಗಳಿಂದಾಗಿ, ಈ ಚಿತ್ರದ ಚಿತ್ರೀಕರಣವು 2025 ರ ಆರಂಭದವರೆಗೆ ಮುಂದುವರೆಯಿತು, ಸ್ವಲ್ಪ ಸಮಯ ತೆಗೆದುಕೊಂಡಿತು. ಈ ದೀರ್ಘ ಅಂತರದಲ್ಲಿ ಅವರಿಗೆ ಅನೇಕ ಆಫರ್‌ಗಳು ಬಂದಿದ್ದರೂ, ಪವನ್ ಕಲ್ಯಾಣ್ ಅವರ ಚಿತ್ರಕ್ಕೆ ಈಗಾಗಲೇ ಮಾತು ಕೊಟ್ಟಿದ್ದರಿಂದ ಅವರು ಬೇರೆ ಎಲ್ಲಾ ಆಫರ್‌ಗಳನ್ನು ನಿಧಾನವಾಗಿ ತಿರಸ್ಕರಿಸಿದರು. ಜೊತೆಗೆ ಇಷ್ಟು ದಿನ ಕಾಯುತ್ತಿರುವುದಕ್ಕೆ ತನಗೆ ಯಾವುದೇ ವಿಷಾದವಿಲ್ಲ ಎಂದು ಶ್ರೀ ಲೀಲಾ ಸ್ಪಷ್ಟಪಡಿಸಿದರು. ಈ ವಿಧಾನವು ಮೊದಲಿಗೆ ಶ್ರೀ ಲೀಲಾ ಅವರಿಗೆ ಸ್ವಲ್ಪ ಆಶ್ಚರ್ಯ ಮೂಡಿಸಿತು. ನಂತರ ಅದು ನಟಿಯಾಗಿ ತನಗೆ ಸಾಕಷ್ಟು ಸ್ವಾತಂತ್ರ್ಯವನ್ನು ನೀಡಿತು ಎಂದು ಶ್ರೀ ಲೀಲಾ ಹೇಳಿದರು.



ಸಿನಿ ವಾಹಿನಿ

# ಧುರಂಧರ್ 2 ಚಿತ್ರತಂಡದ ಸಾಧನೆಗೆ ಭೇಷ್

**ಮುಕ್ತ ಕಂಠದಿಂದ ಶ್ಲಾಘಿಸಿದ ಅಮಿರ್**

ಬಾಲಿವುಡ್‌ನ ಮಿಸ್ಟರ್ ಪರ್ಫೆಕ್ಷನಿಸ್ಟ್ ಆಮಿರ್ ಖಾನ್ ಅವರು ಬಾಕ್ಸ್ ಆಫೀಸ್‌ನಲ್ಲಿ ಧೂಳೆಬ್ಬಿಸುತ್ತಿರುವ 'ಧುರಂಧರ್: ದಿ ರಿವೆಂಜ್' ಚಿತ್ರದ ಯಶಸ್ಸನ್ನು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ. ಪ್ರೇಕ್ಷಕರಿಂದ ಪಡೆಯುತ್ತಿರುವ ಅಭೂತಪೂರ್ವ ಬೆಂಬಲಕ್ಕೆ ಆಮಿರ್ ಖಾನ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಈ ಸಿನಿಮಾದಲ್ಲಿ ರಣವೀರ್ ಸಿಂಗ್, ಸಾರಾ ಅರ್ಜುನ್, ಸಂಜಯ್ ದತ್, ಆರ್. ಮಾಧವನ್, ಅರ್ಜುನ್ ರಾಮ್‌ಪಾಲ್, ರಾಕೇಶ್ ಬೇಡಿ ಮುಂತಾದವರು ಪ್ರಮುಖ ಪಾತ್ರಗಳನ್ನು ಮಾಡಿದ್ದಾರೆ. ಅನೇಕ ಸೆಲೆಬ್ರಿಟಿಗಳು ಹೊಗಳುತ್ತಿದ್ದಾರೆ.

ಸುದ್ದಿ ಸಂಸ್ಥೆ ಎಎನ್‌ಐ ಜೊತೆಗಿನ ಸಂವಾದದಲ್ಲಿ ಮಾತನಾಡಿದ ಆಮಿರ್ ಖಾನ್, ಇತ್ತೀಚಿನ ದಿನಗಳಲ್ಲಿ ಧುರಂಧರ್ ಫ್ರಾಂಚೈಸಿ ಒಂದು ಪ್ರಬಲ ವಾಣಿಜ್ಯ ಶಕ್ತಿಯಾಗಿ ಹೊರಹೊಮ್ಮುತ್ತಿರುವುದನ್ನು ಒಪ್ಪಿಕೊಂಡರು. ವಿಶೇಷವೆಂದರೆ, ಆಮಿರ್ ಅವರು ಈ ಎರಡನೇ ಭಾಗವನ್ನು ಇನ್ನೂ ನೋಡಿಲ್ಲದಿದ್ದರೂ, ಚಿತ್ರದ ಬಗ್ಗೆ ಕೇಳಿಬರುತ್ತಿರುವ ಸಕಾರಾತ್ಮಕ ಪ್ರತಿಕ್ರಿಯೆಗಳು ಅವರಿಗೆ ಸಂತಸ ತಂದಿವೆ.

'ಧುರಂಧರ್ 2 ಸಿನಿಮಾ ಅದ್ಭುತವಾಗಿ ಪ್ರದರ್ಶನ ಕಾಣುತ್ತಿದೆ ಎಂದು ನಾನು ನಂಬುತ್ತೇನೆ. ನಾನು ಇನ್ನೂ ಚಿತ್ರವನ್ನು ನೋಡಿಲ್ಲ. ಆದರೆ ಎಲ್ಲೆಡೆ ಚಿತ್ರದ ಬಗ್ಗೆ ಕೇವಲ ಪ್ರಶಂಸೆಗಳೇ ಕೇಳಿಬರುತ್ತಿವೆ. ಧುರಂಧರ್ 1 ಮತ್ತು ಈಗ ಧುರಂಧರ್ 2 ಎರಡೂ ಸಿನಿಮಾಗಳು ಅಸಾಧಾರಣ ಯಶಸ್ಸು ಕಂಡಿವೆ. ಚಿತ್ರತಂಡಕ್ಕೆ ನನ್ನ ಕಡೆಯಿಂದ ಆಲ್ ದಿ ಬೆಸ್ಟ್' ಎಂದು ಆಮೀರ್ ಖಾನ್ ಶುಭ ಹಾರೈಸಿದ್ದಾರೆ. 'ಧುರಂಧರ್: ದಿ ರಿವೆಂಜ್' ಚಿತ್ರವು ಚಿತ್ರಮಂದಿರಗಳಲ್ಲಿ ಯಶಸ್ವಿಯಾಗಿ ಮುನ್ನುಗ್ಗುತ್ತಿದೆ. ಚಿತ್ರದ ರನ್‌ಟೈಮ್ (ಅವಧಿ) ಸ್ವಲ್ಪ ಹೆಚ್ಚಿದ್ದರೂ ಸಹ, ಪ್ರೇಕ್ಷಕರನ್ನು ಹಿಡಿದಿಟ್ಟುಕೊಳ್ಳುವಲ್ಲಿ ಸಿನಿಮಾ ಯಶಸ್ವಿಯಾಗಿದೆ ಎಂದು ಟ್ರೇಡ್ ಅನಾಲಿಸ್ಟ್‌ಗಳು ಅಭಿಪ್ರಾಯಪಟ್ಟಿದ್ದಾರೆ. ಮೊದಲ ಭಾಗದ ಜನಪ್ರಿಯತೆ ಎರಡನೇ ಭಾಗಕ್ಕೆ ದೊಡ್ಡ ಮಟ್ಟದ ಮೈಲೇಜ್ ನೀಡಿದೆ.

ಆಮಿರ್ ಖಾನ್ ಅವರ ವೃತ್ತಿಜೀವನದ ಬಗ್ಗೆ ನೋಡುವುದಾದರೆ, ಅವರು ನಿರ್ಮಾಣ ಮಾಡುತ್ತಿರುವ 'ಲಾಹೋರ್ 1947' ಸಿನಿಮಾದ ಮೇಲೆ ಅಭಿಮಾನಿಗಳಿಗೆ ನಿರೀಕ್ಷೆ ಹೆಚ್ಚಿದೆ. ರಾಜ್‌ಕುಮಾರ್ ಸಂತೋಷಿ ನಿರ್ದೇಶನದ ಈ ಚಿತ್ರವು ಆಗಸ್ಟ್ 13ರಂದು ತೆರೆಕಾಣಲಿದೆ. ಈ ಚಿತ್ರದಲ್ಲಿ ಸನ್ನಿ ಡಿಯೋಲ್, ಶಬಾನಾ ಆಜ್ಮಿ, ಪ್ರೀತಿ ಜಿಂಟಾ, ಅಲಿ ಫಜಲ್ ಸೇರಿದಂತೆ ದೊಡ್ಡ ತಾರಾಬಳಗವೇ ಇದೆ.



# ಬೆನ್ ಡಕೆಟ್‌ಗೆ 2 ವರ್ಷ ನಿಷೇಧದ ಭೀತಿ

2026 ರ ಐಪಿಎಲ್ ಸೀಸನ್ ಆರಂಭಕ್ಕೂ ಮುನ್ನವೇ ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಆಘಾತ ಎದುರಾಗಿದೆ. ತಂಡದ ಸ್ಟಾರ್ ಆರಂಭಿಕ ಆಟಗಾರ ಇಂಗ್ಲೆಂಡ್‌ನ ಬೆನ್ ಡಕೆಟ್ ಟೂರ್ನಿಯಿಂದ ತಮ್ಮ ಹೆಸರನ್ನು ಹಿಂಪಡೆದುಕೊಂಡಿದ್ದಾರೆ. ಲೀಗ್ ಆರಂಭಕ್ಕೆ ಕೆಲವೇ ದಿನಗಳು ಬಾಕಿ ಇರುವಾಗ ಡಕೆಟ್ ಅವರ ಈ ನಿರ್ಧಾರ ಡೆಲ್ಲಿ ಕ್ಯಾಪಿಟಲ್ಸ್ ಸಿದ್ಧತೆಗಳಿಗೆ ಅಡ್ಡಿಯಾಗಿದೆ.

ಇಂಗ್ಲಿಷ್ ಪತ್ರಿಕೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಐಪಿಎಲ್‌ನಿಂದ ಹಿಂದೆ ಸರಿಯುತ್ತಿರುವ ಘೋಷಣೆ ಮಾಡಿರುವ ಡಕೆಟ್ ಎಲ್ಲರನ್ನೂ ಅಚ್ಚರಿಗೊಳಿಸಿದ್ದಾರೆ. ಕಳೆದ ಡಿಸೆಂಬರ್‌ನಲ್ಲಿ ನಡೆದ ಹರಾಜಿನಲ್ಲಿ ಎಡಗೈ ಬ್ಯಾಟ್ಸ್‌ಮನ್ ಬೆನ್ ಡಕೆಟ್ ಅವರನ್ನು ದೆಹಲಿ ಕ್ಯಾಪಿಟಲ್ಸ್ 2 ಕೋಟಿ ರೂ. ಮೂಲ ಬೆಲೆಗೆ ಖರೀದಿಸಿತು. ಇದು ಡಕೆಟ್ ಅವರ ಐಪಿಎಲ್‌ನ ಚೊಚ್ಚಲ ಆವೃತ್ತಿಯಾಗುವುದರ ಜೊತೆಗೆ ಅವರಿಗೆ ಆಡುವ ಅವಕಾಶವೂ ಸಿಗುವುದರಲ್ಲಿತ್ತು. ಇನ್ನು ಐಪಿಎಲ್‌ನಿಂದ ಹಿಂದೆ ಸರಿಯುವುದಕ್ಕೆ ಕಾರಣವನ್ನು ನೀಡಿರುವ ಬೆನ್ ಡಕೆಟ್, ತಮ್ಮ ಅಂತರರಾಷ್ಟ್ರೀಯ ವೃತ್ತಿಜೀವನದತ್ತ ಗಮನ ಹರಿಸುವ ನಿರ್ಧಾರವನ್ನು ಉಲ್ಲೇಖಿಸಿ, ಇಂಗ್ಲೆಂಡ್ ಟೆಸ್ಟ್ ತಂಡದಲ್ಲಿ ತಮ್ಮ ಸ್ಥಾನವನ್ನು ಉಳಿಸಿಕೊಳ್ಳುವ ಸಲುವಾಗಿ ಐಪಿಎಲ್ 2026 ರಿಂದ ಹಿಂದೆ ಸರಿಯುತ್ತಿರುವುದಾಗಿ ತಿಳಿಸಿದ್ದಾರೆ. ಡಕೆಟ್ ತಮ್ಮ ನಿರ್ಧಾರಕ್ಕಾಗಿ ಡೆಲ್ಲಿ ಕ್ಯಾಪಿಟಲ್ಸ್ ಬಳಿ ಕ್ಷಮೆಯಾಚಿಸಿ, ಮುಂಬರುವ ವರ್ಷಗಳಲ್ಲಿ ಮತ್ತೆ ಡೆಲ್ಲಿ ಪರ ಆಡುವುದಾಗಿ ತಿಳಿಸಿದ್ದಾರೆ. ಆದರೆ ಇದೀಗ, ಡಕೆಟ್ ಅವರ ಈ ನಿರ್ಧಾರದಿಂದಾಗಿ, ಬಿಸಿಸಿಐ ಅವರ ವಿರುದ್ಧ ಕ್ರಮ ಕೈಗೊಳ್ಳುವುದು ಖಚಿತವಾಗಿದೆ. 2024ರ ಐಪಿಎಲ್ ನಂತರ ವಿದೇಶಿ ಆಟಗಾರರ ಈ ಹಠಾತ್ ಹಿಂತೆಗೆತವನ್ನು ತಡೆಯಲು ಬಿಸಿಸಿಐ ಪ್ರಮುಖ ನಿರ್ಧಾರವನ್ನು ತೆಗೆದುಕೊಂಡಿತ್ತು. ಅದರಂತೆ ಹರಾಜಿನಲ್ಲಿ ಮಾರಾಟವಾದ ನಂತರ ಐಪಿಎಲ್‌ನಿಂದ ತನ್ನ ಹೆಸರನ್ನು ಹಿಂತೆಗೆದುಕೊಂಡ ಯಾವುದೇ ವಿದೇಶಿ ಆಟಗಾರನನ್ನು ಮುಂದಿನ ಎರಡು ವರ್ಷಗಳ ಕಾಲ ಐಪಿಎಲ್‌ನಿಂದ ನಿಷೇಧಿಸುವ ನಿರ್ಧಾರಕ್ಕೆ ಬಂದಿದೆ. ಈ ಅವಧಿಯಲ್ಲಿ, ಆಟಗಾರನು ತನ್ನ ಹೆಸರನ್ನು ಹರಾಜಿಗೆ ಸಲ್ಲಿಸಲು ಸಾಧ್ಯವಿಲ್ಲ. ಹೀಗಾಗಿ ಡಕೆಟ್ ಮುಂದಿನ 2 ವರ್ಷಗಳ ಕಾಲ ಐಪಿಎಲ್‌ನಲ್ಲಿ ಆಡಲು ಸಾಧ್ಯವಾಗುವುದಿಲ್ಲ.

ಬೆನ್ ಡಕೆಟ್‌ಗೂ ಮೊದಲು ಇಂಗ್ಲೆಂಡ್ ಏಕದಿನ, ಟಿ20 ತಂಡದ ನಾಯಕ ಹ್ಯಾರಿ ಬ್ರೂಕ್ ಕೂಡ ಇದೇ ರೀತಿಯ ಕೆಲಸ ಮಾಡಿದ್ದರು.

2025ರ ಸೀಸನ್ ಪ್ರಾರಂಭವಾಗುವ ಮೊದಲು ಬ್ರೂಕ್ ಐಪಿಎಲ್‌ನಿಂದ ತನ್ನ ಹೆಸರನ್ನು ಹಿಂತೆಗೆದುಕೊಂಡಿದ್ದರು. ಇದರ ಪರಿಣಾಮವಾಗಿ ಅವರನ್ನು ಪ್ರಸ್ತುತ ಐಪಿಎಲ್‌ನಿಂದ ನಿಷೇಧಿಸಲಾಗಿದೆ. ಇದೀಗ ಅವರು 2028 ರ ಐಪಿಎಲ್‌ನಲ್ಲಿ ಆಡಬಹುದಾಗಿದೆ. ಮತ್ತೊಂದೆಡೆ, ಬೆನ್ ಡಕೆಟ್ 2029ರ ಸೀಸನ್ ವರೆಗೂ ಐಪಿಎಲ್‌ನಲ್ಲಿ ಆಡಲು ಕಾಯಬೇಕಿದೆ.



# ಗುಡ್‌ನ್ಯೂಸ್ ಕೊಟ್ಟ ಅನನ್ಯಾ

ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್ ಆರ್‌ಸಿಬಿ ತಂಡವನ್ನು ಆದಿತ್ಯ ಬಿರ್ಲಾ ಗ್ರೂಪ್‌ಗೆ ಮಾರಾಟ ಮಾಡಿದೆ. 16,706 ಕೋಟಿ ರೂಪಾಯಿಗೆ ಈ ಡೀಲ್ ಪೂರ್ಣಗೊಂಡಿದೆ. ಟೈಮ್ಸ್ ಆಫ್ ಇಂಡಿಯಾ ಸೇರಿ ಕೆಲವು ಕಂಪನಿಗಳು ಆದಿತ್ಯಾ ಬಿರ್ಲಾಗೆ ಬೆಂಬಲ ನೀಡಿವೆ. ಈ ಮಧ್ಯೆ ಆರ್‌ಸಿಬಿ ಹೆಸರು ಬದಲಾವಣೆ ಆಗುವ ಬಗ್ಗೆ ಸಾಕಷ್ಟು ಚರ್ಚೆ ನಡೆಯುತ್ತಿತ್ತು. ಈ ವದಂತಿ ಬಗ್ಗೆ ಅನನ್ಯಾ ಬಿರ್ಲಾ ಸ್ಪಷ್ಟನೆ ಕೊಟ್ಟಿದ್ದಾರೆ. ಈ ವಿಷಯಗಳಿಗೆ ಅಭಿಮಾನಿಗಳು ಖುಷಿಪಟ್ಟಿದ್ದಾರೆ.

ರಾಯಲ್ ಚಾಲೆಂಜ್ ವಿಸ್ಕಿ ಬ್ರ್ಯಾಂಡ್ ಪ್ರಚಾರ ಮಾಡುವ ಉದ್ದೇಶದಿಂದ ವಿಜಯ್ ಮಲ್ಯ ಅವರು ರಾಯಲ್ ಚಾಲೆಂಜ್ ಹೆಸರನ್ನು ಆಯ್ಕೆ ಮಾಡಿಕೊಂಡಿದ್ದರು. ಮಲ್ಯ ಬೆಂಗಳೂರಿನವರು. ಹೀಗಾಗಿ, ತಂಡದಲ್ಲಿ ಬೆಂಗಳೂರು ಬರುವಂತ ನೋಡಿಕೊಂಡರು. ಎಲ್ಲವನ್ನೂ ಸೇರಿಸಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಎಂದು ಹೆಸರು ಇಟ್ಟರು. ಈ ಹೆಸರು ಈಗ ಅಭಿಮಾನಿಗಳ ಜೊತೆ ಭಾವನಾತ್ಮಕವಾಗಿ ಕನೆಕ್ಟ್ ಆಗಿದೆ. ಹೀಗಾಗಿ, ಹೆಸರು ಬದಲಿಸಿದಂತೆ ಕೋರಿಕೊಳ್ಳಲಾಗುತ್ತಿತ್ತು. ಇದಕ್ಕೆ ಅನನ್ಯಾ ಪಾಸಿಟಿವ್ ಆಗಿ ಪ್ರತಿಕ್ರಿಯಿಸಿದ್ದಾರೆ.

ಈ ಮೊದಲು ಆರ್‌ಸಿಬಿ ಹೆಸರು ಇಂಗ್ಲಿಷ್ ಅಲ್ಲಿ 'Royal Challengers Bangalore' ಎಂದಿತ್ತು. ನಂತರ Bangalore ಅನ್ನು Bengaluru ಎಂದು ಬದಲಿಸಲಾಯಿತು. ಈ ಮೂಲಕ ಕನ್ನಡಿಗರ ಭಾವನೆಗೆ ಬೆಲೆ ಕೊಡಲಾಗಿತ್ತು. ಈಗ ಹೊಸ ಮಾಲೀಕರು ತಂಡ ಬದಲಿಸುತ್ತಾರೆ ಎಂದು ಹೇಳಲಾಗುತ್ತಾ ಬರಲಾಯಿತು. ಆದರೆ, ಆ ರೀತಿ ಇಲ್ಲ ಎಂಬುದು ಅನನ್ಯಾ ಸ್ಪಷ್ಟನೆ. 'ಆರ್‌ಸಿಬಿ ಹೆಸರು ಬದಲಾಗುವುದಿಲ್ಲ' ಎಂದು ಇನ್‌ಸ್ಟಾ ಸ್ಟೇಟಸ್‌ನಲ್ಲಿ ಹಂಚಿಕೊಳ್ಳಲಾದ ಪೋಸ್ಟ್ ಅನ್ನು ಅನನ್ಯಾ ಶೇರ್ ಮಾಡಿಕೊಂಡಿದ್ದಾರೆ. ಈ ಮೂಲಕ ಅಭಿಮಾನಿಗಳ ಆತಂಕವನ್ನು ದೂರ ಮಾಡಿದ್ದಾರೆ. ಇಷ್ಟು ದಿನಗಳಿಂದ ಹೈದರಾಬಾದ್ ತಂಡ ಮಾಲೀಕರಾದ ಕಾವ್ಯಾ ಮಾರನ್ ಸಾಕಷ್ಟು ಮಿಂಚುತ್ತಿದ್ದು, ಇದೀಗ ಅವರಿಗೆ ಕಾಂಪಿಟೇಷನ್ ಕೊಡೋಕೆ ಅನನ್ಯಾ ಬಂದಿದ್ದಾರೆ ಎಂಬ ಮಾತು ಕೂಡ ಕೇಳಿ ಬಂದಿದೆ. ಹೀಗಾಗಿ, ಆರ್‌ಸಿಬಿ ಪಂದ್ಯಗಳಲ್ಲಿ ಇವರು ಹೈಲೈಟ್ ಆಗಬಹುದು.



# ಕೆಕೆಆರ್ ತಂಡದಲ್ಲಿ ರಿಂಕುಗೆ ಮಹತ್ವದ ಜವಾಬ್ದಾರಿ

2026 ರ ಐಪಿಎಲ್ ಆರಂಭಕ್ಕೂ ಮುನ್ನ ಕೋಲ್ಕತ್ತಾ ನೈಟ್ ರೈಡರ್ಸ್ ತಂಡವು ರಿಂಕು ಸಿಂಗ್ ಅವರನ್ನು ತಂಡದ ಉಪನಾಯಕನನ್ನಾಗಿ ನೇಮಿಸಿದೆ. ಇದು ಕೆಕೆಆರ್ ಜೊತೆಗಿನ ರಿಂಕು ಸಿಂಗ್ ಅವರ ಎಂಟನೇ ಸೀಸನ್ ಆಗಿದ್ದು, ಈಗ ಅವರನ್ನು ಉಪನಾಯಕನನ್ನಾಗಿ ನೇಮಿಸಲಾಗಿದೆ. 2018 ರಲ್ಲಿ ಕೋಲ್ಕತ್ತಾ ನೈಟ್ ರೈಡರ್ಸ್ ಪರ ಐಪಿಎಲ್‌ಗೆ ಪಾದಾರ್ಪಣೆ ಮಾಡಿದ ರಿಂಕು ಸಿಂಗ್ ಆ ಆವೃತ್ತಿಯಲ್ಲಿ ಕೇವಲ 29 ರನ್ ಗಳಿಸಿದರು. ಮುಂದಿನ ಆವೃತ್ತಿಯಲ್ಲಿ ರಿಂಕು ಕಲೆಹಾಕಿದ್ದು, ಕೇವಲ 37 ರನ್ ಗಳಿಸಿದರು. ಅದರ ನಂತರದ ಆವೃತ್ತಿಯಲ್ಲಿ ಕೇವಲ ಒಂದು ಪಂದ್ಯವನ್ನು ಆಡಿದ್ದ ಅವರು, 11 ರನ್ ಗಳಿಸಿದ್ದರು. ಆದರೆ ಇಂದು ಕೋಲ್ಕತ್ತಾ ತಂಡದಲ್ಲಿ ಅತ್ಯುತ್ತಮ ಫಿನಿಷರ್ ಆಗಿದ್ದು, ಉಪನಾಯಕನಾಗಿ ಆಯ್ಕೆಯಾಗಿದ್ದಾರೆ.

ರಿಂಕು ಸಿಂಗ್ ಐಪಿಎಲ್‌ನಲ್ಲಿ ಇದುವರೆಗೆ 51 ಇನ್ನಿಂಗ್ಸ್‌ಗಳನ್ನಾಡಿದ್ದು, 1099 ರನ್ ಗಳಿಸಿದ್ದಾರೆ. ಅವರ ಬ್ಯಾಟಿಂಗ್ ಸರಾಸರಿ 30.52 ಆಗಿದ್ದು, ಅವರ ಸ್ಟ್ರೈಕ್ ರೇಟ್ 145 ಕ್ಕಿಂತ ಹೆಚ್ಚಾಗಿದೆ. ರಿಂಕು ಇದುವರೆಗೆ ನಾಲ್ಕು ಅರ್ಧಶತಕಗಳನ್ನು ಬಾರಿಸಿದ್ದು, ಐಪಿಎಲ್‌ನಲ್ಲಿ 56 ಸಿಕ್ಸರ್‌ಗಳು ಮತ್ತು 87 ಬೌಂಡರಿಗಳನ್ನು ಬಾರಿಸಿದ್ದಾರೆ. ದೀರ್ಘಕಾಲದಿಂದ ಕೆಕೆಆರ್ ತಂಡದಲಿರುವ ರಿಂಕು ಸಿಂಗ್‌ಗೆ ಕೆಕೆಆರ್ ಇಂತಹ ಮಹತ್ವದ ಜವಾಬ್ದಾರಿಯನ್ನು ವಹಿಸಿದೆ. ರಿಂಕು ಸಿಂಗ್ ಕಠಿಣ ಸಮಯವನ್ನು ಎದುರಿಸುತ್ತಿರುವ ಸಮಯದಲ್ಲಿ ಅವರನ್ನು ಕೆಕೆಆರ್ ತಂಡದ ಉಪನಾಯಕನನ್ನಾಗಿ ನೇಮಿಸಲಾಗಿದೆ.

ಅವರು ಇತ್ತೀಚೆಗೆ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ತಮ್ಮ ತಂದೆಯನ್ನು ಕಳೆದುಕೊಂಡರು. ಇದಲ್ಲದೆ, ಅವರು 2026 ರ ಟಿ20 ವಿಶ್ವಕಪ್‌ನಲ್ಲಿ ಕಳಪೆ ಪ್ರದರ್ಶನ ನೀಡಿ, ಆಡಿದ ಐದು ಪಂದ್ಯಗಳಲ್ಲಿ ಕೇವಲ 23 ರನ್ ಗಳಿಸಿದ್ದರು.

ಹೀಗಾಗಿ ದಕ್ಷಿಣ ಆಫ್ರಿಕಾ ವಿರುದ್ಧದ ಸೋಲಿನ ನಂತರ, ಅವರನ್ನು ಆಡುವ ಹನ್ನೊಂದರ ಬಳಗದಿಂದ ಕೈಬಿಡಲಾಯಿತು. ಇದರಿಂದ ಅವರು ವಿಶ್ವಕಪ್ ಫೈನಲ್‌ನಲ್ಲಿಯೂ ಆಡಲಿಲ್ಲ. ರಿಂಕು ಸಿಂಗ್ ಪ್ರಸ್ತುತ ಫಾರ್ಮ್‌ನಲ್ಲಿಲ್ಲ, ಆದರೆ ಕೋಲ್ಕತ್ತಾ ಅವರ ಮೇಲೆ ವಿಶ್ವಾಸವನ್ನು ತೋರಿಸಿದೆ. ಆದ್ದರಿಂದ, ಈ ಜವಾಬ್ದಾರಿಯನ್ನು ಹೊತ್ತುಕೊಂಡು ಉತ್ತಮ ಪ್ರದರ್ಶನ ನೀಡುವ ಒತ್ತಡ ಅವರ ಮೇಲಿರುತ್ತದೆ.



# ತಂಡ ಸೇರಿಕೊಂಡ ಕಮ್ಮಿನ್ಸ್

**ಆರ್‌ಸಿಬಿ ವಿರುದ್ಧದ ಪಂದ್ಯ**

2026 ರ ಐಪಿಎಲ್ ಆರಂಭಕ್ಕೆ ಇನ್ನು ಕೆಲವೇ ಗಂಟೆಗಳು ಬಾಕಿ ಉಳಿದಿವೆ. ಟೂರ್ನಿಯ ಮೊದಲ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಸನ್‌ರೈಸರ್ಸ್ ಹೈದರಾಬಾದ್ ಬೆಂಗಳೂರಿನಲ್ಲಿ ಮುಖಾಮುಖಿಯಾಗುತ್ತಿವೆ. ಆದಾಗ್ಯೂ ಈ ಪಂದ್ಯಕ್ಕೂ ಮುನ್ನ ಸನ್‌ರೈಸರ್ಸ್ ತಂಡಕ್ಕೆ ಸಿಹಿ ಸುದ್ದಿಯೊಂದು ಸಿಕ್ಕಿದೆ. ತಂಡದ ನಾಯಕ ಪ್ಯಾಟ್ ಕಮ್ಮಿನ್ಸ್ ಟೂರ್ನಿ ಆರಂಭಕ್ಕೂ ಮುನ್ನ ತಂಡವನ್ನು ಕೂಡಿಕೊಂಡಿದ್ದಾರೆ.

ವಾಸ್ತವವಾಗಿ ಇಂಜುರಿಯಿಂದ ಬಳಲುತ್ತಿದ್ದ ಪ್ಯಾಟ್ ಕಮ್ಮಿನ್ಸ್, ಐಪಿಎಲ್‌ನ ಆರಂಭಿಕ ಪಂದ್ಯಗಳಿಗೆ ಅಲಭ್ಯರಾಗಲಿದ್ದಾರೆ ಎಂದು ವರದಿಯಾಗಿತ್ತು. ಅದರಂತೆ ಫ್ರಾಂಚೈಸಿ ಕೂಡ ಇಶಾನ್ ಕಿಶನ್‌ಗೆ ತಂಡದ ನಾಯಕತ್ವದ ಜವಾಬ್ದಾರಿವಹಿಸಿತ್ತು. ಇದೀಗ ಪ್ಯಾಟ್ ಕಮ್ಮಿನ್ಸ್ ತಂಡ ಸೇರಿಕೊಂಡಿದ್ದಾರೆಯಾದರೂ ಇಶಾನ್ ಕಿಶನ್ ನಾಯಕನಾಗಿ ತಂಡವನ್ನು ಮುನ್ನಡೆಸುತ್ತಾರೆ ಎಂದು ಆಡಳಿತ ಮಂಡಳಿ ಸ್ಪಷ್ಟಪಡಿಸಿದೆ.

ಇದಕ್ಕೆ ಕಾರಣವೂ ಇದ್ದು, ಪ್ಯಾಟ್ ಕಮ್ಮಿನ್ಸ್ ತಂಡವನ್ನು ಕೂಡಿಕೊಂಡಿದ್ದರೂ ಅವರು ಆರಂಭಿಕ ಕೆಲವು ಪಂದ್ಯಗಳಲ್ಲಿ ಆಡುವುದಿಲ್ಲ ಎಂದು ವರದಿಯಾಗಿದೆ. ಅಂದರೆ ಕಮ್ಮಿನ್ಸ್ ಆರ್‌ಸಿಬಿ ವಿರುದ್ಧದ ಉದ್ಘಾಟನಾ ಪಂದ್ಯದಲ್ಲೂ ಕಣಕ್ಕಿಳಿಯುವುದಿಲ್ಲ. ಸದ್ಯ ಸಿಕ್ಕಿರುವ ಮಾಹಿತಿ ಪ್ರಕಾರ, ಕಮ್ಮಿನ್ಸ್ ಐಪಿಎಲ್ ದ್ವಿತೀಯಾರ್ಧದಿಂದ ಕಣಕ್ಕಿಳಿಯಲಿದ್ದಾರೆ. ಹಾಗಿದ್ದಲ್ಲಿ, ಕಮ್ಮಿನ್ಸ್ ಕನಿಷ್ಠ ಮೊದಲ 7–8 ಪಂದ್ಯಗಳನ್ನು ತಪ್ಪಿಸಿಕೊಳ್ಳುವುದು ಖಚಿತ. ಇದಕ್ಕೆ ಪೂರಕವಾಗಿ ಇತ್ತೀಚೆಗೆ 'ಬಿಸಿನೆಸ್ ಆಫ್ ಸ್ಪೋರ್ಟ್ಸ್' ಎಂಬ ಪಾಡ್‌ಕ್ಯಾಸ್ಟ್‌ನಲ್ಲಿ ಮಾತನಾಡಿದ್ದ ಪ್ಯಾಟ್ ಕಮ್ಮಿನ್ಸ್, ನಾನು ಬೆನ್ನು ನೋವಿನಿಂದ ಚೇತರಿಸಿಕೊಳ್ಳುತ್ತಿದ್ದೇನೆ. ಹೀಗಾಗಿ ಐಪಿಎಲ್‌ನ ಆರಂಭಿಕ ಪಂದ್ಯಗಳಲ್ಲಿ ಆಡುವುದಿಲ್ಲ. ಲೀಗ್‌ನ ದ್ವಿತೀಯಾರ್ಧದಲ್ಲಿ ಆಡುವ ಸಾಧ್ಯತೆಯಿದೆ ಎಂದಿದ್ದರು. ಹಾಗೆಯೇ ದ್ವಿತೀಯಾರ್ಧದಲ್ಲಿ ತಂಡ ಕೂಡಿಕೊಂಡು ಫೈನಲ್‌ನಲ್ಲಿ ಆಡುವ ಭರವಸೆಯನ್ನೂ ವ್ಯಕ್ತಪಡಿಸಿದ್ದರು. ಪ್ಯಾಟ್ ಕಮ್ಮಿನ್ಸ್ ಅವರ ಈ ಹೇಳಿಕೆಯಿಂದ ಐಪಿಎಲ್‌ನ ಮೊದಲಾರ್ಧದಲ್ಲಿ ಆಡುವುದಿಲ್ಲ ಎಂಬುದು ಸ್ಪಷ್ಟವಾಗಿದೆ. ಹೀಗಾಗಿ ಇಶಾನ್ ಕಿಶನ್ ನಾಯಕನಾಗಿ ತಂಡವನ್ನು ಮುನ್ನಡೆಸಲಿದ್ದಾರೆ. ದೇಶೀಯ ಕ್ರಿಕೆಟ್‌ನಲ್ಲಿ ನಾಯಕನಾಗಿ ಅದ್ಭುತ ದಾಖಲೆ ಹೊಂದಿರುವ ಇಶಾನ್ ಕಿಶನ್, ನಾಯಕನಾಗಿ 29 ಪಂದ್ಯಗಳಲ್ಲಿ ತಂಡವನ್ನು ಮುನ್ನಡೆಸಿದ್ದು, 24 ಪಂದ್ಯಗಳಲ್ಲಿ ತಂಡವನ್ನು ಗೆಲುವಿನ ದಡ ಮುಟ್ಟಿಸಿದ್ದಾರೆ.



Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966